ಕೇತಾರಗೌಳ—ರೂಪಕ

ನಿನ್ನನೊಲಿಸಿಕೊಳ್ಳಲಾರೆನು ॥ ಪ ॥ ನಿನ್ನನೊಲಿಸಲಾರೆ ಹರಿಯೆ । ಎನ್ನ ಯತ್ನದಾರ್ಢ್ಯದಿಂದ । ಇನ್ನು ಕರುಣದಿಂದ ನೀನೇ । ಎನ್ನನು ಕೈಪಿಡಿಯಬೇಕು ॥ ಅ. ಪ ॥ ಅರಸನಾದ ಪರೀಕ್ಷಿತನ । ತೆರದಿ ಶ್ರವಣ ಮಾಡಲರಿಯೆ; ॥ ವರಶುಕಮುನಿಯಂದದೊಳಾ । ದರದಿಂ ಕೀರ್ತಿಸುವದನರಿಯೆನು ॥ ೧ ॥ ದನುಜಕುವರನಂತೆ ನಿನ್ನ । ಮನದಿ ನೆನೆಯಲಾರೆನೋ; ॥ ವನಜನಿಲಯೆಯಂತೆ ಪದವ। ನನಿಶವು ಸೇವಿಸುವದನರಿಯೆನು ; ॥ ೨ ॥ ಪೃಥುಮಹಾರಾಜನಂತೆ ಪೂಜೆಮಾಡಲರಿಯೆನು; । ಹಿತದೊಳಗಕ್ರೂರನಂತೆ । ಸತತವು ನಿನಗೆರಗುವದರಿಯೆನು ;॥೩॥ ಹನುಮನಂತೆ ದಾಸ್ಯಮಾಡಿ । ಘನತೆ ಪಡೆಯಲಾರೆನೊ; ॥ ಮನದೊಳು ನರನಂತೆ ಗೆಳೆಯ । ತನದೊಳು ನಾ ವರ್ತಿಸಲಾರೆನೊ; ॥ ೪ ॥ ಬಲಿಯಂದದಿ ಆತ್ಮನಿವೇ । ದನವ ಮಾಡಲಾರೆನೋ; ॥ ನಲವಿಂದಲಿ ಚಿದ್ರೂಪದ । ನೆಲೆಯನು ನಾ ಕಾಣುವದರಿಯೆನೊ ॥ ೫ ॥ —(ಭಕ್ತಿ. ಗೀ)

ಈಪ್ರಕಾರ ನಿರಭಿಮಾನದಿಂದ ದ್ರೌಪದಿ ಮಾಡಿದ ಪ್ರಾರ್ಥನೆ—

ರ॥ ದೀನಬಂಧು ದೀನಬಂಧು ॥ ಪ ॥ ದೀನಬಂಧು ನೀನೇಗತಿ । ಎಂದು ನಂಬಿದೆನು ಬಂದು ಸಲಹೊ ಗೋವಿಂದ ಮುನಿವಂದ್ಯ ॥ ಅ. ಪ ॥ ಕೃಷ್ಣ ಕೇಶವಾ ಕಾಳಿಂಗಮರ್ದನ । ದುಷ್ಟಕುಲಾಂತಕ ಧರಣೀಪಾಲಕ । ಕಷ್ಟಕಲುಷಹರ ಕಮಲಾಮನೋಹರ । ಸೃಷ್ಟಿಗೊಡೆಯ ಪರಮೇಷ್ಠಿವಂದ್ಯ ಹರಿ । ಯಾದವರಾಯಾ ರಾಧಾಪ್ರಿಯ। ಬಾಧೆಯ ಪರಿಹಾರವ ಮಾಡಜನಯ್ಯ । ನೀ ದಯಮಾಡೈ ನಿರ್ದಯವೇಕೈ । ವೇದವೇದ್ಯನೆ ವರದಾಯಕನೆ । ಅಂಗಜಜನಕಾ ಯದುಕುಲತಿಲಕಾ । ಭಂಗವೇಕೆನಗೆ ಭಕ್ತಾಧೀನ । ಸಂಗರಶೂರ ಶುಭಶೃಂಗಾರ । ದೀನೋದ್ಧಾರ ಬಲುಹಮ್ಮಿರ । ಕರಿರಾಜನ ಕರುಣದಿ ರಕ್ಷಿಸಿದೆ । ದುರುಳಕಂಸನ ನೀ ಶಿಕ್ಷಿಸಿದೆ । ಕರೆಯೆ ಬಂದು ಪ್ರಹ್ಲಾದನ ಪೊರೆದೆ । ತರಳಗೊಲಿದು ಸುಸ್ಥಿರಪದವಿತ್ತೆ । ನಾರಾಯಣ ನಮೋ ನರಹರಿ ನಮೊ ನಮೊ । ಶ್ರೀರಾಮನೆ ನಮೊ ಸಿರಿಯರಸನೆ ನಮೊ । ನಾರದನುತ ನಗಧಾರಿಯೆ ನಮೊ ನಮೊ । ಮಾರಮಣನೆ ಮೈದೋರಿ ರಕ್ಷಿಸೈ । ಭೂರಿ ಹಸಿವೆಯಿಂ ಪಾರುವರನ್ನವ । ತಾರೆನಲಿಕ್ಕದೆ ದಾರಿದ್ರ್ಯದಿ ಬಲು । ಘೋರನರಕವನು ಸೇರುವ ಯೆಮ್ಮನು । ಪಾರುಗಾಣಿಸೈ ಮಾರಮಣನೆ ಯದು । ವೀರ, ಭಕ್ತಮಂದಾರ ಸಿಂಧುಗಂ । ಭೀರ ದಯಾಪರ ಯಾರಿಲ್ಲವೊ ಗತಿ । ಶೌರಿಯೆ ತವಕದಿ ತೋರು ನಿನ್ನ ಪದ । ಸಾರಸವನು ದಯೆದೋರಿ । ದುರಿತಾರಿ । ಧೀರನೆ ಸುರಗಿರಿಯೋರಿದ ಮಹಿಮನೆ । ಬಾರೈ । ದಯದೋರೈ ॥ —(ದಾ)

ಇದರ ಪರಿಣಾಮವೇನಾಯಿತೆಂದರೆ—

ಶ್ಲೋ॥ ಪಾರ್ಶ್ವಸ್ಥಾಂ ಶಯನೇ ತ್ಯಕ್ತ್ವಾ ರುಕ್ಮಿಣೀಂ ಕೇಶವಃ ಪ್ರಭುಃ ।
ತತ್ರಾಜಗಾಮ ತ್ವರಿತೋ ಹ್ಯಚಿಂತ್ಯಗತಿರೀಶ್ವರಃ ॥ —(ಸಂ. ಭಾರ)

ಅ॥ ಯಾರಿಗೂ ತಿಳಿಯದಂಥ ಮಹಿಮೆಯುಳ್ಳ ಪ್ರಭುವಾದ ಕೇಶವನು ಮಗ್ಗುಲಲ್ಲಿದ್ದ ರುಕ್ಮಿಣಿಯನ್ನು ಹಾಸಿಗೆಯಲ್ಲಿ ಬಿಟ್ಟು ಬೇಗ ಅಲ್ಲಿಗೆ ಬಂದನು.

ದ್ರೌಪದಿಯು ಇನ್ನೂ ಕಣ್ಣು ಮುಚ್ಚಿಕೊಂಡು ಧ್ಯಾನಿಸುತ್ತಲೇ ಇರಲು—

ಸಾ॥ ತಂಗಿ, ಕಣ್ಣ ಬಿಡು; ಕರೆದೆ ಯೇಕೆ ಪೇಳ್? । ಭೃಂಗಾಲಕೆ, ನಾ ಬಂದೆ; ॥ ಹಿಂಗದೀಗ ನೀನೆನ್ನಯ ಹಸಿವೆಯ । ನಿಂಗಿಸು; ಕೇಳುವೆ ಮುಂದೆ ॥

ಆಗ ಎಚ್ಚರಗೊಂಡು ನೋಡಿ ಪಾಂಚಾಲಿಯು ಆನಂದದಿಂದೆರಗಿ ಸ್ತುತಿಸುತ್ತಾಳೆ—

ಯರಕುಲಕಾಂಬೋದಿ—ಝಂಪೆ

ಪಾದವೆಚ್ಚರಿಕೆ! । ಪಾದವೆಚ್ಚರಿಕೆ; ॥ ಶ್ರೀಪಾದಾವಧಾನ ಗೋಪಾಲ ಚಿಕದೇವ ಚಿಕದೇವ ಭೂಪಾಲ ಪರಿಪಾಲ ॥ ಪ ॥ ಸಿರಿರಾಣಿಯೊಲವಿಂದ । ಸೇರಿ ಯೊತ್ತುವ ಪಾದ, । ಪುರುಳೆನಿಸಿ ವೇದದೊಳು ಪೊಳೆವ ಪಾದ, ॥ ಸರಸಿಜಧ್ವಜ ಶಂಖಚಕ್ರಲಾಂಛಿತಪಾದ, । ಪರಮಯೋಗೀಶ್ವರರು ಭಾವಿಸುವ ಪಾದ ॥೧॥ ಅವನಿಯಾಕಾಶಗಳನಳೆದು ಪೆರ್ಚಿದ ಪಾದ, । ದಿವಿಜನದಿಯನು ಪಡೆದ ದಿವ್ಯ ಪಾದ, ॥ ಶಿವನ ಪಾವನಗೈದು ಶಿವನೆನಿಸಿದೀ ಪಾದ, । ಕವಿದು ಕಲ್ಲಿಗೆ ಜೀವಕಳೆ ಯಿತ್ತ ಪಾದ, ॥ ೨ ॥ ಪರಿದು ಯಮುನಾತಟದಿ ಬಣ್ಣವೇರಿದ ಪಾದ, । ಪರಿ ಪರಿಯ ಭಯವ ಪರಿಹರಿಪ ಪಾದ, ॥ ತಿರುಮಲಾರ್ಯರಿಗೆ ಕುಲದೇವರೆನಿಸಿದ ಪಾದ ! ನರಪತಿಗೆ ತರತರದಿ ನಲವೀವ ಪಾದ ॥ ೩ ॥ —(ಗೀ.ಗೋ)

ಆಗ ಕೃಷ್ಣನಾಡಿದ ಮಾತು—

ದಿಂ॥ ಹಸಿವ ನೀಗಲ್ಮಾತುಗಳು ಸಾಲವೀಗ; । ಒಸೆದು ನೀಡಾಹಾರವನು ತಂಗಿ, ಬೇಗ ; ।

ಅದಕ್ಕೆ ಪಾಂಚಾಲಿಯ ಉತ್ತರ—

ದಿಂ॥ ಉಸಿರಲೇನಾ ಪಾತ್ರೆಯನು ತೊಳೆದೆನೀಗ; । ಅಶನವಿನ್ನೆಲ್ಲಿಂ ಬಹುದು ಭೋಗಿಭೋಗ ? ॥

ಆಗ ಕೃಷ್ಣನು ಹೇಳಿದ್ದು

ಶ್ಲೋ॥ ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ । ತದಹಂ ಭಕ್ತ್ಯುಪಹೃತಮಶ್ನಾಮಿ ಪ್ರಯತಾತ್ಮನಃ॥ —(ಭ. ಗೀ)

ಅ॥ ಎಲೆಯಾಗಲಿ ಹೂವಾಗಲಿ ಹಣ್ಣಾಗಲಿ ನೀರಾಗಲಿ ಭಕ್ತಿಯಿಂದ ಯಾರು ನನಗೆ ಕೊಡುತ್ತಾರೊ ಶುದ್ಧಬುದ್ಧಿಯುಳ್ಳವರಾಗಿ ಭಕ್ತಿಯಿಂದ ಅವರು ತಂದುಕೊಟ್ಟಂಥ ಅದನ್ನು ನಾನು ತಿನ್ನುತ್ತೇನೆ.

ಎಂದು ಹೇಳಿ—

ಕೀ॥ ತರಿಸಿ ನೋಡೆ ಹರಿಯಕ್ಷಯ ಪಾತ್ರೆಯು । ನಿರಲು ಪತ್ರೆಯೊಂದದರಲ್ಲಿ॥ ಭಗದಿ ತಿಂದನಾಗಲೆ ದೂರ್ವಾಸರ । ನೆರವಿ ತೇಗಲಾ ಕ್ಷಣದಲ್ಲಿ ॥

ಕೃಷ್ಣನು ತೃಪ್ತನಾದದ್ದನ್ನು ನೋಡಿ ದ್ರೌಪದಿಯು ತನ್ನ ಧನ್ಯತೆಯನ್ನು ತೋರಿಸುತ್ತಾಳೆ—

ಸಾವೇರಿ—ಆದಿತಾಳ

ನಿನ್ನ ನೋಡಿ ನಾ ಧನ್ಯನಾದೆ । ಪನ್ನಗೇಂದ್ರಶಯನಾ ॥ ಪ ॥ ಸನ್ನುತಾಂಗ, ಪಾ । ವನ್ನಚರಿತ, ಗುಣ । ರನ್ನ, ಪರಾತ್ಪರ, ಚಿನ್ಮಯಮೂರುತಿ ॥ ಅ. ಪ ॥ ಮಂದರಗಿರಿಧರ, ಮಧುಮುರದೈತ್ಯವಿದಾರ, । ಶೂರ, । ಇಂದಿರೇಶ, ಯೋಗೀಂದ್ರಹೃದಯಸಂಚಾರ, ಧೀರ, ॥ ತಂದೆತಾಯಿಗುರುಬಂಧುಬಳಗ ನೀ । ನೆಂದು ನಂಬಿದೆನೊ ಸಿಂಧುಶಯನ, ಹರಿ, ॥ ೧ ॥ ದೇವದೇವ, ಯದುಕುಲಕಲಶಾಂಬುಧಿಸೋಮಾ, । ರಾಮಾ, । ಪಾವನಾಂಗ, ಫಣಿರಾಜಶಯನ, ಜಿತಕಾಮಾ, । ಭೀಮಾ, ॥ ಮಾನವರ ನಿನ್ನಡಿದಾವರೆಗಳ ಬಿಡ । ದಾವಾಗಲು ಭಜಿಸುವದಕಿದೇ ಫಲ ॥ ೨ ॥ ರಂಗನಾಯಕ, ರಥಾಂಗಹಸ್ತ, ಜಗದೀಶಾ, । ಶ್ರೀಶ । ಪುಂಗವ, ಕೀರ್ತಿತರಂಗ, ಸುರಾಚಲವಾಸಾ, ಈಶಾ, ॥ ಅಂಗಜಪಿತ, ಭವಭಂಗ, ಸತ್ಕೃಪಾ । ಪಾಂಗದೊಳೀಕ್ಷಿಸಿ ಮಂಗಳವೀವನೆ ॥ ೩ ॥—(ದಾ)

ಇಷ್ಟರಲ್ಲಿ ಪಾಂಡವರು ಬಂದು ನಮಸ್ಕರಿಸಿದ್ದಾರೆ. ಆಗ ಕರೆದ ಕಾರಣವೇನೆಂದು ಕೃಷ್ಣನು ಕೇಳಿದ್ದಕ್ಕೆ ದ್ರೌಪದಿಯ ಉತ್ತರ.

ಕಾನಡಾ—ಆದಿತಾಳ

ಮಾಯಕಾರ ಶ್ರೀಹರಿ, । ಮಾನ ರಕ್ಷಿಸೈ ಸಾರಿ ॥ ಪ ॥ ತೋಯಜಾಕ್ಷ ನಿನ್ನ ಸೇರಿ । ಈಯವಸ್ಥೆಯೇ ಶೌರಿ, ॥ ಅ. ಪ ॥ ಕರೆದರೆ ನಾನಿಲ್ಲಿ ಅರಿತೆ ನೀನೆಂತಲ್ಲಿ ? ॥ ಅರುಹಲೇಕೆನ್ನ ಮನ । ದಿರವನು ನಿನ್ನಲ್ಲಿ? ॥ ೧ ॥ ಬೀತಿಹ ತರುಶುಕ । ಜಾತಕೆ ಪಣ್ಗಳ ॥ ನೋತು ನೀಡುವದುಂಟೆ ? । ಯಾತೆರವೆಮ್ಮಬಾಳು ॥ ಪೊಡವಿಯ ದೇವರ್ಗೀಗ । ನುಡಿದಂತೆ ಅನ್ನವ ॥ ಕೊಡದಿರೆ ಶಾಪದಿ । ಸುಡದಿಹರೇನಯ್ಯಾ ? ॥ ೩ ॥ ಹರನಂತೆ ಶಿಷ್ಯರ । ವೆರಸಿ ದೂರ್ವಾಸನು ॥ ಬರುವನಕ್ಷಯಪಾತ್ರೆ । ಬರಿದಾಯಿತೀದಿನ ॥ ೪ ॥ ಸುರಗಿರಿವಾಸ, ಭೂ । ಸುರರನ್ನು ಸಂತೈಸೊ ॥ ಶರಣಾಗತರನಾ । ದರಿಸಿದ ದೇವನೆ, ॥ ೫ ॥ —(ದಾ)

ಆಗ ಕೃಷ್ಣನು ಹೇಳಿದ್ದು:—

ಕೀ॥ ಕಳುಹು ಭೀಮನನು ಕರೆಸಾ ಮುನಿಯನು । ಗಳಿಲನೆನಲು ಭೀಮನ್ಬೇಗ ॥ ತಳೆದಣ್ಣನನುಜ್ಞೆಯ ಗದೆಯೊಂದಿಗೆ । ತಳರ್ದನವರ ಕೂಗುತ್ತಾಗ ॥

ಭೀಮನು ಹೋಗಿ ನೋಡಿದಾಗ ಆ ಮುನಿಸಮೂಹವಿದ್ದ ರೀತಿ—

ಷ॥ ಬಗೆಬಗೆಯ ಭಕ್ಷ್ಯಭೋ । ಜ್ಯಗಳ ನುಂಡಂತಾಗಿ । ಹಗರಣವಿದಾ

ಯ್ತೆಂದು ಯೋಚಿಸುತ್ತ ॥ ಮಿಗಿಲುಬ್ಬಸಂಗೊಂಡ । ಬಗೆಯಿಂದ ಮಳಲ ದಿ : ಬ್ಬಗಳೊಳಗೆ ಹೊರಳಾಡುತಿರ್ದರತ್ತ ॥

ಆ ಕಾಲದ ಅವರ ಯೋಚನೆ:—

ಭೈರವಿ—ಅಟತಾಳ

ಏನಿದು ! ಏನಿದು ! ಈ ಆಶ್ಚರ್ಯ ।। ಪ ।। ಊಟಕಿಕ್ಕಿದರಾರೊ ? ಉಂಡ ಜ್ಞಾಪಕವಿಲ್ಲ ! । ಸಾಟಿಯಿಲ್ಲವು ಇಂದಿನೂಟಕೆ ಹರಿ ಬಲ್ಲ ॥ ೧ ॥ ಒಡ ಲೊಳಗೆ ತುಂಬಿದೆ । ಹೆಡಿಗೆ ಹೆಡಿಗೆ ಭಕ್ಷ್ಯ ॥ ಕಡುಬು ಹೋಳಿಗೆ ಅಂ । ಬೊಡೆ ಗಳ ವಾಸನೆ ॥ ೨ ॥ ಭಕ್ಷ್ಯಭೋಜ್ಯಲೇಹ್ಯ । ಚೋಹ್ಯಪಾನೀಯಗಳ್ ॥ ಕುಕ್ಷಿಯೋಳ್ತುಂಬಿತ । ಪೇಕ್ಷೆಯಿಂದಿಗೆ ಇಲ್ಲ ॥ ೩ ॥ ತಡೆಯಲಾರೆವು ಈ । ಒಡ ಲಿನುಬ್ಬಸವನು; ।। ಇಡಿದೀಗ ಶುಂಠಿಯ ಪುಡಿಯ ನೀಡುವರಿಲ್ಲ ॥ ೪ ॥ ಏಳ ಬೇಕೆಂದರೆ । ಕೋಲ ಕೊಡುವವರಿಲ್ಲ; ॥ ಪಾಲಿಸು ಸುರಗಿರಿ । ಲೋಲ ನೀ ಕೈ ಕೊಟ್ಟು ॥ ೫ ॥ —(ದಾ)

ಆಗ ಭೀಮನು ಅವರನ್ನು ಕರೆದದ್ದು—

ಬೇಹಾಗ್—ಆದಿತಾಳ

ಬರಬೇಕು; ತಡಸಾಕು; ಭೋಜನಕೆ ನೀವೀಗ ।। ಪ ।। ಬರಬೇಕು ; ತಡವಿಲ್ಲ; ನೆರೆ ಸಿದ್ಧವಿಹುದೆಲ್ಲ; । ಸೊರಗುವದು ಸಲ್ಲ; ।। ಅ. ಪ ।। ಏಳಿರಿ ಬೇಗನೆ; । ಕೇಳಿಕೊಳ್ಳುವೆ ನಿಮ್ಮ; । ತಾಳಲಾರಿರಿ ನೀವು ॥ ಹೇಳಲೇನಹುದಿನ್ನು ಕಾಲವಾಗಿಹುದನ್ನು । ಆಲಿಪುದೆನ್ನನು ।। ೧ ।।

ಭೀಮನ ಭಯಂಕರವೇಷವನ್ನು ನೋಡಿ ಶಿಷ್ಯರೆಲ್ಲರೂ ಮುಖವನ್ನು ಮರೆಮಾಡಿಕೊಳ್ಳುತ್ತಿ ರಲು ಇತ್ತ—

ಷ॥ ಅರಸ, ಕೇಳೀಚೆಯಲಿ ಮನದು । ಬ್ಬರದ, ತನುವಿನ ತಳಿತರೋಮದ । ಭರದ, ತುಷ್ಟಿಯ ಭರದಿ ತೇಗುವ, ಹಿಗ್ಗುವಳ್ಳಿಗಳ, ।। ಕೊರಳಿಗಡರುವ ಹೊಟ್ಟೆ ಗಳ, ಖುಷಿ । ವರರು ಸಹ ದೂರ್ವಾಸಮುನಿಯು । ಚ್ಚರಿಯನಾನುತ ತನ್ನೊಳರಿ ದನು ಮುರಹರನ ಬರವ॥ —(ಕ. ಭಾರ)

ಆಗ ಅವರಿಗೆ ಬಂದ ಕಲ್ಪನೆ—

ಬಿಲಹರಿ—ರೂಪಕ

ಬಂದನೇ ? ಭಗವಂತನು । ಗೋವಿಂದ ಶ್ರೀಹರಿ ॥ ಪ ॥ ಅಂದದಿಂದ ಭಜಿಸಿದವರ । ಚಂದದಿಂದೆ ಕಾಯುವವನು ।। ಅ. ಪ ।। ಜಗವನೆಲ್ಲ ಸೃಷ್ಟಿಗೈದು। ಬಗೆಯಲಂತ[illegible]ವಾಗಿ ॥ ಅಗಣಿತಗುಣಾಢ್ಯನಾಗಿ । ಬಗೆಗೆ ತೋರದಿರ್ಪ ಹರಿಯು ॥ ೧ ॥ [illegible]ಕ್ತಜನರ ದಾಸನಾಗಿ । ಭುಕ್ತಿಮುಕ್ತಿಯನೀವನಾಗಿ । ಯುಕ್ತಿ

ದೂರನಾಗಿ ಸರ್ವ । ಭೋಕ್ತೃನಾದ ಪರಮಾತುಮನು ॥ ೨ ॥ ನೆನೆದ ಕಾಲದಲ್ಲಿಯೇ ತಾ । ಮನದೊಳಾವಿರ್ಭಾವನಾಗಿ ॥ ಅನುಭವದೊಳ್ಗೆ ತೋರಿಕೊಂಬ । ಚಿನುಮಯಾತ್ಮ ಮೂರುತಿಯು ॥ ೩ ॥

ಇಷ್ಟರಲ್ಲಿ ಭೀಮನ ಗರ್ಜನೆ ಬಲವಾಗಲು ದೂರ್ವಾಸರು ಉಪಾಯಾಂತರವಿಲ್ಲದೆ ಧರ್ಮರಾಯನ ಶಾಪಕ್ಕೆ ಪಾತ್ರನಾದೇನೆಂದು ಹೆದರಿ ಸಪರಿವಾರರಾಗಿ ಬರುತ್ತಲೆ ಕೃಷ್ಣನು ನಮಸ್ಕರಿಸಲು ದೂರ್ವಾಸರು ಅವನನ್ನು ಆಲಿಂಗಿಸಿ ಹೇಳಿದ್ದು—

ಷ॥ ಯತಿಗಳ್ಗೆತರೆ ಗಾರುಹಸ್ಥ್ಯ । ಪ್ರತತಿ ವಂದಿಸ ಬೇಹುದಾ ಪದ್ಧತಿಯ ತೋರುವ ಪಂಥವೈಸಲೆ ನೀನು ವಂದಿಪುವು; ॥ ಅತಿಸಹಜವೈ ಕೃಷ್ಣ, ಕುಳ್ಳಿರು; । ಶ್ರುತಿಶಿರೋಮಣಿ, ಕುಳ್ಳಿರವ್ಯಾ । ಹತಗೃಹಸ್ಥನೆ, ಕುಳ್ಳಿರೆನುತವೆ ಮುನಿಪ ಮಂಡಿಸಿದ॥ —(ಕ. ಭಾರ.)

ಆಮೇಲೆ—

ಕೀ॥ ಎರಗಿದ ಪಾಂಡವರಿಗೆ ಮುನಿಯೆಂದನು । ಧರೆಯೊಳು ಜಯವ ಪಡೆಯಿರೆಂದು; ॥ ತರುಣಿ ದ್ರೌಪದಿಗೆ ಮುತ್ತೈದೆತನವ। ಹರಸಿದನಾದರದೊಳಗಂದು॥

ಆಗ ಧರ್ಮರಾಯನು ಅವರನ್ನು ಊಟಕ್ಕೆಬ್ಬಿಸಲು ಅವರು ಹೇಳಿದ್ದು—

ಷ॥ ಬೇರು ನೀರುಂಡಾಗ ತಣಿಯವೆ ? । ಭೂರುಹದ ಶಾಖೋಪಶಾಖೆಗ । ಳೋರಣೆಯು ನಿಜದೇಹವಂಗೋಪಾಂಗನೆಂದೆನಿಪ ॥ ಶ್ರೀರಮಣ ಸಂತುಷ್ಟನಾದರೆ । ಬೇರೆ ಭೋಜನವೆಮಗೆ ಬೇಹುದೆ ! । ಭೂರಮಣ, ಕೇಳೆನುತ ಮತ್ತಿಂತೆಂದನಾ ಮುನಿಪ ॥ —(ಕ. ಭಾರ)

ಇಷ್ಟು ಹೇಳಿ ಕೃಷ್ಣನನ್ನು ಸ್ತೋತ್ರಮಾಡುತ್ತಾರೆ—

ಚೂ॥ ಎಲ್ಲೆಲ್ಲಿಯೂ ಇರುವ ದೇವ, ಎಲ್ಲಿ ಕರೆದರೆಯು ನೀ ಕಾವ, ಬಲ್ಲಭಕ್ತರಿಗೆ ನೀ ಜೀವ,।ತಲ್ಲಣಕೆ ತಡೆ ನಿನ್ನ ಪಾದರಾಜೀವ, ಖುಲ್ಲಕಲ್ಪನೆಗಳಡವಿಗೆ ನೀನು ದಾವ, ಮೆಲ್ಲಡಿಯ ನೆನೆಯೆ ಸುಖಜೀವ, ಸೊಲ್ಲಿಗಸದಳ ನಿನ್ನ ಭಾವ, ಮಹಾನುಭಾವ । ಭಕ್ತರಿಗೆ ನೀ ಪರಾಧೀನ, ಭುಕ್ತಿಯೀವುದರೊಳಗೆ ಜಾಣ, ಮುಕ್ತಿಕಾಂತಿಯು ನಿನ್ನಧೀನ, ಯುಕ್ತಿಗೊಲಿಯದು ನಿನ್ನ ಜ್ಞಾನ, ಸೂಕ್ತಂಗಳೇ ನಿನ್ನ ಪ್ರಾಣ, ನಾನು ದೀನ । ನಿನ್ನ ಬಲವಿರಲೇನು ಚಿಂತೆ ನಿನ್ನ ಹೊರತೆಲ್ಲವೂ ಕಂತೆ, ನೀನೆ ಭಕ್ತರಿಗೆ ಬೇಕಂತೆ, ಇನ್ಯಾರು ನೋಡೆ ನಿನ್ನಂತೆ, ನಿನ್ನಿಂದ ಸಿರಿ ಭಾಗ್ಯವಂತೆ, ಮಾನ್ಯಗುಣಗಳಿಗೆ ನೀ ಸಂತೆ, ಎನ್ನಮೇಲಣುಪೇಕ್ಷೆಯಿಂತೇ ? । ನಿನ್ನಾಶ್ರಯದಿ ಕಾರ್ಯಸಿದ್ಧಿ, ನಿನ್ನಿಂದ ಧರ್ಮದ ಸಮೃದ್ಧಿ, ನೀನೆ ಸರ್ವೇಶನಾಗಿದ್ದಿ, ನಿನ್ನ ಸೇವಿಸುತಿಹವು ಋದ್ಧಿ, ನಿನ್ನಿಂದ ಸತ್ತ್ವಗುಣವೃದ್ಧಿ,ನಿನ್ನ ಕಥೆ ಶುಭವಾದಸುದ್ದಿ, ಕೃಪಾಬ್ಧಿ । ಮನ್ನಿಸೆನ್ನಯ ತಪ್ಪನೆಲ್ಲ, ಮಾನ್ಯರೊಳು ನಿನಗೆ ಸರಿಯಿಲ್ಲ, ಅನ್ಯಕೆ ನೀನೊಲಿವನಲ್ಲ, ನಿನ್ನ ನಾನರಿಯಬೇಕಲ್ಲ, ನಿನಗೆ ಬರಿಮಾತು ಬೇಕಿಲ್ಲ,

ನೀನೊಲಿಯೆ ಸಿದ್ಧಿಯರಿದಲ್ಲ, ನೀನು ಮಲ್ಲರಿಗೆಲ್ಲ ಮಲ್ಲ, ನಿನ್ನನಾರೂ ಮರೆಯ ಸಲ್ಲ, ನಲ್ಲ, ಬಲ್ಲವರ ಬಲ್ಲ ॥

ಎಂದು ಕೊಂಡಾಡಿ ದೂರ್ವಾಸರು ಧರ್ಮರಾಯನಿಗೆ ಹೇಳಿದ್ದು—

ಶ್ಲೋ॥ ವರಂ ಪರ್ವತದುರ್ಗೇಷು ಭ್ರಾಂತಂ ವನಚರೈಸ್ಸಹ । ನ ಮೂರ್ಖ ಜನಸಂಪರ್ಕಃ ಸುರೇಂದ್ರಭವನೇಷ್ವಪಿ ॥ —ಸು)

ಅ॥ ಬೆಟ್ಟಗುಡ್ಡಗಳಲ್ಲಿ ಕೋತಿಗಳೊಡನೆ ತಿರುಗಾಡಿಕೊಂಡಿರುವವಾದರೂ ಮೇಲು; ಇಂದ್ರನ ಅರಮನೆಯಲ್ಲಾದರೂ ಮೂರ್ಖಜನರ ಸಂಬಂಧವು ಬೇಡ.

ಸಾಂ॥ ಕುರುಭೂಪಗಾಗಿಂತು ಗೈದುದ ಮನ್ನಿಸು; । ಹರಿಭಕ್ತಿಯಿಂ ವೃದ್ಧಿಯಾಗು; ॥ ಕುರುಪತಿಯುಣ್ಬನಧರ್ಮದ ಫಲವನು; ಅರಿತಿದ ಚಿಂತೆಯ ನೀಗು॥

ಇದರಿಂದ ಪಾಂಡವರ ಮನಸ್ಸಿಗೆ ಸ್ವಸ್ಥತೆಯುಂಟಾದೊಡನೆ ಕೃಷ್ಣನು ಪ್ರಯಾಣಸನ್ನದ್ಧನಾದಾಗ ಧರ್ಮರಾಯನು ಹೇಳಿದ್ದು—

ಶ್ಲೋ॥ ಮಾ ಗಾ ಇತ್ಯಪಮಂಗಲಂ, ವ್ರಜ ಇತಿ ಸ್ನೇಹೇನ ಹೀನಂ ವಚಃ,। ತಿಷ್ಠೇತಿ ಪ್ರಭುತಾ, ಯಥಾಮತಿ ಕುರುಷ್ವೇತ್ಯಪ್ಯುದಾಸೀನತಾ, ॥ ಕಿಂ ಕರ್ತವ್ಯಮಿತಃ ಪರಂ ಯದುಪತೇ, ತ್ರೈಲೋಕ್ಯನಾಥ, ಪ್ರಭೋ,। ಸ್ಮರ್ತವ್ಯಾ ವಯಮಾದರೇಣ ಭವತಾ ಯಾವತ್ಪುನರ್ದರ್ಶನಮ್ ॥ —(ಸು)

ಅ॥ ಹೋಗಬೇಡವೆಂದರೆ ಅಮಂಗಲವಾಗುತ್ತದೆ. ಹೋಗೆಂದರೆ ನಿರ್ದಾಕ್ಷಿಣ್ಯದ ಮಾತಾಗುತ್ತದೆ. ನಿಲ್ಲೆಂದರೆ ಆಜ್ಞೆಮಾಡಿದಂತಾಗುತ್ತದೆ. ನಿನಗೆ ತಿಳಿದಂತೆ ಮಾಡೆಂದರೆ ಉದಾಸೀನತೆಯಾಗುತ್ತದೆ. ಇನ್ನೇನು ಮಾಡಬೇಕು! ಕೃಷ್ಣ, ಮೂಲೋಕದೊಡೆಯ, ಮತ್ತೆ ನಮಗೆ ನಿನ್ನ ದರ್ಶನವಾಗುವ ವರೆಗೂ ನೀನು ನಮ್ಮನ್ನು ಪ್ರೇಮದಿಂದ ನೆನಪಿಗೆ ತಂದುಕೊಳ್ಳುತ್ತಿರಬೇಕು.

ಎಂದು ಕಳುಹಿಸಿ ಆಮೇಲೆ ದೂರ್ವಾಸರಿಗೆ ಆತಿಥ್ಯವನ್ನು ಮಾಡಿದ್ದರ ಫಲವಾಗಿಯೇ ಧರ್ಮರಾಯನು ತನ್ನ ರಾಜ್ಯವನ್ನು ಗೆದ್ದು ಸುಖದಿಂದ ಬಾಳಿದನು. ಇದನ್ನು ನೋಡಿಯೇ ಭಗವದ್ಭಕ್ತರು ಕೀರ್ತನಾರಂಭದಲ್ಲಿ **"ಮನೆಗೆ ಬಂದತಿಥಿಗಳ ತೊಲಗಿಸಲು ಬಲುಪಾಪ"** ಎಂದು ಮುಂತಾಗಿ ಉಪದೇಶಿಸಿದ್ದು.

ಭಜನಾವಳಿ

೧. ಗೋವಿಂದ ರಾಮ ಗೋಪಾಲ ರಾಮ ಗೋವಿಂದ ರಾಧಾಕೃಷ್ಣ ಗೋಪಾಲ ರಾಮ.
೨. ಗೋಪಾಲ ರಾಧಾಕೃಷ್ಣ ಗೋವಿಂದ ಗೋವಿಂದ.
೩. ನಾರಾಯಣ ಗೋವಿಂದ ಮುಕುಂದ ಪರತರ ಪರಮಾನಂದ.
೪. ರಾಮ ಕೃಷ್ಣ ವಾಸುದೇವ ಗೋವಿಂದ ನರಹರಿ ವಿಠ್ಠಲ ಕೇಶವ ಮಧುಸೂದನ.
೫. ರಮಾರಮಣ ಗೋವಿಂದ ಜಯಜಯ ರಮಾರಮಣ ಗೋವಿಂದ.

ಕೀಚಕನ ವಧೆ

ಪೀಠಿಕೆ—ಪರಸ್ತ್ರೀವ್ಯಾಮೋಹ

—+++·—

ಧನ್ಯಾಸಿ—ಆದಿತಾಳ

ಪರನಾರಿಯರನು । ಪರಿಪರಿಯಳಲಿಸಿ । ಮರುಳನಾಗಬೇಡ ॥ ಪ ॥ ಪರಮಪತಿವ್ರತೆ । ಯರಿಗೆಲ್ಲ ಬೆಂಬಲ । ನಿರುವನು ದೇವನೆಂ । ದರಿ ಮೂಢ ॥ಅಪ॥ ಮೊದಮೊದಲು ಸ್ವಲ್ಪ । ಮಾತ್ರವೆ ಹಾನಿಯನೊದಗಿಸುವನು; ಮತ್ತೆ ॥ ತುದಿಯವರೆಗೆ ನೀ । ಬಿಡದಿರೆ ನಿನ್ನನು । ಸದೆವನವನು ತಪ್ಪದೆ ತೊತ್ತೆ ॥ ೧ ॥

ಈ ಜಗತ್ತಿನಲ್ಲಿ ದುಃಖಗಳು ಒಂದರ ಹಿಂದೊಂದು ಬರುತ್ತಿರುವದರ ಕಾರಣವನ್ನು ವಿಚಾರಪರರು ಕಂಡುಹಿಡಿದು ಹೇಳಿರುವದೇನೆಂದರೆ—

ವೃ॥ ಎತ್ತೆತ್ತಂ ಲಲಿತಾಂಗಿಯರ್ಸುಳಿದರತ್ತತ್ತಾಡುಗುಂ ಕಣ್ಗಳೆ । ತ್ತೆತ್ತಂ ಕಾಮಿನಿಯರ್ಮೊಗಂದೆಗೆದರತ್ತತ್ತೊಂದುಗುಂ ಜಿಹ್ವೆ; ಮ ॥ ತ್ತೆತ್ತೆತ್ತಂ ಸರಿಮಿಂಡಿಯರ್ತೆಗೆದರತ್ತತ್ತತ್ತೈದುಗುಂ ಬುದ್ಧಿ; ನಿ । ಮ್ಮತ್ತಂ ಬಾರದು; ಕೆಟ್ಟೆನೇವೆನಕಟಾ ! ರತ್ನಾಕರಾಧೀಶ್ವರಾ ॥ —(ರ. ಶ)

ಇದನ್ನು ಗೆಲ್ಲುವದು ಎಂಥೆಂಥ ಶೂರರಿಗೂ ದಕ್ಕುವ ಮಾತಾಗಿಲ್ಲವೆಂದು ನೀತಿಶಾಸ್ತ್ರಕಾರರು ಹೇಳಿರುವದೇನೆಂದರೆ—

ಶ್ಲೋ॥ ಮತ್ತೇಭಕುಂಭದಲನೇ ಬಹು ಸಂತಿ ಶೂರಾಃ; । ಕೇಚಿತ್ಪ್ರಚಂಡಮೃಗರಾಜವಧೇಽಪಿ ದಕ್ಷಾಃ; ॥ ಕಿಂತು ಬ್ರವೀಮಿ ಬಲಿನಾಂ ಪುರತಃ ಪ್ರಸಹ್ಯ । ಕಂದರ್ಪದರ್ಪದಲನೇ ವಿರಲಾ ಮನುಷ್ಯಾಃ ॥ —(ಸು)

ಅ॥ ಮದ್ದಾನೆಯ ಕುಂಭಸ್ಥಲವನ್ನು ಸೀಳುವಂಥ ಶೂರರೂ ಅನೇಕರಿದ್ದಾರೆ; ಪ್ರಚಂಡವಾದ ಸಿಂಹವನ್ನು ಕೊಲ್ಲುವ ಬಲಿಷ್ಠರೂ ಕೆಲವರಿದ್ದಾರೆ; ಆದರೆ ಈ ಶೂರರ ಗುಂಪಿನಲ್ಲಿ ಮನ್ಮಥನ ದರ್ಪವನ್ನು ಅಣಗಿಸಬಲ್ಲ ಮನುಷ್ಯರು ಬಹುಕಡಿಮೆ.

ಈ ವಿಷಯದಲ್ಲಿ ಕವಿ ಹೇಳಿರುವದೇನೆಂದರೆ—

ಷ॥ ನಾರಿಯರ ಕಡೆಗಣ್ಣ ಹೊಯ್ಲಿನ । ಧಾರೆಗಳುಕದನಾವನಾತನೆ । ಧೀರನಾತನೆ ಧಿಟ್ಟನಬಲೆಯುರುಬ್ಬುಗವಳದಲಿ ॥ ನೀರೆದಪ್ಪುವನೇ ವಿಕಾರಿ; ವಿ । ಚಾರಪರನೆ ವಿನೀತನನ್ಯಾ । ಚಾರಯುತನಾಚಾರಹೀನನು ಫಣಿಪ, ಕೇಳೆಂದ ॥ —(ಕ. ಭಾರ

ಪರಸ್ತ್ರೀಲಂಪಟರಿಗೆ ಜ್ಞಾನಪ್ರಾಪ್ತಿಯಿಲ್ಲವೆಂದು ವಿವೇಕಿಗಳು ಹೇಳುವದೇನೆಂದರೆ—

ತ್ರಿ॥ ತಲೆಹುಳತ ನಾಯಂತೆ ಲಲನೆಯರ ಮೋಹಕ್ಕೆ । ಸಲೆ ಮೆಚ್ಚಿಕೊಂಡು ಇಹಪರವನರಿಯದಿಹ । ಮಲಧಾರಿಗೆತ್ತಣದು ನಿತ್ಯ? ॥ —(ಗು. ಬೋ)

ಇದನ್ನರಿತು ಜ್ಞಾನಿಗಳು ಉಪದೇಶಿಸಿರುವದೇನೆಂದರೆ—

ಮೋಹನ—ಝಂಪೆ

ಹೆಣ್ಣಿಗಿಚ್ಛೈಸುವರೆ ? ಮೂಢ, । ಇದನು । ಕಣ್ಣು ಕಿವಿ ಕೈ ಮನಗಳಿಂ ಸೋಂಕಬೇಡ ॥ ಪ ॥ ತಾಯಾಗಿ ಮೊದಲು ಹಡೆದಿಹುದು ; ಮೇಲೆ । ಜಾಯೆಯೆಂದೆನಿಸಿ ಕಾಮದೊಳು ಕೆಡಹುವದು; ।। ಕಾಯದೊಳು ಜನಿಸಿ ಸುತೆಯಹುದು;। ಇಂತು । ಮಾಯೆಯೇ ನಿನ್ನ ಬಹುವಿಧದಿ ಕಾಡುವದು ॥ ೧ ॥ ಹಿತಶತ್ರುವಾಗಿ ಹೊಂದುವದು ; । ನಿಮಿಷ । ರತಿಗೊಟ್ಟು ನಿತ್ಯಮುಕ್ತಿಯನು ಸೆಳೆಯುವದು; ॥ ಕ್ಷಿತಿಯು ಪೂಜ್ಯತೆಯ ಕೆಡಿಸುವದು; । ಮುಂದೆ । ಶತಜನ್ಮಗಳಿಗೆ ಹೊಣೆಯಾಗಿ ನಿಲ್ಲುವದು ॥ ೨ ॥ ಬಗೆಯೆ ತನುವೆಲು ನರವು ಖಂಡ; । ಅದರೊ । ಳಗೆ ವಾಯು ರಂಧ್ರವದು ಕಿಸುಕುಳದ ಹೊಂಡ; ॥ ಭಗವೆಂಬುವದು ಮೂತ್ರಭಾಂಡ ; । ಅದಕೆ । ವಗಡಿಸದೆ ನಿಜಮುಕ್ತಿ ಸುಖವಿಲ್ಲ ಕಂಡ್ಯ ॥ ೩ ॥ ಒಸೆದು ವಾಲಿಯನು ಕೊಲಿಸಿಹುದು ; । ಹಾಂಗೆ । ಹೆಸರು ಮಾತ್ರದೊಳು ಕೀಚಕನನುಳಿಸಿಹುದು;॥೪॥ ದಶಕಂಠನಸುವ ಕಳೆಸಿಹುದು ; । ಇಂದ್ರ । ಶಶಿಗಳಂಗದಿ ಭಗಕ್ಷಯಗಳೆಸಗಿಹುದು॥ ವರಸೆ ವಾಯುಗಳನಳಿಸುವದು ; । ಸೋಂಕಿ । ದರೆ ಮೇಲೆ ಪಾತಕದ ಹೊರೆಯ ಹೊರಿಸುವದು ; ॥ ನರಕದರಮನೆಯೊಳಿಳಿಸುವದು ; । ನಮ್ಮ । ಗುರುಸಿದ್ಧನಡಿಗವರ ದೂರವೆನಿಸುವದು ॥ ೫ ॥ —(ಕೈ. ಕ)

ಹೆಣ್ಣಿನಿಂದ ಅಪಾಯವಿರುವದನ್ನು ಕುರಿತು ಒಬ್ಬ ಕವಿಯು ಚಮತ್ಕಾರವಾಗಿ ಹೇಳಿರುವದೇನೆಂದರೆ—

ಶ್ಲೋ॥ ಸ್ತ್ರೀ ಸತೀಯಂ ಮಮಾಸ್ತ್ರೀತಿ ಪ್ರತಿಭಾತಿ ವಿನಿಶ್ಚಿತಮ್ । ಭವಂತಿ ಮೂರ್ಛಿತಾಃ ಶೂರಾ ಅಪಿ ಯದ್ಗವಲಕ್ಷಿತಾಃ ॥ —(ಸು. ಲಾ)

ಅ॥ (೧) ಇವಳು ಸ್ತ್ರೀಯಾಗಿದ್ದರೂ (ಮಮ+ಅಸ್ತ್ರೀ) ಸ್ತ್ರೀಯಲ್ಲವೆಂದು ನನಗೆ ನಿಜವಾಗಿ ತೋರುತ್ತದೆ. (೨) ಇವಳು ಸ್ತ್ರೀಯಾಗಿದ್ದರೂ (ಅಸ್ತ್ರಿ) ಇವಳು ಅಸ್ತ್ರವನ್ನು ಹಿಡಿದಿರುವವಳಾಗಿದ್ದಾಳೆಂದು ನನಗೆ ನಿಜವಾಗಿ ತೋರುತ್ತದೆ. ಏಕೆಂದರೆ ಇವಳ ಕಟಾಕ್ಷವೆಂಬ ಬಾಣಗಳ ಪೆಟ್ಟಿನಿಂದ ಶೂರರು ಕೂಡ ಮೂರ್ಛಿತರಾಗುತ್ತಾರೆ.

ಹೆಂಗಸರು ಇಂತಿದ್ದರೂ ಜನರು ತಮ್ಮ ತಮ್ಮ ಸ್ವಸ್ತ್ರೀಯರಿಂದ ತೃಪ್ತರಾಗದೆ ಪರಸ್ತ್ರೀಯರ ಕಡೆಗೆ ಕಣ್ಣು ಹಾಕುವದೆಂತಿರುವದೆಂದರೆ—

ವ ॥ ಅಡಗ ತಿಂಬರು ಕಣಕದಡಿಗೆಯಿರಲ್ಕೆ ; ಸುರೆಯ ಕುಡಿವರು ಹಾಲಿರಲ್ಕೆ ; ಮುಕ್ಕುವರು ಬಂಗಿಯ ಸಕ್ಕರೆಯಿರಲ್ಕೆ ; ಸ್ವಸ್ತ್ರೀ ಇದ್ದಂತೆ ಪರಸ್ತ್ರೀಯ

ರಿಗೆ ಆಳುಪುವರು ; ಸತ್ತ ನಾಯ ಭಕ್ಷಿಸುವ ಹಡಕಿಗರನೇನೆಂಬೆನಯ್ಯಾ ॥

—(ವೀ. ವ. ಶಾ)

ಇಂಥವರಿಗೆ ದೊಡ್ಡವರು ಉಪದೇಶಿಸುವದೇನೆಂದರೆ—

ವ॥ ಗಂಡನುಳ್ಳ ಹೆಂಡಿರ ಕಂಡು ಅಳುಪದಿರಾ ಮನವೇ ; ಬಂದ ಬಸಿರನು ಉಂಡ ಮೊಲೆಯನು ಕಂಡು ಮರುಗದಿರಾ ಮನವೆ ; ಉದ್ದಂಡತನದಲ್ಲಿ ನಡೆವ ಭಂಡರನು ಹುಳುಗೊಂಡದಲ್ಲಿಕ್ಕದೆ ಬಿಡುವನೇ ನಮ್ಮ ದೇವರಾಯ ಸೊಡ್ಡಳಾ ॥

—(ವೀ. ವ. ಶಾ)

ಈ ಉಪದೇಶವನ್ನು ಮೀರಿ ನಡೆಯುವವರಿಗೆ ಶಿಕ್ಷೆಯೇನೆಂದರೆ—

ಕಂ॥ ಲೋಹದ ಪೆಣ್ಬುತ್ತಳಿಯಂ । ಕಾಹೇರಿಸಿ ಕಾಸಿ ತಂದು ಪರಸತಿಯಿವ ಳೊಳ್ ॥ ಮೋಹಿಸುತಪ್ಪೆನುತಂ ಪಿಡಿ । ದಾ ಹಾದರದರಿಕೆಯವರ್ಗೆ ತಂದಪ್ಪಿ ಸುವರ್ ॥

—(ತ್ರಿ. ಶ)

ಈ ಅಪಾಯವನ್ನು ತಪ್ಪಿಸಿಕೊಳ್ಳುವದಕ್ಕಾಗಿ ಮನುಷ್ಯನಿಗಿರಬೇಕಾದ ನಡೆವಳಿಕೆಯನ್ನು ಭಗವದ್ಭಕ್ತರು ಉಪದೇಶಿಸಿರುವದೇನೆಂದರೆ—

ರಾಮಪ್ರಿಯ—ರೂಪಕ

ಹೀಗಿರು ನೀನೀಗ ಮನವೆ । ಈ ಮಾತ ಕೇಳಿ ॥ ಪ ॥ ರಾಗಲೋಭಗಳನು ನೀ ವಿರಾಗಕಾಗಿ ಮಾಡಿಕೊಂಡು ॥ ಅ. ಪ ॥ ಸಾಧುಸಂತರಾದವರ । ಪಾದ ಸೇವೆ ದೊರೆಯಲೆಂದು । ಆದರದಿಂದಾಸೆಯನ್ನು । ಮಾಡು ನೀನು ಸಂತತ ; ॥ ಮೇದಿನಿಯೊಳಗೊಳ್ಳೆಯವರ । ಾದ ಗುಣಗಳುಳ್ಳವರೊಳು । ಮೋದದಿಂದ ಪ್ರೀತಿಮಾಡು । ಭೇದಬುದ್ಧಿಯನ್ನು ಬಿಟ್ಟು ॥ ೧ ॥ ನಿನ್ನ ನೀನು ಬಿಗಿ ಹಿಡಿಯುತ, । ಅನ್ಯವನ್ನು ಬಯಸದಿರುತ, । ಅನ್ಯಾಯಕೆ ಹೋಗದಿರುತ. । ಮಾನ್ಯತೆಗಧಿಕಾರಿಯಾಗುತ, ॥ ಚೆನ್ನಾಗಿರುವಂದದೊಳು ವ । ದಾನ್ಯಗುಣವ ಬೆಳೆಸಿಕೊಳುತ, । ನಿನ್ನ ನೀನು ತಿಳಿದು ನೀನೆ । ಧನ್ಯನೆಂದು ಭಾವಿಸುತಿರುತ ॥ ೨ ॥ ಗುರುಜನಂಗಳೆದುರಿನಲ್ಲಿ । ಶಿರವ ಬಾಗಿ ನಡೆಯುತಿರುತ, । ನಿರುತವು ವಿದ್ಯಾವ್ಯಸನದ । ಭರವ ಹೆಚ್ಚುಮಾಡಿಕೊಂಡು, ॥ ಹೊರಗಣಿಂದ ದೂರುಗಳನು । ಬರಮಾಡಿಕೊಳ್ಳದಿರುತ, । ನೆರೆ ಚಿನ್ಮಯನಲ್ಲಿ ಮಮತೆ । ಯಿರಿಸಿ ನಿತ್ಯಸುಖವ ಪಡುತ ॥ ೩ ॥

—(ಭಕ್ತಿ. ಗೀ)

ಕಾಮನನ್ನು ಗೆದ್ದವರು ಪೂಜ್ಯರೆಂದು ಪೂರ್ವಿಕರು ಹೇಳಿರುವದೇನೆಂದರೆ—

ಷ॥ ದಿಟ್ಟಬದ್ಧರನೆಯೆಬ್ಬಟ್ಟಿ,ಯತಿಗಳ ಕೊರಲ । ಮೆಟ್ಟಿ, ನಿರ್ಜರರ ಬಾಯಟ್ಟಿ, ವಿರಹಿಗಳ ಬೆ! ನ್ನಟ್ಟಿ, ಯೋಕ್ಷಿಪರ ಹುಡಿಗುಟ್ಟಿ, ನಾನಾಜನರ ತಟ್ಟಿ,ದಿಕ್ಕೆಂಟ ಮುಟ್ಟಿ, ॥ ಕಟ್ಟುಗ್ರತಪಸಿಗಳ ಸುಟ್ಟಸುವನೀಗುವರ । ಬಿಟ್ಟಧಿಕಮಾನಿಗಳ ಕಟ್ಟಿ ನಡೆಗೊಂಡು ಹಿಮು । ವೆಟ್ಟವಂ ಕಂಡ ಮನ್ಮಥವೀರನರಿವವರ ಚರಣಾಂಬು

ಜಕ್ಕೆ ಶರಣು॥ —(ಶಿ. ಚಿಂ)

ಕಾಮದ ಮುಖ್ಯವಾದ ಕವಲುಗಳು ಯಾವವೆಂದರೆ—

ಶ್ಲೋ॥ ತ್ರೀಣ್ಯೇವ ವ್ಯಸನಾನ್ಯತ್ರ ಕಾಮಜಾನಿ ಭವಂತ್ಯುತ; । ಮಿಥಾವಾಕ್ಯಂ ಗುರುತರಂ; ತಸ್ಮಾದ್ಗುರುತರೇ ಉಭೇ; । ಪರದಾರಾಭಿಗಮನಂ, ವಿನಾ ವೈರಂ ಚ ರೌದ್ರತಾ (ಶ್ರೀ. ರಾ)

ಅ॥ ಕಾಮದ ಕವಲುಗಳು ಮುಖ್ಯವಾಗಿ ಮೂರು. ಬಹುಪಾಪಕರವಾದ ಸುಳ್ಳುಮಾತೊಂದು. ಇನ್ನೆರಡೂ ಇದಕ್ಕಿಂತ ಪಾಪಕರವಾದವುಗಳು—ಪರಸ್ತ್ರೀವ್ಯಾಮೋಹ, ವೈರವಿಲ್ಲದೆ ಭಯಂಕರತ್ವ.

ಶ್ರೀಕೃಷ್ಣ ಪರಮಾತ್ಮನು ಕಾಮುವನ್ನು ತ್ಯಾಜ್ಯಕೋಟಿಯಲ್ಲಿ ಸೇರಿಸಿ ಹೇಳಿರುವದೆಂತೆಂದರೈ

ಶ್ಲೋ॥ ತ್ರಿವಿಧಂ ನರಕಸ್ಯೇದಂ ದ್ವಾರಂ ನಾಶನಮಾತ್ಮನಃ । ಕಾಮಃ ಕ್ರೋಧಸ್ತಥಾಲೋಭಸ್ತಸ್ಮಾದೇತತ್ತ್ರಯಂ ತ್ಯಜೇತ್ ॥ —(ಭ. ಗೀ)

ಅ॥ ತನ್ನ ನಾಶವನ್ನು ಮಾಡುವ ನರಕಕ್ಕೆ ಮೂರು ಬಾಗಿಲುಗಳಿವೆ. ಅವು ಯಾವವೆಂದರೆ ಕಾಮು, ಕ್ರೋಧ, ಲೋಭ. ಆದ್ದರಿಂದ ಈ ಮೂರನ್ನೂ ಬಿಡಬೇಕು.

ಭಕ್ತಿಶಾಸ್ತ್ರಪ್ರವರ್ತಕರಾದ ಭಗವಾನ್ ನಾರದರಂತು ಈ ಕಾಮವಿಕಾರದ ಬುಡಕ್ಕೇ ಕೊಡಲಿಯನ್ನು ಹಾಕಿರುವದೆಂತೆಂದರೆ—

ಸೂ॥ ಸ್ತ್ರೀಧನನಾಸ್ತಿಕಚರಿತ್ರಂ ನ ಶ್ರವಣೀಯಮ್ ॥ —(ನಾ. ಭ. ಸೂ)

ಅ॥ ಸ್ತ್ರೀಯರ, ಧನದ, ಮತ್ತು ನಾಸ್ತಿಕನ ಚರಿತ್ರೆಯನ್ನು ಕಿವಿಯಿಂದ ಕೇಳಬಾರದು.

ಇಂಥ ಅಭಿಪ್ರಾಯವನ್ನೆ ಪುಷ್ಟಿಗೊಳಿಸಿ ದಾಸರು ಹಾಡಿರುವದೇನೆಂದರೆ—

ಉ॥ ಉರಿಗಂಜೆ, ಸೆರೆಗಂಜೆ, ಶರೀರದ ಭಯಕಂಜೆ, ಹಾವಿಗಂಜೆ, ಚೇಳಿಗಂಜೆ, ಕತ್ತಿಯ ಧಾರೆಗಂಜೆ, ಇನ್ನೊಂದಕ್ಕಂಜುವೆ, ಇನ್ನೊಂದಕ್ಕಳುಕುವೆ, ಪರಾರ್ಥಪರಸತಿಗೆರಡಕ್ಕಂಜುವೆನಯ್ಯ, ಹಿಂದೆ ಕೌರವರಾವಣರೇನಾಗಿ ಪೋದರು? ಮುಂದೆ ಸಲಹೊ ಪುರಂದರವಿಠಲ ॥ —(ದಾ)

ಕಾಮುವಿಕಾರವೊಂದನ್ನು ಗೆದ್ದರೆ ಸಿಕ್ಕುವ ಪರಮಲಾಭವೇನೆಂದರೆ—

ತ್ರಿ॥ ಕಚ್ಚೆಕೈಬಾಯಿಗಳು ಇಚ್ಛೆಯಲಿ ಇದ್ದಿಹರೆ । ಅಚ್ಯುತನಪ್ಪ; ಅಜನಪ್ಪ; ಲೋಕದಲಿ। ನಿಶ್ಚಿಂತನಪ್ಪ; ಸರ್ವಜ್ಞ॥ —(ಸ)

ಸ್ತ್ರೀಯರೊಡನೆ ಭಕ್ತರು ಹೇಗೆ ನಡೆದುಕೊಳ್ಳಬೇಕೆಂಬುದನ್ನು ಭಕ್ತರು ಉಪದೇಶಿಸಿರುವದೇನೆಂದರೆ—

ಮುಖಾರಿ—ಝಂಪೆ

ನೋಡಿದರೆ ನೋಡು ; ಮಾತಾಡು ತಾಯಿಗಳೆಂದು ; । ನೋಡಿ ಭ್ರಮಿಸಲು ಬೇಡ ಪರಸತಿಯರ ॥ಪ॥ ದಾರಿಯೊಳು ಭಯವೆಂದು ಚೋರರೊಳು ಪೋಗುವರೆ? । ಗೇರುಬೀಜದ ತೈಲ ಲೇಪಿಸುವರೆ? ॥ ಅರಣ್ಯಮಧ್ಯದಲಿ ಮೃಗವಿರೂ

ಶ್ಲೋ ॥ ಮನೋ ಧಾವತಿ ಸರ್ವತ್ರ ಮದೋನ್ಮತ್ತಗಜೇಂದ್ರವತ್ ।
ಜ್ಞಾನಾಂಕುಶೇ ಸಮುತ್ಪನ್ನೇ ತಸ್ಯ ನೋಚ್ಚಲತೇ ಮನಃ ॥ —(ಸು)

ಮನಸ್ಸು ಮದ್ದಾನೆಯಂತೆ ಎಲ್ಲಕಡೆಗೂ ಓಡುತ್ತದೆ. ಜ್ಞಾನವೆಂಬ ಅಂಕುಶವು ಉಂಟಾದರೆ ಅವನ ಮನಸ್ಸು ಕದಲುವದಿಲ್ಲ.

ಜ್ಞಾನವಿಲ್ಲದವರ ಗತಿಯನ್ನು ಕವಿ ನೆನಪುಗೊಟ್ಟಿರುವದೇನೆಂದರೆ—

ವೃ ॥ ಕೃತಶಾಪಾನ್ವಿತನಾ ಹಿಂಮಾಂಶು ಗುರುವಿಂ; ಗೋತ್ರಾರಿಯನ್ಯಾಂಗನಾ । ರತಿಯಿಂ ; ಕೀಚಕನಂ ಬಕಾರಿ ಮುರಿದಂ; ಸುಗ್ರೀವನಿಂ ವಾಲಿ ತಾಂ ॥ ಹತನಾದಂ; ದಶಕಂಠನಾ ಹರಿಶರಕ್ಕೀಡಾದನೇವೇಳ್ವೆನಾ । ನತಿಕಾಮುರ್ಗತಿಹಾನಿಯೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ —(ಸೋ.ಶ)

ಟಿ॥ ಗೋತ್ರಾರಿ=ಪರ್ವತಗಳ ಶತ್ರುವಾದ ಇಂದ್ರ.

ಇಲ್ಲಿ ಸ್ತ್ರೀಯರ ಮೇಲಿನ ಕಾಮದಿಂದ ಪುರುಷರಿಗುಂಟಾದ ಹಾನಿಗೆ ಉದಾಹರಣೆಗಳಿದ್ದರೂ ಇದು ಪುರುಷರ ಮೇಲಿನ ಕಾಮವುಳ್ಳ ಸ್ತ್ರೀಯರಿಗೂ ಅನ್ವಯಿಸುವದೆಂಬುದನ್ನು ಮರೆಯಬಾರದು. ಆದರೂ ಈ ವಿಷಯದಲ್ಲಿ ಪುರುಷರನ್ನು ಉದ್ದೇಶಿಸಿರುವ ಸಂದರ್ಭದಲ್ಲಿ ಭಾಗವತಶಿರೋಮಣಿಗಳು ಕೀರ್ತನಾರಂಭದಲ್ಲಿ **"ಪರನಾರಿಯರನು ಪರಿಹರಿಯುಳಲಿಸಿ"** ಎಂದು ಮುಂತಾಗಿ ಹೇಳಿರುವರು. ಇದಕ್ಕೆ ಉದಾಹರಣೆಯಾಗಿ ಕೀಚಕನ ವಧೆಯೆಂಬ ಆಖ್ಯಾನವು ನಿರೂಪಣಮಾಡಲಾಗುವದು.

ಆಖ್ಯಾನ

ಕೀ ॥ ಅಕ್ಕನ ಸಭೆಯೊಳು ಕಂಡು ದುರುಪದಿಯ । ನುಕ್ಕಿದ ಕಾಮದಿ ಕೀಚಕನು ॥ ಮಿಕ್ಕು ಬಯಸಿದನು; ಮಾಸಲನ್ನವನು । ನೆಕ್ಕ ಪೋಪ ನಾಯಂತವನು ॥

ಒಂದು ದಿನ ಅವನು ತನ್ನ ಅಕ್ಕನಾದ ಸುಧೇಷ್ಣೆಯ ಮನೆಗೆ ಬಂದು ಪಾಂಚಾಲಿಯನ್ನು ನೋಡಿದಾಗ ಅವನಿಗೆ ಬಂದ ಭಾವನೆಯೇನೆಂದರೆ—

ಷ॥ ತಿಳಿಯಿವಳು ಮೂಜಗವ ಮೋಹಿಪ । ತಿಲಕವೋ ! ಕಾಮಂಗೆ ಕಟ್ಟಿದ। ಖಳನ ಭಾಷೆಗೆ ನಿಂದ ಮಾಸಾಳೋ! ಮಹಾದೇವ, ॥ ಕೊಲೆಗಡಿಗ ಕಂದರ್ಪಕನಕೂ । ರಲಗೊ! ಮದನನ ಸೊಕ್ಕಿದಾನೆಯೊ! । ನಳಿನಮುಖಿಯಿವಳಾರ ಸತಿಯೆಂದಳುಪಿ ನೋಡಿದನು ॥ —(ಕ. ಭಾರ)

ಟಿ॥ ಮಾಸಾಳು=ತಿಂಗಳ ಸಂಬಳದ ಭಟ.

ಆಗ ದ್ರೌಪದಿಯನ್ನು ಕುರಿತು ಕೀಚಕನ ಬೇಡಿಕೆ—

ಜುಂಜೋಟಿ—ಅಟತಾಳ

ನಾರಿಯೆ, ಸೇರೆನ್ನನು ನೀ । ನೀರಜಲೋಚನೆ ॥ಪ॥ ಮಧುವಿನ ಹೂವಿನೊಳು । ಮುದದೊಳು ಸಿಕ್ಕುಬಿದ್ದ ॥ ಮಧುಕರನಂತಿರ್ಪೆನು; । ಚದುರೆಯೆ ನೀ ನೋಡಿದ ॥೧॥ ಸುಮುಗಳ ಗೊಂಚಲಿಗೆ । ಸಮನಾದ ದೇಹವನು ॥ ಶ್ರಮೆಪಡಿಪುದೊಳ್ಳಿತೇ? । ಪ್ರಮದೆಯೆ, ನೀ ನೋಡಿದ ॥೨॥ ಒಪ್ಪಿಸಿದಪೆನೆನ । ಗಿರ್ಪ ಸರ್ವಸ್ವವನು; ॥ ಅಪ್ಪುವದೆನ್ನ ನೀನು; । ಸೆರ್ಪವೇಣಿಯೆ, ಬೇಗ ॥೩॥

ಅದಕ್ಕೆ ದ್ರೌಪದಿಯು ಉತ್ತರ—

ಸಾ॥ ಪತಿಗಳ್ಳೈವರಿರ್ಪರು ಗಂಧರ್ವರು । ಕ್ಷಿತಿಯೊಳೀಗ ಕೇಳೆನಗೆ; ॥ ಸತಿಯೆನುತ್ತ ನೀ ನೋಡಿದೊಡೆನ್ನನು । ಹಿತವಾಗದು ಕೇಳ್ನಿನಗೆ ॥

ಆಗ ಕೀಚಕನ ಮಾತು—

ದಿಂ॥ ಎಲ್ಲಿ ಗಂಧರ್ವರ್? ನಾರಿ, ಎನ್ನ ಮುಂದೆ; । ವಲ್ಲಭಂ ನಾಂ ಸರ್ವರ್ಗೆ ಶೌರ್ಯದಿಂದೆ; ॥ ಫುಲ್ಲನೇತ್ರೇ, ನೀನೆನಗೆ ಸೇರೆ ಕುಂದೇ? । ಇಲ್ಲವೆನದಿರ್ ನಾಂ ಕೇಳ್ವೆ ದೈನ್ಯದಿಂದೆ ॥

ಆಗ ದ್ರೌಪದಿಯು ಹೇಳಿದ್ದು —

ಕಾಂಬೋದಿ—ಅಟತಾಳ

ಬಲುಹಾನಿಯಹುದು ನಿನಗೆ । ಚಲವೇ, ಫಲವೇ? । ಇದರಿಂದ ||ಪ|| ಅವಿವೇಕಿಯಾದ ಮಾ । ನವನಾಗಿ ಬಾವಿಗೆ ॥ ಜವದಿಂದ ನೀನೆ ಬಿ । ದ್ದವನಾಗಿ ನರಳುವೆ ॥೧॥ ಕಳ್ಳರ ಸಂಗತಿ । ಯುಳ್ಳ ಮಾನವನಾಗಿ || ಮುಳ್ಳು ಹಾದಿಗೆ ಬಿದ್ದ । ಪೊಳ್ಳು ಮನುಜನಪ್ಪೆ ॥೨॥ ತಿಳಿವಿಲ್ಲದವನಾಗಿ । ಸೆಳೆಯಲು ಚಂದ್ರನ ॥ ಅಳಲುವ ನರನಂತೆ । ಬಳಲುವೆ ಸುಮ್ಮನೆ ॥೩॥

ಆದರೂ ಕೀಚಕನು ಇನ್ನೂ ನಿರ್ಬಂಧಿಸಿದ್ದರಿಂದ ದ್ರೌಪದಿ ಕೊನೆಗೆ ಹೇಳಿದ್ದು—

ಷ॥ ಎಲೆ ಮರುಳೆ, ಬೇಡಳುಪದಿರು; ಕೂ । ರಲಗ ಕೊರಳಿಗೆ ಬಯಸದಿರು; ಕಳ | ವಳಿಸದಿರು ಕೈಯೊಡನೆ; ನಿನ್ನ ರಮನೆಗೆ ತೆರಳುವದು ; ॥ ಸುಲಭೆ ನಾ ನಿನಗಲ್ಲ; ನಿನ್ನನು | ಕೆಲರು ನಗುವರು; ಪರದ ಸದ್ಗತಿ । ತೊಲಗುವದು ; ಬೇಡ ಕಟಯೆಂದಳು ಪಾಂಡವರ ರಾಣಿ || —(ಕ. ಭಾರ)

ಆಗ ಕೀಚಕನು ಸುಧೇಷ್ಣೆಯನ್ನು ಕೇಳಿದ್ದು —

ಸಾಂ ॥ ಅಕ್ಕ, ನಾ ಬದುಕಲೇ:ದಿದ್ದರೀ ಸತಿಯನು । ಗಕ್ಕನೆ ಕೂಡಿಪುದೆನಗೆ ॥

ಅದಕ್ಕೆ ಸುಧೇಷ್ಣೆಯ ಉತ್ತರ—

ಸಾಂ ॥ ಸೊಕ್ಕಿದೈವರಿಗೆ ಸತಿಯಾದೀಕೆಯು । ದಕ್ಕಳು ಸುಲಭದಿ ನಿನಗೆ ॥

ಆಗ ಕೀಚಕನು ತಮ್ಮಕ್ಕನಮುಂದೆ ತನ್ನ ಪರಾಕ್ರಮದ ಗಂಟನ್ನೆಲ್ಲ ಬಿಚ್ಚಿ ಹರಡಿದ್ದಲ್ಲದೆ ತನಗೆ ದ್ರೌಪದಿಯು ದೊರೆಯದಿದ್ದರೆ ತನ್ನ ಪ್ರಾಣಗಳೇ ನಿಲ್ಲಲಾರವೆಂದು ಹೇಳಿದ್ದರಿಂದ ಉಪಾಯಾಂತರವಿಲ್ಲದೆ ಸುಧೇಷ್ಣೆಯು ಈ ಸಂಧಾನಕ್ಕೆ ಒಪ್ಪಿ ಮರುದಿನ ದ್ರೌಪದಿಯನ್ನು ಕಳುಹಿಸುವದಾಗಿ ಹೇಳಿ ತಮ್ಮನನ್ನು ಕಳುಹಿಸಿ ಇತ್ತ ದ್ರೌಪದಿಯನ್ನು ಕುರಿತು ಕೀಚಕನ ಮನೆಯಿಂದ ಮಧುವನ್ನು ತರಹೇಳಿದಳು. ಕೀಚಕನು ದುರ್ಭಾವನೆಯುವನಾದ ಕಾರಣ ಆ ಕೆಲಸವು ತನ್ನ ಮನಸ್ಸಿಗೊಪ್ಪದೆಂದು ದ್ರೌಪದಿಯು ಎಷ್ಟು ಹೇಳಿದರೂ ಸುಧೇಷ್ಣೆಯು ಆ ಕೆಲಸವನ್ನು ನೀನು ಮಾಡಬೇಕೆಂದೇ ಆಕೆಯನ್ನು ನಿರ್ಬಂಧಿಸಿ ಮಧುವಿಗಾಗಿ ಸುವರ್ಣಪಾತ್ರೆಯನ್ನು ಕೊಟ್ಟಳು. ಪಾಂಚಾಲಿಯು ಅದಕ್ಕೊಪ್ಪಿ ಹೊರಡುವದರೊಳಗೆ ಅತ್ತ ಮನೆಗೆಹೋದ ಕೀಚಕನು ಪಾಂಚಾಲಿಯನ್ನೆ ಹಂಬಲಿಸುತ್ತ ವಿರಹವ್ಯಥೆಯನ್ನನುಭವಿಸುತ್ತಿದ್ದಾನೆ—

ಷ॥ ಹಾಸಿದೆಳೆದಳಿರೊಣಗಿದವು ಹೊಗೆ। ಸೂಸಿದಾ ಸುಯ್ಲಿನಲಿ; ಮೆಲ್ಲನೆ। ಬೀಸುತಿಹ ಸುಳಿವಾಳೆಯಲೆ ಬಾಡಿದವು ಝುಳಹೊಯ್ದು; ॥ ಆ ಶಶಿಯ, ಕೋಗಿಲೆಯ, ತುಂಬಿಯ। ನಾ ಸರೋಜವ, ಮಲ್ಲಿಗೆಯ ಕೈ। ವೀಸಿದನು ಕುಸುಮಾಸ್ತ್ರನೀ ಕೀಚಕನ ಕಗ್ಗೊಲೆಗೆ ॥ —(ಕ. ಭಾರ.)

ಅವನು ಈ ಅವಸ್ಥೆಯಲ್ಲಿರುವಾಗ ಪಾಂಚಾಲಿಯು ಬರುತ್ತ ತನ್ನ ರಕ್ಷಣೆಗಾಗಿ ಸೂರ್ಯನಾರಾಯಣನನ್ನು ಪ್ರಾರ್ಥಿಸುತ್ತಾಳೆ—

ಭೈರವಿ—ರೂಪಕ

ಕರುಣದಿಂದ ಪೊರೆವುದೆನ್ನ । ಪರಮಪುರುಷ, ಸೂರ್ಯದೇವ, ॥ ಪ ॥ ಗಾಲಿಯೊಂದೆ ಇರುವ ರಥವು, । ಕಾಲು ಕುಂಟನಾದ ಸಾರಥಿ, ॥ ಏಳುಕುದುರೆ ಇರಲು ನಡೆವ । ಕಾಲಚಕ್ರನಿಯಂತಾರ ॥ ೧ ॥ ಲೋಕಕೆಲ್ಲ ಕಣ್ಣೆನಿಸುತ । ಭೀಕರಾಂಧಕಾರವನ್ನು ॥ ನೂಕಿ ಜಗಕೆ ಬೆಳಕನೀವ । ಸಾಕಾರಪರಬ್ರಹ್ಮ ॥ ೨ ॥ ಸರ್ವಸೃಷ್ಟಿಕರ್ತನಾಗಿ । ಸರ್ವಸ್ಥಿತಿಗೆ ಕಾರಣನಾಗಿ ।। ಉರ್ವಿಯೊಳಗೆ ಬೆಳಗುತಿರುವ। ಸರ್ವದೇವ ಚಿತ್ಸ್ವರೂಪ, ॥೩॥ —(ಭಕ್ತಿ.ಗೀ)

ಆಮೇಲೆ—

ಕೀ॥ ಮರೆಯೊಳಂಗರಕ್ಷಕರಿರೆ ಸೂರ್ಯನ । ಕರುಣದಿ ಬಂದಳು ದ್ರುಪದಸುತೆ ॥ ದುರುಳ ಕೀಚಕನ ಭಯದಿಂದಲಿ ಕೇ । ಸರಿಗೆ ಹುಲ್ಲೆ ಭಯಪಡುವಂತೆ ॥

ಪಾಂಚಾಲಿಯು ಮನೆಯ ಬಳಿಗೆ ಬರುತ್ತಲೆ ಕೀಚಕನು ಎದುರಿಗೆ ಬಂದು ಕರೆಯುತ್ತಾನೆ—

ಹಿಂದುಸ್ಥಾನಿ ಕಾಪಿ—ಆದಿತಾಳ

ಬಾ, ಬಾ, ಬೇಗ ನೀನು । ಮನೋಹರೆ,। ನಾರಿ, ॥ಪ॥ ಕಾಮನ ಪಟ್ಟದ । ಪ್ರೇಮದ ಮದದಾನೆ ॥ ಕಾಮಮಂತ್ರದ ನಿ। ಸ್ಸೀಮದೇವತೆ ನೀನು ॥೧॥ ಲೋಕವ ಮೋಹಿಪ । ಸಾಕಾರ ಮೂರುತಿ, ॥ ಜೋಕೆಯಿಂ ನಿನಗೆ ಪ । ರಾಕು ಹೇಳುವೆ ನಾನು ॥೨॥ ನಿನ್ನಯ ಕುಡಿನೋಟ । ವನ್ನೆ ಕಾದಿಹೆ ನಾನು; ॥ ಮನ್ನಿಸೆನ್ನನು ಸಂ। ಪನ್ನೆ, ಪೇಳುವದೇನು ॥೩॥

ದ್ರೌಪದಿಯು ತನಗೆ ಈ ಆದರವು ಬೇಕಿಲ್ಲವೆಂದು ಹೇಳಿದ್ದೇನೆಂದರೆ—

ಶ್ಲೋ || ಅಪ್ರೈಷೀದ್ರಾಜಪುತ್ರೀ ಮಾಂ ಸುರಾಹಾರೀಂ ತವಾಂತಿಕಮ್ ।
ಪಾನಮಾಹರ ಮೇ ಕ್ಷಿಪ್ರಂ ಪಿಪಾಸಾ ಮೇತಿ ಚಾಬ್ರವೀತ್ ॥ —(ಸಂ.ಭಾರ)

ಅ॥ ರಾಜಪುತ್ರಿಯಾದ ಸುಧೇಷ್ಣೆಯು ತನಗೆ ಬಹಳ ಬಾಯಾರಿಕೆಯಾದ್ದರಿಂದ ಬೇಗ ಪಾನೀಯವನ್ನು ತರಹೇಳಿ ನಿನ್ನ ಬಳಿಗೆ ಮಧುವಿಗಾಗಿ ನನ್ನನ್ನು ಕಳುಹಿಸಿದ್ದಾಳೆ.

ಇದನ್ನು ಕೇಳಿ ಕೀಚಕನು ತನ್ನ ಕಾಮುಚೇಷ್ಟೆಯನ್ನು ಇನ್ನೂ ಹೆಚ್ಚಿಸಿದ್ದನ್ನು ನೋಡಿ ಪಾಂಚಾಲಿಯು ಹೇಳಿದ್ದು—

ಕಂ ॥ ಪರವಧುವಿಂಗಳುಪಿದೊಡಿಹ । ಪರ ಕೆಡುಗುಂ; ನೃಪತಿ ಮುಳಿಗು; ಗಂಡರ್ ಕೊಲ್ವರ್; ।। ಪುರದೊಳಗೆ ಹೊಲೆಯನೆನುವರ್; । ಪರವಧುವಿನ ಸಂಗ ಬೇಡ ಬಲ್ಲವರರಸಾ ।। —(ಸು)

ಆದರೂ ಕೇಳದೆ ಕೀಚಕನು ಪಾಂಚಾಲಿಯ ಬಲಗೈಗೆ ತುಡುಕುತ್ತಲೆ ಆಕೆ—

ಷ॥ ಬಾಯಿ ಹುಳುವದು ಬಯಲ ನುಡಿವರೆ; । ನಾಯಿತನ ಬೇಡೆಲವೊ ಕೆಡದಿರು; ॥ ರಾಯನಂಗನೆ ಕಳುಹೆ ಬಂದೆನು ಮಧುವ ತರಲೆಂದು; ।। ಸಾಯಬೇಕೇ? ಬಯಸಿ ಶೂಲವ । ಹಾಯಿ ಸೋಗೆನೆ ನಿನ್ನ ಬೈಗಳು । ನೋಯಿಸುವವೇ ? ನನ್ನನೆನುತಲೆ ತುಡುಕಿದನು ಸತಿಯ ॥ —(ಕ. ಭಾರ)

ಆಮೇಲೆ—

ಸಾಂ।। ಚಿನ್ನದ ಬಟ್ಟಲ ಬಿಸುಟು ರಾಜನ ಸಭೆ । ಗಿನ್ನು ನಡೆಯೆ ದ್ರೌಪದಿಯು ।। ಕುನ್ನಿ ಕೀಚಕ ಬಂದು ಕಾಲಿಂದೊದೆದನಾಕೆ । ಯನ್ನು; ಹೇಳುವದೇನು? ವಿಧಿಯು ।।

ಆಗ—

ಚೌ।। ಬಿರುಸಿನಿಂದಲಿ ಹೊಡೆದ ಪೆಟ್ಟಿಗೆ-ತರುಣಿ ಕೆಡೆದಳು ಧೊಪ್ಪನೆ । ಮಿರುಗುತಿಹ ಸುಳಿಬಾಳೆ ದೊಣ್ಣೆಯ-ಭರದಿ ಕೆಡೆದಿಹುದೆಂದೆನೆ ॥ ಸುರಿಯುತಿರೆ ಮುಖದಿಂದ ರಕ್ತವು ತೊರೆಯ ತೆರದೊಳು ಸುಮ್ಮನೆ । ನೆರೆ ಸಹಿಸುತಲಿ ತನ್ನ ವ್ರತವನು-ಕೊರತೆಯಾಗಿಸದಂಗನೆ ॥

ಇದರ ಪರಿಣಾಮವೇನಾಯಿತೆಂದರೆ—

ಕೀ॥ ಮರೆಯೊಳಗಿದ್ದಾ ಸೂರ್ಯನಾಳ್ಗಳಾ । ದುರುಳನ ಶಿಕ್ಷಿಸೆ ಕೈಮಾಡೆ ॥ ಧರಣಿಗುರುಳ್ದನು ಬೇರ ಕಿತ್ತ ಬಲು । ಮರದಂದದಿ ಸಭಿಕರು ನೋಡೆ ॥

ಕೀಚಕನಿಗೆ ಹೀಗಾದದ್ದೇ ನ್ಯಾಯ; ಏಕೆಂದರೆ—

ಕಂ॥ ಯುವತಿಯರುಂ ಕವಿತೆಯುಮು । ತ್ಸವದಿಂ ಸ್ವೇಚ್ಛೆಗಳಿನ್ನೈದಲತಿ ಸುಖಮಕ್ಕುಂ; ॥ ತವಕದಿ ಬಲ್ಪಿಂದೆಳೆಯಲ್ । ಭುವನದೊಳತಿವಿರಸಮಾಗದಿರ್ಪುದೆ? ಕೆಳೆಯ ।। —(ಪ್ರ. ಚ)

ಇತ್ತ ಪಾಂಚಾಲಿಯು ಸಭೆಯ ಮುಂದಕ್ಕೆ ಬಂದು ಜಂಬಲಿಸಿದ್ದು—

ಕಾನಡ—ಆದಿತಾಳ

ಇದು ಸಮ್ಮತವೇ? ॥ ಪ ॥ ಮುದದಿ ನೋಳ್ಪುದು ॥ ಅ. ಪ ॥ ಬಸವಳಿದೆನ್ನ ನಿ । ಟ್ಟುಸಿರು ಪತಿಗಳಿಗೆ ॥ ಹಸನೆನಿಸಿಹುದೆಂತೊ! । ದೆಸೆಗಾಣೆ ನಾನು॥೧॥ ಜನರೆಲ್ಲ ಕಲ್ಲೆದೆ । ಯನು ಧರಿಸಿಹರೇನೊ! ॥ ಅನುನಯವಿಲ್ಲವೆ? । ಮನದೊಳಗಿಂತು ॥ ೨ ॥ ಅರಸು ನಪುಂಸಕ । ನರಸನಾಗಿಹನೇನೊ! ॥ ದುರುಳರ ಶಿಕ್ಷಿಸ । ಲರಿಯನೇನೊ? ಹಾ! ॥ ೩ ॥

ಈ ಮಾತು ಕಿವಿಗೆ ಬೀಳುತ್ತಲೆ—

ಚೌ ॥ ಭುಗುಭುಗಿಪ ರೋಷಾಗ್ನಿ ಹೆಚ್ಚಿದ - ಸೊಗಡು ತೋರಿತು ಮುಖದೊಳು ; । ಉಗುಳುತಿರ್ದವು ಕಿಡಿಗಳನು ಬಹು - ಬಗೆಬಗೆಯೊಳಾ ಕಣ್ಗಳು; ॥ ನೆಗೆದು ನಾಸಾಪುಟದಿ ದಳ್ಳುರಿ - ಹೊಗೆಯೊಡನೆ ಹೊರಬೀಳಲು । ವಿಗಡ ಭೀಮನು ತೋರ್ದನಾ ಮೀ - ಸೆಗಳು ಕುಣಿಕುಣಿದಾಡಲು ॥

ಆಗ ನಡೆದ ಒಂದು ಸೋಜಿಗವೇನೆಂದರೆ—

ಸಾ ॥ ಒಡನೆ ಭೀಮನಲ್ಲಿಹ ಹೆಮ್ಮರನನು । ತುಡುಕಹೋಗಲದ ನೋಡಿ॥ ನುಡಿದನು ಧರ್ಮಜನಡಿಗೆಗೀ ಮರದ! ಗೊಡವೆ ಬೇಡೆನುತ ಬೇಡಿ ॥

ಆಗ ದ್ರೌಪದಿಯು ರಾಜನನ್ನು ಕುರಿತು ಹೇಳುತ್ತಾಳೆ—

ದಿಂ ॥ ಸುಮ್ಮನಿಂತೆಲ್ಲಂ ನೋಡಬಹುದೆ? ರಾಜಾ, । ಧರ್ಮವೆಲ್ಲಕ್ಕಂ ನೀನು ಕಲ್ಪಭೂಜ; ॥ ಹರ್ಮ್ಯವಾಸಿಗಳಿಂಗೀ ಸ್ವಭಾವ ನೈಜ; । ಪೇರ್ಮೆಯುಳ್ಳದ್ದೆಂದೆನಿಸು ರಾಜನೋಜ ॥

ಟಿ॥ ರಾಜನ+ಓಜ = ರಾಜನ ಶಕ್ತಿಯು.

ಅದಕ್ಕೆ ರಾಜನ ಉದಾಸೀನತೆಯ ಉತ್ತರ—

ಶ್ಲೋ ॥ ಪರೋಕ್ಷಂ ನಾಭಿಜಾನಾಮಿ ವಿಗ್ರಹಂ ಯುವಯೋರಹಮ್ । ಅರ್ಥತತ್ತ್ವಮವಿಜ್ಞಾಯ ಕಿನ್ನು ಸ್ಯಾತ್ಕೌಶಲಂ ಮಮ? ॥ —(ಸಂ.ಭಾರ)

ಅ॥ ಹೊರಗೆ ನಿಮ್ಮಿಬ್ಬರಿಗೂ ಆದ ಜಗಳವನ್ನು ನಾನು ಕಾಣೆ; ನಡೆದ ಸಂಗತಿಯ ಮರ್ಮವನ್ನರಿಯದೆ ನನ್ನ ಕೌಶಲವೇನು ಮಾಡೀತು?

ಆಗ ಧರ್ಮರಾಜನಾಡಿದ್ದು—

ಸೀ ॥ ಪೊರೆವ ಸ್ವಭಾವದವನೀ ರಾಜನೆಲೆ ತರಳೆ, - ಸರಿಯಲ್ಲವೀ ಸಮಯವಿವನಿಗಿಲ್ಲಿ; । ಮರುಗುತಿರ್ಪರು ನಿನ್ನ ಪತಿಗಳೈವರು ತಮ್ಮ - ತರುಣಿಗಿಂತಾಗಿರ್ಪ ವಿಷಯದಲ್ಲಿ; । ಹೊರಬೀಳಿಸಲು ತಮ್ಮ ಕ್ರೋಧವನು ಸಲ್ಲದೆಂ - ದಿರುತಿರ್ಪರವರೀಗ ಮೌನದಲ್ಲಿ; । ಅರಿತಿಂದು ದುಃಖವನು ಸಹಿಸೆ ನಿನ್ನಯ ಕೀರ್ತಿ - ಪರಿವ್ಯಾಪಿಸಿ ಬೆಳಗುವದು ಲೋಕದಲ್ಲಿ; ॥ ಬರಿದೆ ನಿಂದಿಸ ಬೇಡ ಪತಿಗಳನ್ನು ; । ನೆರೆ

ತೋರು ನಿನ್ನ ಸೌಜನ್ಯವನ್ನು ; । ಮರೆಯದಿರು ನೀಂ ನಿನ್ನ ಧರ್ಮವನ್ನು ; । ಕರಗಗೊಡದಿರು ನಿನ್ನ ಧೈರ್ಯವನ್ನು ॥

ದ್ರೌಪದಿಯು ಸುಧೇಷ್ಣೆಯ ಮನೆಗೆ ಹೋಗಿ ನಡೆದ ಸಂಗತಿಯನ್ನು ಹೇಳಿದ ಮೇಲೆ ಅವರಿಬ್ಬರಿಗೂ ನಡೆದ ಮಾತೇನೆಂದರೆ—

ಸಾ॥ **ಸುದತಿಯೆ, ತಮ್ಮನ ಶಿಕ್ಷಿಸುವೆನು ನಿ। ನ್ನೆದುರಿನೊಳೆನಲು ಸುಧೇಷ್ಣೆ ॥**
ಸದೆವರೆನ್ನ ಗಂಡಂದಿರವನನೆಂ । ಬುದ ತಿಳಿಯೆಂದಳು ಕೃಷ್ಣೆ ॥

ಇಷ್ಟಾದ ಮೇಲೆ ಧರ್ಮರಾಯನು ಧರ್ಮಜಡನೆಂದೂ ಅರ್ಜುನಾದಿಗಳು ಧರ್ಮರಾಯನ ನೆರಳಿನಂತಿರುವರೆಂದೂ ಯೋಚಿಸಿ ಈಗಿನ ಕಾರ್ಯಸಾಧನೆಗೆ ಭೀಮನೇ ತಕ್ಕವನೆಂದು ದ್ರೌಪದಿ ಭೀಮನ ಬಳಿಗೆ ಬರುವಾಗ ಅವಳಿಗೆ ಆ ಅಡಿಗೆಯ ಮನೆ ಕಂಡದ್ದೆಂತೆಂದರೆ—

ರ॥ ಕಾಣಬಂತಾಕೆಗೆ ಅಡಿಗೆಯ ಮನೆಯು । ವಾಸನೆಗಳ ಸೊನೆಯು ॥ಪ॥
ಒಟ್ಟಿಹ ಶಾಕಾವಲಿಗಳ ಸಾಲು । ನಿಟ್ಟಿಸಿದರೆ ಕಣ್ಣುಗಳಿಗೆ ಸೋಲು । ಬಗೆಬಗೆಯ ಫಲಂಗಳ ರಾಶಿಗಳು । ಹೊಗೆಯಾಡುವ ಬೆಂದ ಪದಾರ್ಥಗಳು । ಹೊಳೆಯುತ್ತಿರೆ ರಾಜಾನ್ನದ ರಾಶಿ । ಹುಳಿಯನ್ನಗಳನು ನೋಡಲು ಗಾಸಿ । ಕೆಲಬಲದಲಿ ಸಂಬಾರದ ಚೂರ್ಣ । ತಿಳಿದು ನೋಡೆ ಬಗೆಬಗೆಯುಹ ವರ್ಣ । ಗಿರಿಗಳಾಗಿರಲು ಭಕ್ಷ್ಯಭೇದಗಳು । ತರಿಯಲು ಬಿದ್ದಿಹ ಕುರಿಹಂದಿಗಳು । ಹರಿಯುತ್ತಿರೆ ತನಿರಕುತದ ಪೊನಲು । ಅರಿಯೆ ಭಯಂಕರವಾಗಿಹುದೆನಲು । ಬೆಂದ ಮಾಂಸವಿರೆ ಬಗೆಬಗೆಯಲ್ಲಿ । ತಂದವುಗಳನಡಕುತ್ತಿರಲಲ್ಲಿ । ತರಿದ ರೆಕ್ಕೆ ಮೊಟಲಾಗಿಹವೆಲ್ಲ । ಹರಡಿಕೊಂಡಿಹುದು ಪೇಳಲು ಸಲ್ಲ ॥

ಆ ಅಡಿಗೆಯ ಮನೆಯಲ್ಲಿ ಭೀಮನಿದ್ದ ರೀತಿ—

ಶ್ಲೋ ॥ ಸಾಯಂ ಮಹಾನಸಶಯಂ ಶನಕೈರ್ಯಯೌ ಸಾ । ಭೀಮಂ ರಹಃ ಪೃಥುಶರಾವಕೃತೋಪಧಾನಮ್ ॥ ಭೂಮಾಧಿರೋಹಮಲಿನಂ ವಸನಂ ವಸಾನಮ್ । ನೀಲಾಂಬುವಾಹಪರಿವೀತಮಿವಾಚಲೇಂದ್ರಮ್ ॥ —(ಭಾರ.ಚಂ)

ಅ॥ ಕರೀಮೋಡಗಳು ಮುಸುಕಿಕೊಂಡಿರುವ ಪರ್ವತದಂತೆ ಹೊಗೆಯಿಂದ ಕಪ್ಪಾದ ಬಟ್ಟೆಯನ್ನು ಹೊದ್ದುಕೊಂಡು ದೊಡ್ಡದೊಂದು ಪಾತ್ರೆಯನ್ನು ತಲೆಗಿಂಬಾಗಿ ಮಾಡಿಕೊಂಡು ಸಾಯಂಕಾಲದಲ್ಲಿ ಅಡಿಗೇಮನೆಯಲ್ಲಿ ಮಲಗಿರುವ ಭೀಮನ ಬಳಿಗೆ ದ್ರೌಪದಿಯು ಏಕಾಂತವಾಗಿ ಬಂದಳು.

ದ್ರೌಪದಿಯು ಭಯಭಕ್ತಿಯಿಂದ ಭೀಮನನ್ನು ಎಬ್ಬಿಸಿದಾಗ ಅವರಿಬ್ಬರಿಗೂ ನಡೆದ ಮಾತೇನೆಂದರೆ—

ಕೀ॥ ನೆರಳ ನೋಡಿ ಕೆರಳುವ ಮದ್ದಾನೆಯ – ತೆರದೊಳೆದ್ದು **ಬರವೇಕೆಂದ;॥**
ತರುಣಿಯೆಂದಳೈತಂದೆನು ನಿನಗಾ । ನರುಹಲೆನ್ನ ಪರಿಭವದಂದ ॥

ಎಂದು ತನಗಾದುದನ್ನೆಲ್ಲ ವಿಸ್ತರಿಸಿ ಕೊನೆಗೆ ಹೇಳಿದ್ದೇನೆಂದರೆ—

ಸೀ ॥ ಪ್ರಾತಿಕಾಮಿಕನೆಂದು ಗೌಡಿಯಿಂದದೊಳೆನ್ನ - ನೀತಿದಪ್ಪಿದ ಮಾತಿನಿಂದ ಕರೆದ; । ಖಾತಿಯಿಂದೆನ್ನ ದುಃಶಾಸನನು ಕ್ರೂರತರ - ರೀತಿಯಿಂದಲೆ ಸೀರೆಗಳನು ಸೆಳೆದ; । ಪಾತಕವಿದೆನ್ನದೇ ಸೈಂಧವನು ತಾನೆನ್ನ - ಭೀತಿಗೊಳಿಸುತ್ತ ಮುಂದಲೆಯನೆಳೆದ; । ಈ ತೆರದೊಳಿಂದು ಕೀಚಕನೆನ್ನ ಪರಿಭವಿಸ - ಲೇತಕೀ ಧರೆಯ ಬಾಳುವೆಯ ಚಂದ; ॥ ಘಾತಕನ ನೀ ಕೊಲ್ಲದಿರ್ದೊಡೀಗ । ಸೋತ ನಾನಗ್ನಿಯೊಳ್ಬೀಳ್ವೆ ಬೇಗ; । ನಾಥ, ನೀಂ ಧರ್ಮಜಡನಾಗಬೇಡ; । ಭೂತಲದೊಳಿನ್ನು ಮಿರಬೇಡ ಗೂಢ ॥

ಅದಕ್ಕೆ ಭೀಮನು ನಿದ್ದೆಗಣ್ಣಿನಲ್ಲಿ ಕೊಟ್ಟ ಉತ್ತರ—

ಷ॥ ತರುಣಿರನ್ನಳೆ, ಕೇಳು ಎನ್ನೊಡ । ನರುಹಿದರೆ ಹುರುಳಿಲ್ಲ ; ಅಣ್ಣನ ಪರಮಧರ್ಮದಿ ಸಿಕ್ಕಿರುವೆನಿಲ್ಲಿಂದ ಮುಂದೆನ್ನ ॥ ಪುರುಷನೆಂದರಿಯದಿರು; ಮಿಕ್ಕಿನ। ನರನಕುಲಸಹದೇವರಿಂಗಿದ । ನೊರೆದು ದೈತ್ಯನ ಮುರಿದು ಸಂತೋಷದಲಿ ಬಾಳುವದು ।

—(ಕ.ಭಾರ)

ಹೀಗೆಂದು ಭೀಮನು ಮುಖವನ್ನು ತಿರುಗಿಸಿಕೊಳ್ಳುತ್ತಲೆ ಪಾಂಚಾಲಿಯು ತನ್ನಲ್ಲಿ ತಾನು ಹಂಬಲಿಸುತ್ತಾಳೆ—

ಖರಹರಪ್ರಿಯ—ಆದಿತಾಳ

ದುರದೃಷ್ಟಶಾಲಿಯಾದೆನೆ! । ಬಹುದೈನ್ಯಬಟ್ಟೆ ॥ ಪ ॥ ಯಮಸುತ ತಾನು ಧರ್ಮ । ಕ್ರಮದೊಳು ಜಡನಾದ; ॥ ಭ್ರಮೆಗೊಂಡನರ್ಜುನ । ಪ್ರಮದೆಯಾಗೀಪರಿ ॥೧॥ ನಕುಲನು ತಾನಶ್ವ । ನಿಕರರಕ್ಷಕನಾದ; ॥ ಸುಖದಿ ಕಿರಿಯನು ಗೋ । ಪ್ರಕರಪಾಲಕನಾದ ॥೨॥ ಗಂಧವ ತೇದು ತೇದು । ನೊಂದವೀ ಕೈಗಳು ; ॥ ಇಂದಾರಿಗುಸುರಲಿ? । ಬಂದ ವಿಪತ್ತನು ॥

ಇದನ್ನು ಕೇಳಿ ಭೀಮನು ಮತ್ತೆ ಸಂತಯಿಸಿದ್ದು—

ದಿಂ ॥ ಸಹಿಸು ನೀಂ ಕಾಂತೆ, ಸೀತೆ ಸಹಿಸಿದಂತೆ; । ಸಹಿಸು ಲೋಪಾಮುದ್ರೆಯನು ಮರೆಸುವಂತೆ; ॥ ಸಹಿಸು ದೈನ್ಯಂಗೊಂಡಾ ಸುಕನ್ಯೆಯಂತೆ ; । ಸಹಿಸು ನಾರಿಯರೊಳ್ಮೇಲುಪಜ್ಞೆಯಂತೆ ॥

ಅದಕ್ಕೆ ಪಾಂಚಾಲಿಯ ಉತ್ತರ—

ಸಾ ॥ ಮಥಿಸುತೆ ಜಟನಂ ಕೊಂದಂತೆ, ಜಯ। ದ್ರಥನ ಗರ್ವವನು ಕಳೆದಂತೆ, ॥ ಹತಗೈಯದಿರಲ್ಕೀಚಕನನು ನೀಂ । ಕ್ಷಿತಿಯೊಳಗೆ ಬಿಡೆನ್ನಯ ಚಿಂತೆ ॥

ಎಂದು ಕಾಲಿಗೆ ಬಿದ್ದ ದ್ರೌಪದಿಗೆ ಕೊನೆಗೆ ಭೀಮನು ಅಭಯವನ್ನು ಕೊಟ್ಟದ್ದು—

ಕೇ॥ ಏಳು ಸತಿಯೆ, ನಾ ಖೂಳದೈತ್ಯನನು । ಸೀಳುವೆನೀ ನಿಮಿಷಾರ್ಧದೊಳು; ॥ ಹೇಳು ನಾಟ್ಯಗೃಹಕ್ಕೈದೆಂದವನಿಗೆ । ಚಾಲವೇನು ! ಸಂತಸದಾಳು॥

ಮರುದಿನ ಪಾಂಚಾಲಿಯು ಕೀಚಕನ ಮನೆಯ ಮುಂದೆ ಸುಳಿದಾಡುತ್ತ ಕಾಣಿಸಿಕೊಂಡಾಗ

ಕೀಚಕನು ಮತ್ತೆ ತನ್ನ ಕಾಮಚೇಷ್ಟೆಗಳನ್ನು ತೋರಿಸಲು ಪರಸ್ತ್ರೀವ್ಯಸನವು ಪಾಪಕರವೆಂದು ಪಾಂಚಾಲಿಯು ಸಮಾಧಾನವನ್ನು ಹೇಳಿದ್ದು—

ಶ್ಲೋ ॥ ಜಗತ್ಯಾಮತ್ರ ಜನತಾ ಮತಾ ಕಾ ಮರಣೋನ್ಮುಖೀ । ಪ್ರಶ್ನವಾಗಿಯಮೇವೈತದುತ್ತರಾಯ ಪ್ರಜಾಯತೇ ॥ —(ಸು.ಲಾ)

ಅ॥ ಈ ಜಗತ್ತಿನಲ್ಲಿ (ಮರಣೋನ್ಮುಖೀ) ಸಾವಿನ ಕಡೆಗೆ ಮುಖವನ್ನು ಮಾಡಿದ ಜನರು (ಕಾ) ಯಾರು? ಈ ಪ್ರಶ್ನೆಯು ಮಾತೇ ಉತ್ತರವಾಗುತ್ತದೆ. ಹೇಗೆಂದರೆ (ಕಾಮ+ರಣೋನ್ಮುಖೀ) ವಿಷಯವಾಸನೆಯು ಕಡೆಗೆ ಮುಖವನ್ನು ಮಾಡಿದ ಜನರು.

ಹೀಗೆಂದು ಇನ್ನೂ ಹೇಳಿದ್ದೇನೆಂದರೆ—

ಚೌ ॥ ಕುಸುಮಶರ ಯಮನಪ್ಪನಮೃತವೆ - ವಿಷದ ಪರಿಯಂತಪ್ಪುದು; । ಬಿಸಿಯಹವು ನೀರ್ಗಲ್ಲು; ಬಂಧುಗ – ಳೊಸಗೆ ವೈರವೆನಿಪ್ಪುದು ; ॥ ಅಸಮಮಿತ್ರರ ಕೂಟವೇ ತಾ – ವಿಷಮಫಲವನು ತರುವದು; । ಶಶಿವದನೆಗಳುಪಿದ ದುರಾತ್ಮನ - ವಸುಧೆ ತಾ ಹೊರಲರಿಯದು ॥

ಇದರ ಮೇಲೆಯೂ ಕೀಚಕನು ದೈನ್ಯದಿಂದ ಹೇಳಿಕೊಂಡದ್ದರಿಂದ ಪಾಂಚಾಲಿಯು ಅವನಿಗೆ ಹೇಳಿದ್ದು—

ಸಾಂ ॥ ಪತಿಗಳೈವರಿಗೆ ನಾ . ಹೆದರುವೆನದರಿಂದೆ । ಹಿತದಿಂದ ಬಾ ನಾಟ್ಯ ಗೃಹಕೆ;॥ ಸತಿಯಳಪೇಕ್ಷೆಯ ಫಲವ ಭೋಗಿಪೆ ರಾತ್ರಿ। ಗತಿಶಯವೆನೆ ನಿನ್ನ ಗುಣಕೆ॥

ಆಮೇಲೆ ಪಾಂಚಾಲಿಯು ಭೀಮನ ಬಳಿಗೆ ಬಂದು ಎಲ್ಲವನ್ನೂ ತಿಳಿಸಿ ಮುಂದಿನ ಸನ್ನಾಹವನ್ನು ಮಾಡಿದ್ದು—

ರ॥ ಶೃಂಗರಿಸಿದಳಾಗ । ಮಾರುತಿಗೆ ಬೇಗ ॥ಪ॥ ಸರಸದಿ ನಡುವಿಗೆ ಸೀರೆಯನುಡಿಸಿ । ಕುರುಳ ಬಾಚಿ ಬೈತಲೆ ನೇವರಿಸಿ । ಅರಿಸಿನಕುಂಕುಮವಿಟ್ಟಾದರಿಸಿ । ಜರಿಯ ಕುಪ್ಪಸವ ಭರದಿಂ।ತೊಡಿಸಿ ವರಭೂಷಣಗಳ ಕರಗಳಿಗಿರಿಸಿ। ನೆರೆ ಸೊಂಟಕೆ ಪಟ್ಟೆಯನಳವಡಿಸಿ । ಕೊರಳಿಗೆ ಮುತ್ತಿನ ಹಾರವ ಧರಿಸಿ । ಉರುತರವಜ್ರದ ಪದಕವನಿರಿಸಿ । ವರವಂಕಿಗಳನು ತೋಳ್ಗಳಿಗಿಡಿಸಿ । ಸರಪಣಿ ಬುಗುಡಿಯ ಕರ್ಣದಿ ನಿಲಿಸಿ । ಮುರುಬಾವಲಿ ಮುಕುರವನಲಂಕರಿಸಿ । ಹರಳೋಲೆಯ ಸರಪಣಿ ಥಳಥಳಿಸಿ । ಅರಳೆಲೆ ಮುತ್ತಿನ ಬಟ್ಟುಗಳಿರಿಸಿ । ಹೆರಳಿಗೆ ಬಂಗಾರವನಳವಡಿಸಿ । ಸುರುಚಿರಪದಭೂಷಣಗಳ ತೊಡಿಸಿ । ತರತರ ರಚನೆಯು ಮೆರೆಯೆ ಪೊಗಳುತಲೆ । ವರದರ್ಪಣ ತೋರುತ ನಸುನಗುತ ॥೧॥ ಪರಿಕಿಸಿ ಭೀಮನು ಶಿರವ ತೂಗುತಲೆ । ಸರಸಾಕ್ಷಿಯೊಡನೆ ಸರಸವ ಮಾಡುತ । ಸುರರಿಗಮೃತವನ್ನೆರೆದನೆಗತಿಯೆಂ । ದ್ವೊರಟೈತರುತಿರೆ ಧರೆ ನಡುಗುತ್ತಿರೆ । ಅರಿಗಜಸಿಂಹನು ದುರುಳಕೀಚಕನ । ಮುರಿದು ಶೌರ್ಯವನು ತೊರೆಸುವೆನೆನ್ನುತ । ಸರಸಿಜಾಕ್ಷಿಯನು ವೆರಸಿ ನಾಟ್ಯಗೃಹ । ದ್ವೊರಗೆ ಓರ್ವರಂದರಿಯದಂದದೊಳ್ । ಭರದೊಳೈದಿ ಸುಂದರಿ ದ್ರೌಪದಿಯಂ ಮರೆಗೊಳಿಟ್ಟು ತಾ ವಗಗಿ ಮಂಚದೊಳ್ । ತರುಣಿ ನೋಡು ಬಲ್ ಬೆರಗು ತೋರ್ಪೆನಾ ।

ದುರುಳ ದೈತ್ಯನಂ ಬೆರಸಿ ಗುದ್ದಿತ । ಸ್ಮರಿಸಿ ಪ್ರಾಣವಂ ಸರಸಿಜಾಕ್ಷಿನಿ । ನ್ನಿರವ ಸಲಿಸುತೆ । ನ್ನುರುಪಪಡಿಸುವೆ । ನ್ಮರುಗಬೇಡವೆಂದುರುತರ ತೋಷದಿ । ಸರಿಯ ಪುರುಷನೇನ್ಬರನೆನ್ನುತ ಕಾ । ತರಿಸುತಂದು ಮಲಗಿರುವ ಭೀಮನಾ ॥ —(ಪಾ)

ಪಾಂಚಾಲಿಯು ಮರೆಯಲ್ಲಿ ನಿಂತಿದ್ದಾಗ ಅಲ್ಲಿಗೆ ಕೀಚಕನು ಬಂದು ಸಿದ್ಧವಾಗಿರುವ ಭೀಮನ ಸ್ತ್ರೀರೂಪವನ್ನು ನೋಡಿ ನಡೆಸಿದ ಮಾತು—

ಕೀ ॥ (ಕೀ) ನಿನಗೆ ನಾನು ಸಮನೆನಗೆ ಸರಿಯದಾರ್? । ವನಿತೆ, ಧನ್ಯನೆನಿಸಿದೆ ನಾನು; ॥ (ಭೀ) ಎನಗೆ ಸೋಲರಾರ್? ನೀಂ ಪರನಾರಿಯು । ರೆನು ಬಯಸದವೋಲ್ಗೈದಪೆನು ॥

ಎಂದು ಪ್ರಸನ್ನಳಾಗಿ ಮಾತಾಡಿದ್ದನ್ನು ಕೇಳಿ ಕೀಚಕನು ಅವಳ ಎದೆಯಮೇಲೆ ಕೈಆಡಿಸುವ ಧೈರ್ಯವನ್ನು ಮಾಡಿದ್ದಾನೆ. ಪಾಪ! ಅದರ ಅಪಾಯವು ಗೊತ್ತಿಲ್ಲ.

ಶ್ಲೋ ॥ ಸರ್ಪಸ್ಯ ರತ್ನೇ, ಕೃಪಣಸ್ಯ ವಿತ್ತೇ, । ಸತ್ಯಾಃ ಕುಚೇ, ಕೇಸರಿಣಶ್ಚ ಕೇಶೇ, ॥ ಮಾನೋನ್ನತಾನಾಂ ಶರಣಾಗತೇ ಚ, । ಮೃತೌ ಭವೇದನ್ಯಕರಪ್ರಚಾರಃ ॥

ಅ॥ ಹಾವಿನ ಹೆಡೆಯ ರತ್ನದಮೇಲೆಯೂ ಜಿಪುಣನ ಹಣದಮೇಲೆಯೂ ಪತಿವ್ರತೆಯರ ಕುಚಗಳಮೇಲೆಯೂ ಸಿಂಹದ ಕೇಸರಗಳ ಮೇಲೆಯೂ ಬಹಳ ಮಾನಿಷ್ಠರನ್ನು ಶರಣುಹೊಕ್ಕವರ ಮೇಲೆಯೂ ಮತ್ತೊಬ್ಬರ ಕೈ ಆಡುವದೆಂಬುದು ಸತ್ತಮೇಲೆಯೇ ಸರಿ,

ಆಗ ಆಕೆಯ ಎದೆಯನ್ನು ಮುಟ್ಟಿನೋಡಿ ಕಾಠಿಣ್ಯವನ್ನು ಅನುಭವಿಸಿ ಬೆಚ್ಚುಬಿದ್ದ ಕೀಚಕನು ಪಾಂಚಾಲಿಯೊಡನೆ ಮಾತು ನಡೆಸಿದ್ದು—

ಸಾಂ ॥ (ಕೀ) ಫುಲ್ಲಲೋಚನೆಯೆ, ನಿನ್ನೆದೆಯ ನೋಡಲು ಸಾಣೆ । ಕಲ್ಲಿನಂದದಿ ತೋರ್ಪುದೇಕೆ? ॥ (ಭೀ) ಖುಲ್ಲತನದಿ ಪರಸತಿಯ ಮೋಹಿಸುವಗೆ । ಬೆಲ್ಲಬೇವಹುದಿಲ್ಲವೇಕೆ?॥ (ಕೀ) ಚಪಲನೇತ್ರೆಯೆ, ನಿನ್ನ ರೂಪುರೇಖೆಗಳೆಲ್ಲ । ವಿಪರೀತವಾಗಿಹುದೇನು ? ॥ (ಭೀ)ಚಪಲಹೃದಯರಿಗೆ ಸಫಲವಾಗಿದ್ದರೂ । ವಿಫಲವಲ್ಲದೆ ಮತ್ತಿನೇನು? ॥ (ಕೀ) ದಿಟವಾಗಿ ಪೇಳಿನ್ನು ದೀನನಾದವನೊಳು । ಕುಟಿಲವ ಮಾಡಲು ಸಲ್ಲ ॥ (ಭೀ) ಕುಟಿಲೆಯರೆಂಬುದನರಿತು ನೀನೀಗ ಮ । ರ್ಕಟನಂತೆ ಸಿಲುಕಿದೆಯಲ್ಲ! ॥

ಆದರೂ ಅವಳನ್ನು ಸ್ತ್ರೀಯೆಂದೇ ಭ್ರಮಿಸಿ ಕೀಚಕನು ತನ್ನ ಕಾಮುಚೇಷ್ಟೆಯನ್ನು ಬೆಳೆಸಿದ ಫಲ—

ಶ್ಲೋ ॥ ಇತ್ಥಂ ಸ ಸಾಂತ್ವವಚನೋದಯಮರ್ಧಮಂಚ । ಮಾರೋಢುಮಾನಮಿತಪೂರ್ವತನೋಃ ಸಭೀಮಃ ॥ ಮುಷ್ಟ್ಯಾ ಹತಿಂ ನಿಟಿಲಸೀಮ್ನಿ ಚಕಾರ ಶತ್ರೋಃ । ಆಘುರ್ಲಿಪಿಂ ಶಿಥಿಲಯನ್ನಿವ ಧಾತೃದತ್ತಾಮ್ ॥ —(ಭಾರ.ಚಂ)

ಅ॥ ಹೀಗೆ ಅವನು ಸಮಾಧಾನದ ಮಾತುಗಳನ್ನಾಡುತ್ತ ಅರ್ಧಮಂಚವನ್ನು ಹತ್ತುವದಕ್ಕೆ ತನ್ನ ಶರೀರದ ಮುಂಭಾಗವನ್ನು ಬಗ್ಗಿಸಿದಾಗ ಭೀಮನು ಅವನ ಹಣೆಯಲ್ಲಿ ಬ್ರಹ್ಮನು ಬರೆದಿರುವ

ಆಯುಷ್ಯಿನ ಗೆರೆಯನ್ನು ಅಳಿಸುವವನಂತೆ ಅವನ ಹಣೆಯ ಮೇಲೆ ತನ್ನ ಮುಷ್ಟಿಯಿಂದ
ಮುಟ್ಟಿದನು.

ಆಗ ಪ್ರಕಟವಾಗಿ ಅವರಿಬ್ಬರಿಗೂ ನಡೆದ ಯುದ್ಧ—

ರ॥ ಆಯಿತವರಿಬ್ಬರಿಗುತ್ಕಟಯುದ್ಧ । ತೋರಿದರು ವಿರುದ್ಧ ॥ ಪ ॥ ಅನಿಲ
ಜನಾ ಕೀಚಕನ ಮುಂದಲೆಗೆ । ಒನೆಯುತ ಕೈಹಾಕಿದನಡಿಗಡಿಗೆ । ಕರಿಣಿಯ
ಬಯಸುವ ಕರಿಗಳ ತೆರದಿ। ಭರದಿಂ ಹೋರಾಡುತಲತಿಭರದಿ । ಹುಲಿಗಳಂತೆ ಗರ್ಜ
ನೆಗೈಯುತ್ತ । ಬಲು ಹೆಚ್ಚಿದ ವೈರವ ತೋರುತ್ತ । ಎತ್ತು ಹುತ್ತುಗಳನೆತ್ತುವ ಪರಿ
ಯೊಳು । ಮತ್ತರೊಬ್ಬರೊಬ್ಬಗನೆತ್ತಿರಲು । ಕಾಲ ತುಳಿತದಿಂ ಧಾರಿಣಿ ನಡುಗಲು।
ಕೀಲ ಮುರಿವ ರೋಷವು ಮೈಗೇರಲು । ಹೊಡೆವರೊಬ್ಬರೊಬ್ಬರ ಬಲವಾಗಿ ।
ಬಿಡದೆ ಗುದ್ದುವರು ತಪ್ಪದೆ ಬಾಗಿ । ಜರಿವರೊಬ್ಬರೊಬ್ಬರನೆಡೆಬಿಡದೆ । ಭರದೊಳ
ಪ್ಪಳಿಸುವರು ಕಂಗೆಡದೆ । ತಳ್ಳುತ್ತಿರ್ಪರು ಢೀಕೊಡುತಿಹರು । ಉಳ್ಳಬಲದಿ ತಿವಿ
ವರು ಹಿಡಿಯುವರು । ಏಳಲೊಬ್ಬ ಬೀಳುವ ಮತ್ತೊಬ್ಬ । ಹೇಳಲೇನನಚ್ಚರಿಯ
ಬ್ಬಬ್ಬ । ಅನಿಲಸುತನನೊದೆದನು ಕೀಚಕನು । ಒನೆದೊರಗಿದನಹಿಯಂದದೊಳ
ವನು । ಭೀಮನು ಕೀಚಕನನು ಗುದ್ದಲು ತಾ । ಕಾಮುಕನಿದ್ದನು ನಿಟ್ಟುಸಿರಿಡುತ।
ತಗ್ಗು ತೊಮ್ಮೆ ಹೊಂಚುತ ಮತ್ತೊಮ್ಮೆ । ಬಗ್ಗಿ ಕಾಲು ತೊಡರುತ ಮೇಣೊಮ್ಮೆ॥

ಈಪ್ರಕಾರ ಕೆಲವು ಹೊತ್ತು ನಡೆದಮೇಲೆ—

ರ॥ ನೋಡಿ ಕೀಚಕನನಾ ಕಲಿಭೀಮ । ತೀಡಿ ಕಾಲ ತಿವಿದೊಡನುದ್ದಾಮ ।
ಮುಷ್ಟಿಯನ್ನು ಬಿಗಿಗೊಳಿಸುತ್ತಾಗ । ಮುಟ್ಟುತವನ ತಲೆಯನು ಬಲು ಬೇಗ । ಸುರ
ಪನು ಬೆಟ್ಟವ ಸೀಳುವ ತೆರದಿ । ದುರುಳನನುರೆ ಸೀಳಿದನಾಕ್ಷಣದಿ । ಒಡೆಯಿತು
ತಲೆ ಹೋಳುಗಳೆರಡಾಗೆ । ಸಿಡಿದು ಕಣ್ಣು ಗುಡ್ಡೆಗಳೀ ಹೋಗೆ । ಹೊರಗೆ ಬಂತು
ನಾಲಿಗೆ ತಾನಿರದೆ । ಘುರದೊಳಗಾಯ್ತುವನುಬ್ಬಟೆ ಬರಿದೆ । ಮುರಿದು ಮುದ್ದೆಗೈ
ದನು ಕಲಿಭೀಮ । ಜರಿದುರುಳಿಸಿದನು ಬಲು ನಿಸ್ಸೀಮ । ಕೊಂದು ಕೀಚಕನನಿಂತೀ
ಪರಿಯಲಿ । ಮಿಂದು ಮಲಗಿದನು ಪಾಕದ ಮನೆಯಲಿ ॥

ಆಮೇಲೆ—

ಕೀ ॥ ಪತಿಗಳು ದುರುಳನ ಕೊಂದಿಹರೆಂದಾ । ಸತಿಯನೆ ಕೇಳ್ದುಪಕೀಚ
ಕರು ॥ ಖತಿಯೊಳವಳನವನೊಡನೆ ಸುಡುವೆವೆ। ನ್ನುತ್ತೆ ದ್ರೌಪದಿಯನು ಕಟ್ಟಿದರು ॥
ಸಾ॥ ಮರಳಿ ದ್ರುಪದ ಸುತೆ ದೈನ್ಯದಿ ಚೀರಲು । ಭರದಿಂ ಬಂದಾ ಭೀಮ ॥
ಒರಸಿದನವರನು ತಾಳೆಯ ಮರದಿಂ ॥ ದುರುಧೈರ್ಯದಿ ನಿಸ್ಸೀಮ ॥

ಈ ಸುದ್ದಿಗಳನ್ನೆಲ್ಲ ತಿಳಿದ ಊರಜನರು ಮತ್ತು ವಿರಾಟನು ಕೂಡ ಆ ಪಾಂಚಾಲಿಯನ್ನು
ಹೊರಗೆ ಹಾಕಿದರೆ ಮಾತ್ರ ತಮ್ಮ ಕ್ಷೇಮವೆಂದು ಸುಧೇಷ್ಣೆಗೆ ಹೇಳಲಾಗಿ—

ಸಾಂ || ಹೆದರುವೆ ನಿನ್ನಿಂದ ದ್ರೌಪದಿ, ಹೊರಡಿನ್ನು । ಮುದದಿಂದಲೆನಲು ಸುಧೇಷ್ಣೆ ॥ ಹದಿಮೂರು ದಿನವಿದ್ದು ಹೊರಡುವೆ ನಿಮಗಿನ್ನು । ಮುದವೀವೆನೆಂದಳು ಕೃಷ್ಣೆ ॥

ಈ ಪ್ರಕಾರ ದ್ರೌಪದಿಯ ಮೇಲೆ ಕಣ್ಣು ಹಾಕಿ ಕೀಚಕನು ಕೆಟ್ಟದ್ದನ್ನು ಲಕ್ಷ್ಯದಲ್ಲಿಟ್ಟುಕೊಂಡು ಭಗವದ್ಭಕ್ತರು ಕೀರ್ತನಾರಂಭದಲ್ಲಿ **"ಪರನಾರಿಯರನು ಪರಿಹರಿಯಳಲಿಸಿ"** ಎಂದು ಮುಂತಾಗಿ ಉಪದೇಶಿಸಿ ುವರು.

ಉತ್ತರಗೋಗ್ರಹಣ

ಪೀಠಿಕೆ—ಗೋರಕ್ಷಣೆ

ಶುದ್ಧ ಸಾವೇರಿ—ರೂಪಕ

ಮಾಡಿ ಧನ್ಯನಾಗು ಮನುಜನೆ, । ಗೋರಕ್ಷಣೆಯನು ॥ ಪ ॥ ಮಾಡಿ ಧನ್ಯನಾಗು ಭಕ್ತಿಗೂಡಿ ಯತ್ನದಿಂದ ನೀನು ॥ಅ.ಪ॥ ಕರುಣವಿಲ್ಲದೆ ಗೋಗಳನಪ । ಹರಿಸುವದತಿಪಾಪವಹುದು; । ತಿರುಗಿಪುದದ ಮೊದಲ ಕೆಲಸ; । ಧರೆಯೊಳಗದು ಜಯದ ತಾಯಿ ॥೧॥

ಪ್ರಪಂಚದಲ್ಲಿ ಜನರು ಲೌಕಿಕಸುಖದ ವಿಚಾರಗಳಿಗೇ ಮನಸ್ಸನ್ನು ಸೂರೆಮಾಡಿಕೊಂಡಿರುವದರಿಂದ ಧರ್ಮದ ತತ್ತ್ವವನ್ನು ತಿಳಿಯಲಾರದೆ ಹೀನಸ್ಥಿತಿಗೆ ಹೋಗುತ್ತಿರುವದನ್ನು ನೋಡಿ ತಿಳಿದವರು ಉಪದೇಶಿಸಿರುವದೇನೆಂದರೆ—

ಕಂ॥ ಪರಮಾರ್ಥಮಪ್ಪುದಂ ಮ । ಚ್ಚರಿಸದೆ, ಕೋಪಿಸದೆ, ಡಂಗೆಗೊಳ್ಳದೆ, ಪಕ್ಷ || ಕ್ಕುರಿದೇಳದೊಂದೆ ಮನದಿಂ । ನಿರುತಂ ಕೇಳ್ವವನೆ ಧರ್ಮದೊಳಗಂ ತಿಳಿಗುಂ ॥ —(ಧ.ಅ)

ವಿಷಯದ ವಿಚಾರದ ತುಚ್ಛತ್ವವನ್ನು ಕವಿ ನಿರೂಪಣಮಾಡುವದೇನೆಂದರೆ—

ವೃ ॥ ಅರಳಿಯ ಕಿಚ್ಚಿನಂತೆ ಧನಮಾಯು ಬಸಂತದ ಶೋಭೆಯಂತೆ, ಪೆ । ರ್ಮೊರೆಗಳ ಬಂಬಲಂತೆ ಸೊಬಗೊಡ್ಡಿದ ಮೇಘಸಮೂಹದಂತೆ ನಂ ॥ ಟರ ಕಡುಗೂರ್ಮೆ, ಪಣ್ತುಮರನಂತೆ ವಿಳಾಸದಗುರ್ವು, ಮೈಮೆಯು । ಬ್ಬರಮದು ನೀರ ಬೊಬ್ಬುಳಿಕೆಯಂತೆ ನಿರಂತರಮಲ್ಲಿವೆಲ್ಲಿಯುಂ ॥ —(ಧ.ಅ)

ಆದ್ದರಿಂದ ಭಗವದ್ಭಕ್ತರು ಮನುಷ್ಯನಿಗೆ ಹೇಳಿರುವ ಬುದ್ಧಿವಾದವೇನೆಂದರೆ—

ನಾಟಕುರಂಜಿ—ಆದಿತಾಳ

ಹುಡುಕಬಾರದೆ? । ಮೃಡನ ಪಾದವ । ಸಡಗರದಲಿ । ಮನವೆ, ಈಗ ॥ಪ॥ ಕೆಡುವ ವಿಷಯಗಳಿಗೆ ಬಾಯನು । ಬಿಡುವದೇತಕೆ? ಪೊಡವಿಯೊಳಗೆ ॥ ಅ. ಪ ॥ ವೇದಶಾಸ್ತ್ರಗಳು ಸಾಧಿಸಲಾಗದ, । ಭೇದಬುದ್ಧಿಯಿಂ ತಿಳಿಯಲು ಬರದೆ, ॥ ಸಾಧಕಜನರಿಗೆ ಹರ್ಷವನೀವುದ, । ಮೇದಿನಿಗೆಲ್ಲ ಆಧಾರವಾಗಿಹುದ ॥ ೧ ॥ ತಿಳಿಯದ ಜನರಿಗೆ ದೂರವಾಗಿಹುದ, । ತಿಳಿದವರಿಗೆ ತಮ್ಮಾತ್ಮವಾಗಿಹುದ, ॥ ಬಲಿದ ವಿವೇಕಕೆ ಗೋಚರವಪ್ಪುದ, । ಸಲೆ ಗುರುಕರುಣದಿ ಸುಲಭವಾಗುವದ ॥೨॥ ಧರೆ, ಜಲ-ಮೊದಲಾಗಿಹ ಬಹುರೂಪದಿ । ಪರಿಪರಿಯಲಿ ತಾ ತೋರಿದರೂ ॥ ಅರಿಯೆ ವಿಕಾರವನೆಂದಿಗು ಪಡೆಯದೆ । ಪರತರವಹ ಚಿದ್ರೂಪದೊಳಿಹುದ ॥ ೩ ॥ —(ಭಕ್ತಿ.ಗೀ)

ದೇವರನ್ನು ಹುಡುಕುವಾಗ ಮನುಷ್ಯನ ಭಾವನೆ ಹೇಗಿರಬೇಕೆಂದರೆ—

ವೃ॥ ನಾಲಿಗೆಗಾವುದಿಚ್ಛೆ? ತವ ನಾಮರಸಾಯನಮಂತೆ; ಎನ್ನ ಚಿ । ತ್ತಾಲಯದೊಳ್ಬೆಳಪ್ಪ ಮಣಿದೀಪಮದಾವುದು? ನಿನ್ನ ರೂಪೆ; ಪೊ ॥ ಯ್ಮಾಲೆಯ ಮೆಯ್ಯ ಭಾರಣೆಯ ಪಿಂಗಿಸುವೌಷಧಿ ಯಾವುದೆನ್ನ ಚಿ । ತ್ಪಾಲಕ ನಿನ್ನ ಮಾರ್ಗದ ತಪಂಗಳಲಾ! ಅಪರಾಜಿತೇಶ್ವರಾ ॥ —(ಅ.ಶ)

ಈ ಭಾವನೆ ಹುಟ್ಟಬೇಕಾದರೆ ಸಂಸಾರದಲ್ಲಿ ಬೇಸರಹುಟ್ಟಿರಬೇಕೆಂಬುದನ್ನು ಭಗವದ್ಭಕ್ತರು ಸೂಚಿಸಿರುವದೇನೆಂದರೆ—

ಉ ॥ ಮನೆಯೆಂಬ ಆಶೆಯೆನ್ನ ಮುಂದುಗೆಡಿಸುತಿದೆ; ಮನೆವಾರುತೆಯು ಎನ್ನ ಭಂಗಪಡಿಸುತಿದೆ; ಸುತರಾಶೆಯು ಎನ್ನ ದೈನ್ಯಪಡಿಸುತಿದೆ; ಇನಿತಾಶೆಯ ಕಿದು ಬುದ್ಧಿ ನಿನ್ನಲ್ಲಿ ನಿಲುವಂತೆ ಮಾಡೊ ಸಿರಿ ಪುರಂದರವಿಠಲರಾಯ ॥ —(ದಾ)

ಭಗವಂತನ ಹೊರತು ಬೇರೆ ಹಿತರಿಲ್ಲವೆಂಬುದನ್ನು ಭಕ್ತರು ಹಾಡಿರುವದೇನೆಂದರೆ—

ಕಾಂಬೋದಿ—ಝಂಪೆ

ಆರೂ ಹಿತವರೆಂದು ನಂಬಬೇಡ; ॥ ಪ ॥ ಯಾರಿಗ್ಯಾರಿಲ್ಲ ಆಪತ್ತು ಬಂದೊದಗಿದರೆ ॥ಅ.ಪ॥ ಜನಕ ಹಿತದವನೆಂದು ನಂಬಬಹುದೇ ? ಹಿಂದೆ । ತನಯ ಪ್ರಹ್ಲಾದನಿಗೆ ಪಿತ ಮುನಿದನು; ॥ ಜನನಿಯೇ ರಕ್ಷಿಸುವಳೆಂತೆಂಬೆನೇ ? ಕುಂತಿ । ತನಯ ರಾಧೇಯನಿಗೆ ಎರಡನೆಣಿಸಿದಳು ॥ ೧ ॥ ಮಗನು ತೆತ್ತಿಗನು ಎನೆ ಕಂಸ ತನ್ನಯ ಪಿತನ । ನಿಗಳದೊಳಗಿಕ್ಕುತ್ತ ಬಂಧಿಸಿದನು; ॥ ಜಗವರಿಯೆ ಸೋದರರು ಮಮತೆಯುಳ್ಳವರೆನಲು । ಹಗೆ ಹೊರಿಸಿ ವಾಲಿಯನು ಇನಜ ಕೊಲಿಸಿದನು ॥೨॥ ತನಗೆ ದೇಹಾನುಬಂಧಿಗಳೆ ಬಂಧುಗಳೆಂದು । ಮನದಿ ನಿಶ್ಚಯವಾಗಿ ನಂಬಬೇಡ; । ಘನಕೃಪಾನಿಧಿ ಕಾಗಿನೆಲೆಯಾದಿಕೇಶವನ । ಅನುದಿನದಿ ನಂಬಿದವಗಿಹಪರದ ಸುಖವು ॥ ೩ ॥ —(ದಾ)

ಅದ್ದರಿಂದಲೇ ಜೀವನು ಪರಮೇಶ್ವರನನ್ನು ಬೇಡಿಕೊಳ್ಳಬೇಕಾದ್ದೇನೆಂದರೆ

ವೃ ॥ ಅಯ್ಯೋ! ಕುತ್ಸಿತಯೋನಿಯೊಳ್ನುಸುಳ್ವುದೆತ್ತಾನೆತ್ತ! ಚೀ! ನಾರು ವೀ। ಮೈಯೆತ್ತೆನ್ನಯ ನಿರ್ಮಲಪ್ರಕೃತಿಯೆತ್ತೀ ದೇಹಜವ್ಯಾಧಿಯಿಂ ॥ ಪುಯ್ಯಲ್ವೆತ್ತಿಹುದೆತ್ತಲೆನ್ನ ನಿಜವೆತ್ತೊಯ್ದೆನ್ನ ನಿಮ್ಮತ್ತ ದ। ಮ್ಮಯ್ಯಾ! ರಕ್ಷಿಸು ರಕ್ಷಿಸಾ! ತಳುವಿದೇಂ ರತ್ನಾಕರಾಧೀಶ್ವರಾ ॥ —(ರ.ಶ)

ಹೀಗೆ ದೇವರಿಗೆ ಶರಣುಹೋಗುವದಕ್ಕೆ ಮನುಷ್ಯನಿಗೆ ಆಶೆಯೊಂದು ಯಾವಾಗಲೂ ಅಡ್ಡ ಬಂದಿರುವದು. ಹೇಗೆಂದರೆ—

ಕಂ॥ ನರೆ ಶಿರವಂ, ತೆರೆ ಮೊಗಮಂ, । ನೆರೆ ಮುಸುಕಿ ಶರೀರಮೆಲ್ಲ ಬಡವೆನಿಸಿದೊಡಂ ॥ ಅರರೆ! ದುರಾಶೆಯದೊಂದೇ। ತರುಣನ ತೆರದಿಂದೆ ಕುಣಿವುದೇಗೆಯ್ದಪೆನಾಂ ॥ (ಭ. ವೈ)

ಈ ಆಶೆಯಿಂದಾಗುವ ಕೆಟ್ಟ ಪರಿಣಾಮವೇನೆಂದರೆ—

ಶ್ಲೋ ॥ ಹರತಿ ಪರಧನಂ; ನಿಹಂತಿ ಜಂತೂನ್; । ವದತಿ ತಥಾನೃತನಿಷ್ಠುರಾಣಿ ಯಶ್ಚ ॥ ಅಶುಭಜನಿತದುರ್ಮದಸ್ಯ ಪುಂಸಃ । ಕಲುಷಮತೇರ್ಹೃದಿ ತಸ್ಯ ನಾಸ್ತ್ಯನಂತಃ ॥ —(ವಿ.ಪು)

ಅ॥ ಯಾವನು ಮತ್ತೊಬ್ಬರ ಹಣವನ್ನಪಹರಿಸುತ್ತಾನೊ ಪ್ರಾಣಿಗಳನ್ನು ಕೊಲ್ಲುತ್ತಾನೊ ಮತ್ತು ಸುಳ್ಳುಮಾತನ್ನೂ ಮನಸ್ಸು ನೋಯುವ ಮಾತುಗಳನ್ನೂ ಆಡುತ್ತಾನೊ ಅಂಥ ಅಮಂಗಲವಾಸನೆಯಿಂದ ಹುಟ್ಟಿದ ಮದವುಳ್ಳಂಥ ಮತ್ತು ಪಾಪಬುದ್ಧಿಯುಳ್ಳಂಥ ಆ ಮನುಷ್ಯನ ಹೃದಯದಲ್ಲಿ ಪರಮಾತ್ಮನು ಇರುವದಿಲ್ಲ.

ಅಂಥ ಮನುಷ್ಯನಿಗೆ ದೇವರೊಬ್ಬನಿರುವನೆಂಬ ಭಾವನೆಯೇ ಬರುವದಿಲ್ಲ. ಇದರಿಂದಾಗುವದೇನೆಂದರೆ -

ಶ್ಲೋ॥ ದೇವಾನ್ಭಾವಯತಾನೇನ; ತೇ ದೇವಾ ಭಾವಯಂತು ವಃ; । ಪರಸ್ಪರಂ ಭಾವಯಂತಃ ಶ್ರೇಯಃ ಪರಮವಾಪ್ಸ್ಯಥ ॥ —(ಭ. ಗೀ)

ಅ॥ ದೇವತೆಗಳಮೇಲೆ ಪ್ರೇಮವನ್ನು ಮಾಡಿರಿ. ಇದರಿಂದ ಆ ದೇವತೆಗಳು ನಿಮ್ಮ ಮೇಲೆ ಪ್ರೇಮವನ್ನು ಮಾಡಲಿ. ಹೀಗೆ ಒಬ್ಬರಿಗೊಬ್ಬರು ಪ್ರೇಮವನ್ನು ಮಾಡಿ ಹೆಚ್ಚಿನ ಶ್ರೇಯಸ್ಸನ್ನು ಪಡೆಯಿರಿ.

ಎಂದು ಹೇಳಿರುವಂತೆ ದೇವತಾಸೇವೆ ನಡೆಯದೆ ದೇವರಿಂದ ನಮಗೆ ದೊರೆಯುವಂಥ ಮಳೆಬೆಳೆಗಳೆಲ್ಲ ನಿಂತು ಹೋಗುವವು. ಮನುಷ್ಯನಿಗೆ ದೇವತೆಗಳ ಪ್ರತ್ಯಕ್ಷರೂಪವೆಂದರೆ ಆಕಳು. ಹೇಗೆಂದರೆ ಗೋಪೂಜೆಯನ್ನು ಮಾಡುವವರು ಹೇಳುವ ಶ್ಲೋಕವನ್ನು ನೋಡಿ—

ಶ್ಲೋ॥ ಲಕ್ಷ್ಮೀರ್ಯಾ ಲೋಕಪಾಲಾನಾಂ ಧೇನುರೂಪೇಣ ಸಂಸ್ಥಿತಾ। ಘೃತಂ ವಹತಿ ಯಜ್ಞಾರ್ಥೇ ಮಮ ಪಾಪಂ ವ್ಯಪೋಹತು ॥ —(ಸು)

ಅ॥ ಆಕಳ ರೂಪದಿಂದ ಇರುವಂಥ ಯಾವ ದಿಕ್ಪಾಲಕರ ಭಾಗ್ಯದೇವತೆಯು ಯಜ್ಞಾರ್ಥವಾಗಿ ತುಪ್ಪವನ್ನು ಧರಿಸಿರುವಳೊ ಅವಳು ನನ್ನ ಪಾಪವನ್ನು ಕಳೆಯಲಿ.

ಹೀಗೆ ಆಕಳು ಪಾಪವನ್ನು ಕಳೆಯುವಂಥ ಪರಲೋಕಸಾಧನಮಾತ್ರವೇಅಲ್ಲ; ವ್ಯವಹಾರಕ್ಕೆ ಕೂಡ ಆದರ ಉಪಯೋಗವೆಷ್ಟೆಂದರೆ—

ಕಾಂಬೋಧಿ—ಝಂಪೆ

ಹರಿಹರಿ ಗೋವು ನಾನು ॥ ಪ ॥ ಇಟ್ಟರೆ ಸಗಣಿಯಾದೆ; । ತಟ್ಟಿದರೆ ಕುರುಳಾದೆ; । ಸುಟ್ಟರೆ ನೊಸಲಿಗೆ ವಿಭೂತಿಯಾದೆ; ॥ ತಟ್ಟದೇ ಹಾಕಿದರೆ ಮೇಲು ಗೊಬ್ಬರವಾದೆ; । ನೀನಾರಿಗಾದೆಯೋ ? ಎಲೆ ಮಾನವಾ ॥ ೧ ॥ ಹಾಲಾದೆ ಕರೆದರೆ; ಮೊಸರಾದೆ ಹೆತ್ತರೆ; । ಮೇಲೆ ಕೆನೆಗಡೆದರೆ ಬೆಣ್ಣೆಯಾದೆ ॥ ಮೇಲಾದ ತುಪ್ಪವೇ ನಾನಾದೆ ಕಾಸಿದರೆ; । ನೀನಾರಿಗಾದೆಯೋ ? ಎಲೆ ಮಾನವಾ ॥ ೨ ॥ ಉಳುವೆ ನಾ ಭೂಮಿಯನು; ಹೊರುವೆ ನಾ ಹೇರನ್ನು; ॥ ತುಳಿದು ಕಡ್ಡಿಯ ಕಾಳ ವಿಂಗಡಿಸುವೆ; । ಕಳಪೆಯಾಗಿಹ ನೆಲವ ನಗುವ ತೋಪನು ಮಾಳ್ಪೆ; । ನೀನಾರಿಗಾದೆಯೋ ? ಎಲೆ ಮಾನವಾ ॥ ೩ ॥ ಹಾಯೆ ಹರಿಗೋಲಾದೆ; ರಾಯಭೇರಿಗೆ ಆದೆ; ರಾಯರಾ ಕಾಲಿಗೆ ಮುಳ್ಮೊತ್ತು ಆದೆ; ॥ ಆಯವರಿತು ಹೊಡೆಯೆ ಮಧುರ ಗಾನಕ್ಕಾದೆ; ನೀನಾರಿಗಾದೆಯೋ ? ಎಲೆ ಮಾನವಾ ॥ ೪ ॥ ಹಾದಿಬೀದಿಯಲಿರುವ ಕಸದ ಹುಲ್ಲನು ಹುಡುಕಿ । ಮೇದು ಮನೆಗೈದಿ ನಾನಮೃತವೀವೆ; ॥ ಅದನುಂಡು ನನಗೆರಡ ಬಗೆವ ಮಾನವ, ಹೇಳು । ನೀನಾರಿಗಾದೆಯೋ ? ಎಲೆ ಮಾನವಾ ॥ —(ದಾ)

ಆದ್ದರಿಂದಲೇ ದೊಡ್ಡವರು ಹೇಳುವದೇನೆಂದರೆ—

ತ್ರಿ॥ ತುರುಕರಿಲ್ಲದ ಊರು ನರಕಭಾಜನವಯ್ಯ; । ತುರುಕರಿದ್ದೂರು ರುಚಿಯಕ್ಕು, ಶುಚಿಯಕ್ಕು ಜಗಕೆಲ್ಲ; । ತುರುಕರೇ ದೈವ ಸರ್ವಜ್ಞ ॥ —(ದಾ)

ಇಂಥ ಗೋವನ್ನು ಉಪಾಸನೆಮಾಡಿ ದಿಲೀಪ ಮೊದಲಾದವರು ಫಲವನ್ನು ಪಡೆದಿರುವರು; ಭಗವಾನ್ ಶ್ರೀಕೃಷ್ಣನು ಗೋಪಾಲಕನಾಗಿದ್ದನು; ಛತ್ರಪತಿ ಶಿವಾಜಿಯು ಗೋರಕ್ಷಣೆಯನ್ನು ತನ್ನ ಪ್ರಾಣಕ್ಕಿಂತ ಹೆಚ್ಚಿನದನ್ನಾಗಿ ತಿಳಿದಿದ್ದನು. ಆದ್ದರಿಂದ ಕೀರ್ತನಾರಂಭದಲ್ಲಿ ಭಾಗವತರು **"ಮಾಡಿ ಧನ್ಯನಾಗು ಮನುಜನೆ"** ಎಂದುಪದೇಶಮಾಡಿರುವರು. ಇದಕ್ಕೆ ಉದಾಹರಣೆಯಾಗಿ ಪಾಂಡವರ ಮಧ್ಯಮಣಿಯಾದ ಅರ್ಜುನನು ಗೋರಕ್ಷಣೆಗಾಗಿ ಮಾಡಿದ ಸಾಹಸವು ನಿರೂಪಣೆ ಮಾಡಲಾಗುವದು.

ಆಖ್ಯಾನ

ಕೀ॥ ಪರನಾರಿಯ ಮೋಹಿಸೆ ಮತ್ಸ್ಯೇಂದ್ರನ ಪುರದೊಳು ಗಂಧರ್ವರು ಬಂದು ! ದುರುಳ ಕೀಚಕನ ಕೊಂದ ವಾರ್ತೆಯನು ಕುರುಪತಿ ಕೇಳಿದ ತಾನಂದು॥

ಕೀಚಕನನ್ನು ಕೊಲ್ಲುವಂಥ ಪರಾಕ್ರಮಿ ಭೀಮನೇ ಆಗಿರಬೇಕೆಂದೂಹಿಸಿದ ದುರ್ಯೋಧ

ನನು ಅಜ್ಞಾತವಾಸದಲ್ಲಿರುವ ಪಾಂಡವರನ್ನು ಗುರ್ತುಹಿಡಿದು ಮತ್ತೆ ಅವರನ್ನು ವನವಾಸಕ್ಕೆ ಅಟ್ಟಬಹುದೆಂದು ಯೋಚಿಸಿ ಅವರನ್ನು ಗುರ್ತಿಸುವ ಉಪಾಯವನ್ನು ಸೂಚಿಸಿದ್ದೇನೆಂದರೆ—

ಸಾ ॥ ತುರುಗಳು ಕರುಗಳ ಸೇರದಿರಲ್ಲಿವ್ವೇ । ಕಳಿಸನನ್ನವನು ಧರ್ಮ;॥ ತುರುಗಳ ಸೆರೆಗೆಯ್ಯಲು ಮುಂದೋರದೆ ಹೇ ರಡುವದಾತನ ಮರ್ಮ॥

ಈಮಾತನ್ನು ಕೇಳಿ ಭೀಷ್ಮದ್ರೋಣರು ಅಡ್ಡಬಂದು ಹೇಳುತ್ತಾರೆ—

ಶ್ಲೋ॥ ತೇಜಸ್ವಿನಿ ಕ್ಷಮೋಪೇತೇ ನಾತಿಕಾರ್ಕಶ್ಯಮಾಚರೇತ್; । ಅತಿ ನಿರ್ಮಂಥನಾದಗ್ನಿಶ್ಚಂದನಾದಪಿ ಜಾಯತೇ ॥ —(ಸು)

ಅ॥ ಕ್ಷಮೆಯಿಂದ ಕೂಡಿದ ಪ್ರತಾಪಶಾಲಿಯಾದವನಲ್ಲಿ ಬಹು ಕ್ರೂರತ್ವವನ್ನು ತೋರಿಸ ಬಾರದು. ಹೆಚ್ಚಾಗಿ ಉಜ್ಜುವದರಿಂದ ಶ್ರೀಗಂಧದಿಂದಲೂ ಕೂಡ ಬೆಂಕಿಯು ಹುಟ್ಟುತ್ತದೆ.

ಹೀಗೆ ಸಾತ್ತ್ವಿಕರಾದ ಪಾಂಡವರನ್ನು ಸಿಟ್ಟಿಗೆಬ್ಬಿಸಬಾರದೆಂದುಹೇಳಿ ಗೋವುಗಳ ಪ್ರಭಾವ ವನ್ನು ನೆನಪುಗೊಡುವದಕ್ಕೆ ವಿಶ್ವಾಮಿತ್ರನ ಉದಾಹರಣೆಯನ್ನು ಕೊಟ್ಟದ್ದೇನೆಂದರೆ—

ಸಾ॥ ಕೊಡಹಲದರ ಮೆಯ್ಯಿಂದ ತುರುಷ್ಕರ । ಗಡಣವೆ ಉದಿಸಿತ್ತಾಗ; ॥ ಫಡ, ಫಡ! ಎಂದಾ ವಿಶ್ವಾಮಿತ್ರನ ಹೊಡೆದೋಡಿಸಿತದು ಬೇಗ ॥

ಆದ್ದರಿಂದ ಆ ಜಾತಿಯಮೇಲೆ ಕೈಮಾಡುವದುಚಿತವಲ್ಲವೆಂದರೂ ಕೇಳದೆ ದುರ್ಯೋಧನನು ಪ್ರಯಾಣವನ್ನು ಸಾಗಿಸಿದ್ದಾನೆ—

ರ॥ ಹೊರಟನು ಕೌರವನಾಗ । ಅರಸೆ ಪಾಂಡವರ ಬೇಗ ॥ ಪ ॥ ಪರಿ ಪರಿವಾದ್ಯನಿನಾದಗಳಿಂದ । ಕರಿರಥತುರಗಪದಾತಿಗಳಿಂದ । ಬಿರಿದುಘೋಷಿಡಿಸುತ ಪೊಗಳುವರಿಂದ । ಗುರುಕೃಪಕರ್ಣನದೀಸುತರಿಂದ । ಪರಿಪರಿದೇಶಾಧೀಶ್ವರ ರಿಂದ । ನೆರಸಿ ಪೊರಟನಾ ಕರಿಪುರದಿಂದ । ಬರುತಲಾಯಿತವಶಕುನದ ವೃಂದ । ದುರುಳರದನು ನೋಡದೆ ಭರದಿಂದ । ಬರುತ ಮತ್ಸ್ಯಪುರಿ ಕಂಡಾನಂದ । ಭರಿತ ನಾಗಿ ನಿಜಸೇನಾವೃಂದ । ಎರಡುಭಾಗ ಮಾಡುತಲಾಗೆಂದ । ವರಸುಶರ್ಮನೀ ದಕ್ಷಿಣದಿಂದ । ವರಿಸಿ ಗೋಗಳನು ಹಿಡಿ ಜವದಿಂದ । ಅರಸಿಗದೇ ಅದ್ಭುತವಹು ದೆಂದ ॥ —(ದಾ)

ಈಪ್ರಕಾರ ಬಂದ ಸುಶರ್ಮನು—

ದಿಂ॥ ಧನುವ ಕೊಂಡಾ ಶತ್ರುಗಳ ವರ್ಗವನ್ನು । ದಣಿಯೆ ಗೈದಾಗಳ್ ವಿರಾಟರಾಜನನ್ನು ॥ ಮಣಿಸಿ ನೇಣಿಂದಂ ಬಿಗಿದು ಕಟ್ಟುತಾಗ । ಕ್ಷಣದಿ ಕೊಂ ಡೊಯ್ದಂ ಸೆರೆಯೊಳಿಡಲು ಬೇಗ॥

ಇದನ್ನು ತಿಳಿದಕೂಡಲೆ ಅವನನ್ನು ಬಿಡಿಸಬೇಕೆಂದು ಧರ್ಮರಾಯನ ಮನಸ್ಸಾಗಿದೆ—

ಶ್ಲೋ॥ ಉಪಕರ್ತುಂ ಪ್ರಿಯಂ ವಕ್ತುಂ ಕರ್ತುಂ ಸ್ನೇಹಮಕೃತ್ರಿಮಮ್ । ಸಜ್ಜನಾನಾಂ ಸ್ವಭಾವೋಽಯಂ; ಕೇನೇಂದುಃ ಶಿಶಿರೀಕೃತಃ ? ॥ —(ಸು)

ಅ॥ ಉಪಕಾರವನ್ನು ಮಾಡುವದೂ ಹಿತವಾದ ಮಾತನ್ನಾಡುವದೂ ಸರಳವಾದ ಪ್ರೇಮು

ವನ್ನು ಮಾಡುವದೂ ಸಜ್ಜನರಿಗೆ ಸ್ವಭಾವವಾಗಿರುವದು. ಚಂದ್ರನನ್ನು ಯಾರು ತಂಪಾಗಿ ನೂಡುತ್ತಾರೆ?

ಧರ್ಮರಾಯನ ಭಾವವನ್ನು ತಿಳಿದು ಭೀಮನು ಯೋಚಿಸಿದ್ದು—

ಕೀ॥ ಭೂಸೇವತೆಯ ಸಚೇತನರೂಪವಿ। ದೀ ಧಾರಿಣಿಯೊಳು ಗೋಜನ್ಮ;॥
ಆದುದರಿಂ ಗೋರಕ್ಷಣಕರ್ಮವನಾದರಿಸುವದೇ ಸದ್ಧರ್ಮ ॥

ಹೀಗೆಂದು ಒಡನೆ ಭೀಮನು ತನ್ನ ಪ್ರಚ್ಛನ್ನವೇಷದಲ್ಲಿಯೇ ಶತ್ರುಗಳಮೇಲೆ ತೋರಿಸಿಕೊಂಡಿದ್ದಾನೆ—

ರೇಗುಪ್ತಿ—ಅಟತಾಳ

ಏನೆಂಬೆನಮಮ! ಸಾಹಸವ । ವಾಯು । ಸೂನು ತೋರಿದ ವೀರರಸವ ॥ ಪ ॥ ಆ ನಿಮಿಷದೊಳಗಮಿತಸಿಂಹ । ಧ್ವಾನದಿಂದಬ್ಬರಿಸಿ ರಿಪುಗಳ ಸೇನೆಯನು ಪೊಕ್ಕಲ್ಲಿ ತುಳಿದನು । ಆನೆಕುದುರೆ ಪದಾತಿನಿಚಯವ ॥ ಅ. ಪ ॥ ಸರಳ ಸಾರದ ಲೆಂಟುಸಾವಿರ । ದಿವ್ಯ । ತುರಗಗಳನ್ನು ಸೀಳಿದ ಧೀರ; । ಕರಿಘಟೆಗಳ ಕೊಂದ ನೈನೂರ; । ಮುಂದೆ । ಮುರಿದಿಟ್ಟರಥಗಳ ಸಾಸಿರ; ॥ ಅರಿಪದಾತಿಯನೊರೆದು ಲಕ್ಷವ । ನೊರಸಿದನು; ಬೆಂಬತ್ತಿ ಬಿಡುಬಿಡು । ಧೊರೆ ವಿರಾಟನನೆನುತ ಹಿಡಿದನು। ಸೆರೆಯನಾಗ ಸುಶರ್ಮನೆಂಬನ ॥ ೧ ॥ —(ದಾ)

ಆಗ—

ಷ॥ ಏನ ಕೊಡಲೆನಲು ತಾನೆ ವಿರಾಟನು । ದೀನ ಸುಶರ್ಮನ ಬಿಡೆನುತ್ತ॥
ಮಾನಿತಭೀಮನು । ಕ್ಷೋಣಿಪಗೊರೆಯಲು । ಮಾಣದೆ ಬಿಟ್ಟನು ದಯೆಯಿಂ ತಾ॥

ಹೀಗೆ ವಿರಾಟನು ಬದುಕಿ ಊರಿಗೆ ಬರುವದರೊಳಗೆ ಕೌರವರು ಉತ್ತರದಿಕ್ಕಿನ ಗೋವುಗಳನ್ನೆಲ್ಲ ಹಿಡಿದು—

ಸಾಂ॥ ಪಿಡಿದೋರ್ವನ ಮೂಗಿನಮೇಲೆ ಸುಣ್ಣವ । ತೊಡೆದಟ್ಟಿದರು ಹಾಸ್ಯದಲಿ; ॥ ತಡವರಿಸುತಲೋಡಿದನಿಂದಿಗೆ ತಲೆ । ಗಡಿಯಲಿಲ್ಲೆನುತ ಧೈರ್ಯದಲಿ॥

ಅವನು ಬಂದು ಉತ್ತರಕುಮಾರನ ಮುಂದೆ ಹೇಳುವದು—

ಬೇಹಾಗ್—ಆದಿತಾಳ

ಏಳೀಗ ಎನ್ನೊಡೆಯ, । ಬೇಗನೆ । ಏಳೀಗ ಎನ್ನೊಡೆಯ ॥ ಪ ॥ ಏಳೀಗ ನಮ್ಮೂರು ಕೋಳು ಹೋಗುತಲಿದೆ ॥ ಅ. ಪ ॥ ಗೋವುಗಳೆಲ್ಲವ । ಸೋವಿ ಕೊಂಡಾ ಕುರು ॥ ಪಾಲರೊಯ್ಯುವರೀಗ । ಸಾವಕಾಶವ ಬಿಡು ॥ ೧ ॥ ಇಂಥ ಸಮಯದಲಿ । ಕುಂತಿರಬಾರದು; ॥ ಪಂಥವ ಮಾಡಿ ಮ । ಹಾಂತನೆನಿಸು ನೀನು॥ ಹತ್ತೀಗ ರಥವ ಬೆಂ । ಬತ್ತಿಸೇನೆಯನೆಲ್ಲ ॥ ಕೊತ್ತಿ ಕೌರವರ ಸಂ । ಪತ್ತು ಸೂರೆಯ ಮಾಡು ॥ ೨ ॥ —(ವಾ)

ಆವನ ಮುಂದೆ ಉತ್ತರನು ಪೌರುಷವನ್ನು ಕೊಚ್ಚುವದು—

ಕಮಾಚು—ಆದಿತಾಳ

ಎನುಸುರುವೆ ಬಿಡುಬಿಡು ಗೋವಳನೆ, ಪೊಗಳುವೆ ಹೇಡಿಗಳನೆ ॥ ಪ ॥ ಈ ನಿಮಿಷದಿ ರಿಪುಸೇನೆಯ ಕಲಕುವೆ । ನಾನೆ ಪೊಕ್ಕ ಸರಸಿಜವನದಂದದಿ ॥ ಅ. ಪ॥ ಅಹುದಹುದೆಲೆ ತಪ್ಪೇನು ಜೂಜಿನಲಿ ಪ್ರೌಢ । ಮೂಢ । ಕುಹಕದಲಾ ಪಾಂಡವರ ಗೆಲಿದು ಸೆಳಕೊಂಡಾ; ॥ ಮಹಿಯನದರ ಪರಿ ಕೆಣಕಿದನೆನ್ನನು; । ಸಹಿಸೆನು ಸಿರಿಯನು ಸೂರೆಗೊಂಬೆನು ॥ ೧ ॥ ಹಿಡಿದು ರಾಜ್ಯವನು ಕೊಂಡು ಹೆಂಗುಸನು ಎಳೆದು । ಜರಿದು । ಬಡಪಾಂಡವರನು ನೂಕಿದ ತನ್ನಯ ಬಿರುದು ॥ ಫಡಫಡ ! ಎನ್ನಲಿ ತೋರ್ದನೆ ? ಈಕ್ಷಣ । ತೊಡೆವೆನವನ ಕೀರ್ತಿಯನಾಯುಷ್ಯವ ॥ ೨ ॥ ಪೊಡವಿಪತಿಗಳೀಪರಿ ಗೋಗಳ ಪಿಡಿಯುವರೇ ? । ಬಹರೇ ? । ನಡೆಯಲೇನಥ ಮತನವಾಯ್ತೆಲ್ಲರು ನಗರೇ ? ॥ ಕಡೆಗೀ ದುರ್ಯಶ ಉಳಿದಿಹುದಲ್ಲದೆ । ಬಿಡುವೆನೆ ನಾನವರಸುಗೋಧನಗಳ ॥ ೩ ॥ —(ದಾ)

ಹೀಗೆಂದು ಅವನು ತನ್ನಲ್ಲಿ ತಾನು ಹಂಬಲಿಸಿಕೊಂಡದ್ದು—

ಶ್ಲೋ॥ ತಥಾ ಭುಜಂ ವಿಕ್ರಮಯೇಯಮೇತಮ್ । ಯಂತಾ ಯದಿ ಸ್ಯಾದಿಹ ಮೇ ಯುಯುತ್ಸೋಃ ॥ ಷಷ್ಠೋಽಪಿ ನಃ ಕಶ್ಚನ ಪಾಂಡವೋಽಭೂ । ದಿತಿ ತ್ರಸೇಯುಃ ಕುರವೋ ಯಥಾ ತೇ ॥ —(ಭಾರ. ಚಂ)

ಅ॥ ಯುದ್ಧಮಾಡಲಿಚ್ಛಿಸುವ ನನಗೆ ಸಾರಥಿಯೊಬ್ಬನಾದರೆ ಇವನಾರೋ ಆರನೇ ಪಾಂಡವನೆಂದು ಕೌರವನು ಹೆದರುವಂತೆ ನನ್ನ ಭುಜಪರಾಕ್ರಮವನ್ನು ತೋರಿಸುತ್ತಿದ್ದೆನು.

ಉತ್ತರನ ಈ ಮಾತು ಅಂತಃಪುರದಲ್ಲಿದ್ದ ಅರ್ಜುನನ ಕಿವಿಗೆ ಬೀಳುತ್ತಲೆ ಈ ಸಮಯವನ್ನು ತಾನು ಉಪಯೋಗಮಾಡಿಕೊಂಡು ದುರ್ಯೋಧನಾದಿಗಳನ್ನು ಎಕ್ಕಬೇಕೆಂದು ಅವನ ಮನಸ್ಸಾಗಿದೆ—

ತ್ರಿ॥ ಅಡವಿಯನು ಹೊಗಬಹುದು; ಮಡದಿಯನು ಬಿಡಬಹುದು; ಬಿಡದೆ ತಾಂ । ಧ್ಯಾನದಿಂದಿರಬಹುದು; ವಾಸನೆಯ । ಕೊಡಹಲಳವಲ್ಲ ಸರ್ವಜ್ಞ ॥—(ಸು)

ಆಗ ಅವನು ದ್ರೌಪದಿಯಿಂದ ಉತ್ತರೆಗೆ ಆಮೇಲೆ ಉತ್ತರೆಯಿಂದ ಉತ್ತರನಿಗೆ ಹೇಳಿಸಿದ್ದೇನೆಂದರೆ—

ಕೀ॥ ನರನಿಗೆ ಸಾರಥಿಯಾಗಿ ಬೃಹನ್ನಳೆ। ಯುರುಹಿದ ಗುರುತರಖಾಂಡವವ; ಭರದಿಂ ಕೊಡಿಸಾತಗೆ ಸಾರಥ್ಯವ । ತರಿವನು ಶೌರ್ಯದಿ ರಿಪುಬಲವ ॥

ಆಗ ನಪುಂಸಕನೇನು ಸಾರಥ್ಯವನ್ನು ಮಾಡುವನೆಂದು ಘೊಳ್ಳನೆ ನಕ್ಕು ಉತ್ತರನು ಉಪಾಯಾಂತರವಿಲ್ಲದ್ದರಿಂದ ಬರಹೇಳೆನ್ನುತ್ತಲೆ ಉತ್ತರೆ ಬಂದು ಅರ್ಜುನನಿಗೆ ಹೇಳುತ್ತಾಳೆ—

ಕೇತಾರಗೌಳ—ರೂಪಕ

ಲಾಲಿಸೀ ನುಡಿ । ಪರಿ । ಪಾಲಿಸೀ ನುಡಿ ॥ ಪ ॥ ಜಾಲಮಾತಿದಲ್ಲ;

ಕರು । ಣಾಳು, ಕೇಳು ಪೇಳ್ವೆನೀಗ ॥ ಅ. ಪ ॥ ಖೂಳ ಕೌರವೇಂದ್ರನೀಗ । ಕೋಳುಗೊಂಡು ತುರುವನೆನ್ನು । ಮೇಲೆಬಂದಿರಲೆಮ್ಮಣ್ಣ । ಕಾಳಗಕ್ಕೆ ಪೊರಡು ತಿರ್ಪ ॥ ೧ ॥ ಸೂತನಿಲ್ಲವೆಂದು ನುಡಿ । ಕಾತರಿಸುತಲಿರ್ಪನಿಂದ್ರ ॥ ಜಾತ ನಲ್ಲಿ ನೀವು ಹಿಂದೆ । ಸೂತತನವ ಗೈದಿರಂತೆ ॥ ೨ ॥ ಮುಂದೆ ಪೇಳ್ವುದೇನು ? ನಿಮ್ಮ । ಹೊಂದಿತೀಗ ಕಾರ್ಯಭಾಗ; ॥ ಸಂದೇಹವನು ಮಾಡಲಾಗ । ದೆಂದು ಬೇಡಿಕೊಂಬೆನೀಗ ॥ ೩ ॥ —(ದಾ)

ಈ ಮಾತಿಗೊಪ್ಪಿ ಅರ್ಜುನನು ಬರುತ್ತಲೆ ಸಾರಥಿಯಾಗೆಂದ ವಿರಾಟಪುತ್ರನ ಮಾತಿಗೆ ಅರ್ಜುನನು ನಾಚಿಕೆಯನ್ನು ನಟಿಸಿ ಹೇಳಿದ್ದು—

ಸಾ॥ ದ್ರೋಣಭೀಷ್ಮಕೃಪದ್ರೌಣಿಜಯದ್ರಥ । ಭಾನುಸುತಾದ್ಯರ ಮುಂದೆ । ತ್ರಾಣವಿಲ್ಲದ ನಪುಂಸಕ ನಿಲ್ವುದ । ಕಾಣೆ ನಾನು ಹಿಂದೆ ॥

ಅದಕ್ಕೆ ಉತ್ತರನ ಉತ್ತರ—

ದಿಂ॥ ಇರುವೆ ನಾಂ ನಿನ್ನಂ ರಕ್ಷಿಸುತ್ತ ಹಿಂದೆ; । ಬರಿದೆ ಭಯವೇಕೈ ? ಇರುವೊಡೆನ್ನ ಮುಂದೆ; । ಅರೆವೆನೊಂದೇ ವೇಳೆಯೊಳು ಬಲವನೆಲ್ಲ; । ಧುರದೊಳೀ ಪರಿ ಸಂಶಯವ ತಾಳಸಲ್ಲ ॥

ಹೀಗೆಂದು ಹೇಳಿ—

ಸಾಂ॥ ಕೊಡಲೊಂದುನೂರುಕಣ್ಣುಳ್ಳ ಬಂಗಾರದ । ನಿಡುಗವಚವನದನ ವನು ॥ ತೊಡುತಿರೆ ತಲೆಕೆಳಗಾಗಿ ಘೊಳ್ಳನೆ ನಕ್ಕು । ತೊಡಿಸಿದನ ವನಿಗುತ್ತರನು ॥

ರಾಜಪುತ್ರರು ತಾವೇ ಅಂಗಿಯನ್ನು ತೊಡಬಾರದೆಂಬ ಸಂಪ್ರದಾಯವನ್ನು ಉಪಾಯಾಂತರದಿಂದ ರಕ್ಷಿಸಿಕೊಂಡ ಅರ್ಜುನನು ಕುದುರೆಗಳನ್ನು ತಂದು ಹೂಡಿ ರಥವನ್ನು ಸಿದ್ಧಗೊಳಿಸುತ್ತಲೆ ವಿರಾಟಪುತ್ರನು ವೀರಾವೇಶದಿಂದ ಹೊರಟ ಸಂದರ್ಭದಲ್ಲಿ ಆತನ ಪರಿವಾರದ ಸ್ತ್ರೀಯರು ಬಂದು ಅರ್ಜುನನಿಗೆ ಹೇಳುತ್ತಾರೆ—

ಶ್ಲೋ ॥ ಅಕರ್ತೃಕಾಣ್ಯದ್ಯ ವಶೇ ಕುರೂಣಾಮ್ । ಪಾಂಡೋಃ ಸ್ನುಷಾಯಾ ವಸನಾನಿ ಸಂತಿ; ॥ ಆಹೃತ್ಯ ನಸ್ತಾನಿ ದಿಶೇತಿ ಕನ್ಯಾ । ಸ್ತಮಭ್ಯಯಾಚಂತ ಕುತೂಹಲಿನ್ಯಃ ॥ —(ಭಾರ. ಚಂ)

ಅ॥ ಈಗ ಕೌರವರ ವಶದಲ್ಲಿ ಪಾಂಚಾಲಿಯ ವಸ್ತ್ರಗಳು ನನ್ನದೆನ್ನುವವರಿಲ್ಲದೆ ಇವೆ. ಅವುಗಳನ್ನು ನಮಗೆ ತಂದುಕೊಡಬೇಕೆಂದು ಕನ್ಯೆಯರು ಕುತೂಹಲವುಳ್ಳವರಾಗಿ ಅವನನ್ನು ಕೇಳಿಕೊಂಡರು.

ಹಾಗೆ ಆಗಬಹುದೆಂದು ಹೇಳಿ—

ಷ॥ ನಸುನಗುತ ಕೈಕೊಂಡನರ್ಜುನ । ನೆಸಗಿದನು ರಥವನು; ಸಮೀರನ । ಮಿಸುಕಲೀಯದೆ ಮುಂದೆ ಮಿಕ್ಕವು ವಿಗಡವಾಜಿಗಳು; ॥ ಹೊಸಪರಿಯ ಸಾರಥಿಯಲಾ! ನಮ । ಗಸದಳವು ಸಂಗಾತ ಬರಲೆಂ । ದುಸುರದುಳಿದುದು ಹಿಂದೆ ಪುರದಲಿ ಚಾತುರಂಗಬಲ ॥ —(ಕ. ಭಾರ)

ಮುಂದೆ ಬಂದಹಾಗೆಲ್ಲ ವಿರಾಟಪುತ್ರನಿಗೆ ಕಾಣಬಂದದ್ದೇನೆಂದರೆ—

ಚೌ॥ ಜಡಿವ ಖಡ್ಗಗಳಿಂದ ಹೊರೆಡುವ - ಕಿಡಿಗಳಿರಲೆಲ್ಲೆಡೆಯೊಳು; । ಕಡು ಹಿಸಿಂ ಗರ್ಜಿಸುವ ಭಟರು - ಗ್ಗಡಣೆ ಭಟಭಟವೆನ್ನಲು; ॥ ಇಡಿದ ಧೂಳಿಯು ನೋಡೆ ಧೂಮದ ಗಡಣದಂತಿರೆ ಕಾಣಲು । ಪಡೆ ದವಾಗ್ನಿಯ ತೆರದಿ ಕಂಡುದು-ನುಡಿವೊಡಸದಳವಾಗಲು ॥

ಮತ್ತು ಹೇಗಿತ್ತೆಂದರೆ—

ಶ್ಲೋ॥ ಜಲೇ ಮತ್ಸ್ಯಾನ್ದಧಾನೋಽಪಿ ಸ್ಥಲೇ ಮತ್ಸ್ಯಾನ್ವಿಲೋಕಿತುಮ್ । ಆಗತೋಬ್ಧಿರಿವಾನೀಕಃ ಕುರೂಣಾಂ ದದೃಶೇ ತತಃ ॥ —(ಭಾರ. ಚಂ)

ಅ॥ ನೀರಿನಲ್ಲಿ ಮತ್ಸ್ಯ (ಮೀನು) ಗಳನ್ನುಂಟಾಗಿದ್ದರೂ ನೆಲದಮೇಲಣ ಮತ್ಸ್ಯರನ್ನು ನೋಡುವದಕ್ಕೆ ಬಂದ ಸಮುದ್ರದಂತೆ ಕೌರವನ ಸೇನೆಯು ಕಾಣಬಂತು.

ಆಗ ಉತ್ತರನು ಎದೆಗುಂದಿ ಅರ್ಜುನನಿಗೆ ಹೇಳುತ್ತಾನೆ.—

ಕಮಾಚ್—ಆದಿತಾಳ

ಸಾರಥೀ, । ತಡೆತಡೆ ರಥವನು ಬಿಡಬೇಡ ॥ ಮುಂದಿರುವರ ನೋಡಾ! ॥ ಪ ॥ ಮಾರಿಯ ವದನದ್ವಾರದ ಕುರಿಗಳು । ಸೇರಿದಂತೆ ಮುಂಬರಿಯುವದನುಚಿತ ॥ ೧ ॥ ಕಾಲಕೂಟದ ತೊರೆಯೋ! ಮಾರಿಯು । ಪಾಳೆಯವೋ! ಕಾಲನ ಜಂಗುಳಿಯೋ! ॥ ೨ ॥ ಕಾಲರುದ್ರನುರಿಗಣ್ಣಿನ ಪಾಶ । ಜ್ವಾಲೆಯೋ! ಕೌರವ ಸೇನೆಯೊ! ಅಮಮಾ! ॥ ೩ ॥ —(ದಾ)

ಹೀಗೆ ಹೇಳಿ ವಿರಾಟಪುತ್ರನು ಗಾಸಿಯಾಗಿರುವಾಗ ಅರ್ಜುನನಿಗೇನಾಗಿತ್ತೆಂದರೆ—

ಶ್ಲೋ॥ ಸೇಹೇ ಜಿಷ್ಣುರ್ನ ತತ್ರಾರೇಃ ಸೇನಾಧೂಲಿಂ ವಿಸೃತ್ವರೀಮ್ । ಪ್ರಾಯೇಣ ಮಾನಿನಾ ಪುಂಸಾ ಪರಾಗೋ ನ ಹಿ ಸಹ್ಯತೇ ॥ —(ಭಾರ. ಚಂ)

ಅ॥ ಅರ್ಜುನನು ಅಲ್ಲಿ ಹರಡಿಕೊಂಡಿದ್ದ ಶತ್ರುವಿನ ಧೂಳಿಯನ್ನು ಸಹಿಸಲಿಲ್ಲ. ಮಾನಿಯಾದ ಪುರುಷನು ಪ್ರಾಯಶಃ ಮತ್ತೊಬ್ಬರ ಕೋಪವನ್ನು ಅಥವಾ ಧೂಳಿಯನ್ನು ಸಹಿಸುವದಿಲ್ಲ.

ಆದ್ದರಿಂದ ಅವನು ಉತ್ತರನಿಗೆ ಹೇಳಿದ್ದು—

ಕೀ ॥ ಎಲೆ ಸುಕುಮಾರನೆ, ಪ್ರಥಮಚುಂಬನದಿ । ಹಲುಗಳು ಬಿದ್ದಂದದೊಳೀಗ ॥ ಕಲಹಕೆ ನಿಲ್ಲದೆ ಪೊಂದಿದೆ ಭೀತಿಯು । ಕುಲಕಪಕೀರ್ತಿಯ ತಂದೀಗ॥

ಅದಕ್ಕೆ ಉತ್ತರನ ಉತ್ತರ—

ಶ್ಲೋ॥ ಚಿತ್ರೇ ಯುದ್ಧಂ ವಿಲೋಕ್ಯಾಹಂ ಚಾಪಲಾದೇತ್ಯ ವಂಚಿತಃ । ತತ್ರಾಸದ್ಭಿರಿಹೋದ್ಯದ್ಭಿಃ ಕ್ಷ್ವೇಳಾಹೇಷಿತಬೃಂಹಿತೈಃ ॥ —(ಭಾರ.ಚಂ)

ಅ॥ ಚಿತ್ರದಲ್ಲಿ ಯುದ್ಧವನ್ನು ನೋಡಿ ಚಪಲತೆಯಿಂದ ಬಂದು ಮೋಸಹೋದೆನು. ವೀರರ ಗರ್ಜನೆ, ಕುದುರೆಗಳ ಹೇಷಾರವ, ಆನೆಗಳ ಘೀಂಕಾರ - ಇವು ಅಲ್ಲಿ ಸುಳ್ಳು, ಇಲ್ಲಿ ಎದ್ದು ಕಾಣುತ್ತಿವೆ.

ಇಷ್ಟು ಹೇಳಿದರೂ ಅರ್ಜುನನು ರಥವನ್ನು ಮುಂದೆ ಸಾಗಿಸಿದ್ದನ್ನು ನೋಡಿ ಕಂಗೆಟ್ಟ ಉತ್ತರನು ರಥದಿಂದ ಧುಮ್ಮಿಕ್ಕಿ ಓಡುತ್ತಿರಲು—

ಷ॥ ಇಟ್ಟಣಿಸಿ ನರ ನೂರು ಹೆಜ್ಜೆಯೊ । ಛಟ್ಟೆ ಹಿಡಿದನಿದೇನಮಾಡಿದೆ?। ಹುಟ್ಟಿದೆಯೊ ಹಾದರಕೆ ? ಕ್ಷತ್ರಿಯಬೀಜವೇ ನೀನು ? ॥ ದಿಟ್ಟತನ ಮಿಗೆ ಹೆಂಗಳಿದಿರಲಿ । ಹೊಟ್ಟೆಗುಟ್ಟಿದೆ; ಹಗೆಗಳಿದಿರಲಿ । ಬಿಟ್ಟುಕೊಂಡೆ ; ದುರಾತ್ಮ, ಮುರಿದೆ ವಿರಾಟನನ್ವಯವ ॥ —(ಕ. ಭಾರ)

ಎಂದು ಇನ್ನೂ ಹಂಗಿಸಿದ್ದೇನೆಂದರೆ—

ಶ್ಲೋ ॥ ಕಿಯದ್ದ್ವಿಷಾಮಂಶುಕಮಾಹೃತಂ ತೇ । ಸಹೋದರೇಣೇತಿ ಸಖೀಭಿರುಕ್ತೇ ॥ ಮಾನೋತ್ತರಾಯಾಃ ಭೃಶಮುತ್ತರಾಯಾಃ । ಕಿಮುತ್ತರಂ ? ಬ್ರೂಹಿ ತದುತ್ತರ, ತ್ವಂ ॥ —(ಭಾರ.ಚಂ)

ಅ॥ ನಿನ್ನ ಅಣ್ಣನು ಶತ್ರುಗಳ ಎಷ್ಟು ವಸ್ತ್ರಗಳನ್ನು ತಂದನೆಂದು ಸಖಿಯರು ಕೇಳಿದರೆ ಹೆಚ್ಚು ಮಾನಿತಳಾದ ಉತ್ತರೆಯು ಏನುತ್ತರವನ್ನು ಹೇಳಬೇಕೋ ಅದನ್ನು ಹೇ ಉತ್ತರ, ನೀನು ಹೇಳು.

ಇಷ್ಟು ಹೇಳಿದರೂ ಯುದ್ಧದಲ್ಲಿ ಹಿಮ್ಮೆಟ್ಟಿದ ಪಾಪವನ್ನು ಅಶ್ವಮೇಧ ಮೊದಲಾದ್ದರಿಂದ ಕಳೆದುಕೊಳ್ಳುವೆನೆಂದ ಉತ್ತರನ ಮಾತಿನಿಂದ ಇವನು ಸಾಮದಾನಾದಿಗಳಿಗೆ ಬಗ್ಗನೆಂದು ತಿಳಿದು ಅರ್ಜುನನು ಜುಟ್ಟಿಗೆ ಕೈ ಹಾಕುತ್ತಲೆ ಉತ್ತರನು ನಿರಾಶನಾಗಿ ಯೋಚಿಸುತ್ತಾನೆ—

ಸೌರಾಷ್ಟ್ರ—ಅಟತಾಳ

ಹತ್ತಿಗಿಡದ ಕೊನೆ ಹಗೆಯಾಗಿ ಬಿಡದ ಮೇಲಿನ್ನೇನಿನ್ನೇನು! । ಮಸ್ತ್ರಿಯಾಳುವನೀಗ ಹಗೆಯಾಗಿ ನಿಂತಮೇಲಿನ್ನೇನಿನ್ನೇನು ! ॥೧॥ ನಗುವರ ಮುಂದಿಟ್ಟು ತಗಲಿಬಿದ್ದ ಮೇಲಿನ್ನೇನಿನ್ನೇನು! । ನಗುವವರಿಗೆ ನಾಲ್ಕು ನಾಲಿಗೆಯಾದಮೇಲಿನ್ನೇನಿನ್ನೇನು ! ॥೨॥ ಮಾಡಿದ ಗಣಪತಿ ಮಂಗನಾದಮೇಲಿನ್ನೇನಿನ್ನೇನು ! । ಊಡಿದ ಮಕ್ಕಳು ಬಿಡದೆ ಕಚ್ಚಿದಮೇಲಿನ್ನೇನಿನ್ನೇನು ! ॥೩॥ ಬಾವಿ ತೋಡಿದರೆ ಬೇತಾಳ ಹೊರಟಮೇಲಿನ್ನೇನಿನ್ನೇನು ! । ಕಾವ ಬೇಲಿ ಎದ್ದು ಹೊಲವ ಮೇದ ಮೇಲಿನ್ನೇನಿನ್ನೇನು! ॥೪॥ ಹಾರೈಸಿದ್ದೆಲ್ಲವು ಹಳವಂಡವಾದಮೇಲಿನ್ನೇನಿನ್ನೇನು! । ಆಲಿಸಿ ಕೇಳಯ್ಯ ಪುರಂದರವಿಠಲ ಇನ್ನೇನಿನ್ನೇನು! ॥೫॥ —(ದಾ)

ಟೀ॥ ಹಳವಂಡವಾದಮೇಲೆ = ಹಾಸಿಕರವೇ ಆದರೆ.

ಹೀಗೆ ಯೋಚಿಸಿದ ಅವನ ಕೊನೆ ಪ್ರಾರ್ಥನೆ—

ಸೌರಾಷ್ಟ್ರ—ಅಟತಾಳ

ಹಲುಗಳ ತೆರೆದು ಬಾಯೊಳಗಿಟ್ಟು ಬೆರಳ ಎ । ನ್ನುಳುಹು ನಿನ್ನಯ ಕಂದನೈ ॥ ತಲೆಗೊಯ್ವುದಾದರೆ ತಕ್ಕೊ ಕಠಾರಿಯ; ಕೊಲುವದುಚಿತವೆಂದನು ॥—(ದಾ)

ಅರ್ಜುನನು ಹೇಳಿದ ಸಮಾಧಾನ—

ಸೌರಾಷ್ಟ್ರ—ಅಟತಾಳ

ಎಲವೊ ನೀನಿಂದು ಸಾರಥಿಯಾಗು; ರಿಪುಗಳ ಕಲಹದಿ ಯಿಸುವೆನು; ॥
ಗಳಹೆದಿರಿನ್ನು ; ಕೊಯ್ವೆನು ಕಟವಾಯ ಹೆಂ।ಗಳ ಸಭೆಯಲ್ಲೆಂದನು ॥ —(ದಾ)

ಹೀಗೆಂದು ನಿರ್ಬಂಧಿಸಿ ಅವನನ್ನು ರಥದಮೇಲಕ್ಕೇರಿಸಿ ಬಿಗಿದು ರಥವನ್ನು ಶ್ಮಶಾನಭೂಮಿಗೆ ನಡೆಸಿ ಅಲ್ಲೊಂದು ಶಮೀವೃಕ್ಷದ ಬಳಿಯಲ್ಲಿ ನಿಂತು ಉತ್ತರನ ಧನುರ್ಬಾಣಗಳೆ: ಜಳ್ಳೆಂದು ಹೇಳಿ ಅರ್ಜುನನು ಉತ್ತರನಿಗೆ ಹೇಳಿದ್ದು—

ಸೌರಾಷ್ಟ್ರ—ಅಟತಾಳ

ಬಿಡು ಮನೋವ್ಯಥೆಯನೀವೃಕ್ಷದಿ ಪಾಂಡವ । ರ್ಮಡಗಿಹರ್ಶಸ್ತ್ರಾಸ್ತ್ರವ ; ॥
ದೃಢಚಿತ್ತದಲಿ ತೆಗೆದಿಡು ಯೆನ್ನ ಕರದೊಳೆಂ । ದೊಡನೆ ತೋರಿದ ವೃಕ್ಷವ ॥
—(ದಾ)

ಆಗ ಉತ್ತರನು ಸಂಶಯಗೊಂಡು ಹೇಳಿದ್ದು—

ಶ್ಲೋ ॥ ಅಸ್ಮಿನ್ ವೃಕ್ಷೇ ಕಿಲೋದ್ಬದ್ಧಂ ಶರೀರಮಿತಿ ನಃ ಶ್ರುತಮ್ ।
ತದಹಂ ರಾಜಪುತ್ರಃ ಸನ್ ಸ್ಪೃಶೇಯಂ ಪಾಣಿನಾ ಕಥಮ್? ॥ —(ಸಂ.ಭಾರ)

ಅ॥ ಮರದಲ್ಲಿ ಶರೀರವನ್ನು ಕಟ್ಟಿರುವರೆಂದು ಕೇಳಿದ್ದೇನೆ. ನಾನು ರಾಜಪುತ್ರನಾಗಿ ಕೈಯಿಂದ ಅದನ್ನು ಹೇಗೆ ಮುಟ್ಟಲಿ?

ಆಗ ಅರ್ಜುನನು ಹೇಳಿದ್ದು—

ಕಂ॥ ಮರುಳೇ ಪೆಣನಲ್ಲಿದು ಪರ । ರರಿಯದ ಪರಿ ಚರ್ಮದಲ್ಲಿ ಬಿಗಿದಿಟ್ಟ
ಹಥ; ॥ ತ್ವರಿತದಿ ತಾರೆನಲುತ್ತರ । ನುರುಧೈರ್ಯವ ತಂದುಕೊಂಡು ನೋಡಿದನಾ
ಗಳ್ಗೆ॥ —(ದಾ)

ಅದನ್ನು ಸ್ವಲ್ಪ ಬಿಚ್ಚಿ ನೋಡಿ ಉತ್ತರನೆಂದದ್ದು—

।!ಷ॥ ತುಡುಕಬಹುದೇ? ದೋಷಿ, ಹಾವಿನ । ಕೊಡನ; ನಿನಗಿವು ಕೆದ್ಯುಗಳೆ?
ಬ ರೀ ಸಿಡಿಲ ಥಾ ಣೆಯಾಗುತಿವೆ; ಕೈಯಿಕ್ಕಲಂಜುವೆನು; ॥ ಬಿಡಿಸು ಸಾರಥಿ,
ಎನ್ನನೆನೆ ಫಡ! । ನಡುಗದಿರು; ಫಲುಗುಣನ ನೆನೆ; ಕೈ । ದುಡುಕು; ಕೈವಶವ
ಹುಘು ತೆಗೆ ಸಾಕೆಂದನಾ ಪಾರ್ಥ ॥ —(ಕ. ಭಾರ)

ಆಗ ಉತ್ತರನು—

ಕೀ ॥ ಉಚ್ಚರಿಸುತ ನರನಾಮವನೊಡನು । ಕಚ್ಚಿ ತೆಗೆದು ಗಾಂಡೀವವನು॥
ನಿಶ್ಚಲಧೈರ್ಯದೊಳಿತ್ತೆಲ್ಲವ ಕ । ಣ್ಮುಚ್ಚುತಸುವ ಸಂತೈಸಿದನು ॥ —(ದಾ)

ಆಮೇಲೆ ನೀನು ಯಾರೆಂದು ಉತ್ತರನು ಕೇಳಲು ಅರ್ಜುನನು ಕೊಟ್ಟ ಉತ್ತರ—

ಕೀ ॥ ಮನದೊಳು ತಿಳಿ ನಾನರ್ಜುನನಾ ವಲ । ಲನು ಭೀಮನು; ಕಂಕನು
ಧರ್ಮ; ॥ ಅನುಜನಕುಲಸಹದೇವರು ಹಯಗೋ । ಧನರಕ್ಷಕರಿಂತಿದು ಮರ್ಮ ॥

ಹೀಗೆಂದು ಒಡನೆ ಅರ್ಜುನನು ತನ್ನ ನಪುಂಸಕವೇಷವನ್ನು ಬದಲಾಯಿಸಿದ್ದು.

ಸಾ॥ ಆ ನಿಮಿಷದಿ ಕೌರವರ ಸಮುಸ್ತರ । ಗೋಣ ಮುರಿವ ತೆರದಿಂದ ॥ ಮಾನಧನನು ಬಳಿಗಳ ನೆಗ್ಗೊತ್ತಿದ । ತಾನಾಗಲೆ ಭರದಿಂದ ॥

ಹೀಗೆ ಅರ್ಜುನನು ಊರ್ವಶಿಯ ಶಾಪದಿಂದ ಮುಕ್ತನಾಗಿದ್ದಾನೆ—

ಶ್ಲೋ ॥ ಪತಿತೋಽಪಿ ಕರಾಘಾತೈರುತ್ಪತತ್ಯೇವ ಕಂದುಕಃ; । ಪ್ರಾಯೇಣ ಹಿ ಸುವೃತ್ತಾನಾಮಸ್ಥಾಯಿನ್ಯೋ ವಿಪತ್ತಯಃ ॥ —(ಸು)

ಅ॥ ಚಂಡು ಕೈಪೆಟ್ಟಿನಿಂದ ಕೆಳಕ್ಕೆ ಬಿದ್ದರೂ ಮೇಲಕ್ಕೆ ಹಾರುತ್ತದೆ. ಪ್ರಾಯಶಃ ಸಜ್ಜನರ ವಿಪತ್ತು ನೆಲೆಯಾಗಿರುವಂಥದ್ದಲ್ಲ.

ಇಷ್ಟಾದ ಮೇಲೆ ಇತ್ತ ಅರ್ಜುನನು ಇಚ್ಛಾಮಾತ್ರದಿಂದ ತನ್ನ ಪೂರ್ವದ ಕಪಿಧ್ವಜದ ರಥವನ್ನು ಪಡೆದು ಅದರ ಮೇಲೆ ಹತ್ತಿ ಹೊರಡುತ್ತಲೆ ಅತ್ತ ಕೌರವರ ಸೇನೆಗೆ ಅಪಶಕುನಗಳಾದದ್ದು—

ರ॥ ಆಯಿತಾ ಕೌರವದಳಕಪಶಕುನ । ಪೇಳುವೆನೇನದನ ॥ ಪ ॥ ದಿಗಿಲು ಪಡಿಸುತಲಿ ಬೀಸಿತು ಗಾಳಿ । ಭುಗಿಲೆನಲಿದ್ದವು ಜ್ವಾಲೆಗಳೋಳಿ । ಬೂದಿಯ ಮಳೆಯಾಯಿತು ಸೇನೆಯಲಿ । ಹಾದಿ ಕಾಣದಾಯಿತು ಹಗಲಿನಲ್ಲಿ । ಕಗ್ಗತ್ತಲೆ ಮುಸುಕಿದುದೆತ್ತೆತ್ತಲು । ಮುಗ್ಗರಿಸಲು ಜನರೆತ್ತಲು ಸುತ್ತಲು ॥ ಭೀಕರತರ ಮೇಘವು ಬರೆ ಗಗನದಿ । ಶೋಕವಾರಿಯಿರೆ ಪ್ರಾಣಿಸಮೂಹದಿ । ಅಸ್ತ್ರವಿತತಿ ತಾವೇ ಹೊರಡುತ್ತಿರೆ । ಶಸ್ತ್ರಸಮೂಹವು ಕಳಿಗುಂದುತ್ತಿರೆ । ಧ್ವಜಸಂತತಿಯುರೆ ಹೊಯ್ದಾಡುತ್ತಿರೆ । ಗಜಬಜದಲಿ ಗಾಬರಿಯಾಗುತ್ತಿರೆ । ನರಿಗಳು ಬಹುಬಗೆಯೊಳು ಕೂಗುತ್ತಿರೆ । ಕಳಕಳೆ ಎಲ್ಲರ ಮನಸಿನೊಳೈತರೆ ॥

ಅರ್ಜುನನ ರಥವು ಹತ್ತಿರಕ್ಕೆ ಬರುತ್ತಲೆ ದ್ರೋಣರು ಗುರ್ತು ಹಿಡಿದು ಅರ್ಜುನನನ್ನು ಹೊಗಳುತ್ತಾರೆ—

ಸುರಟ—ರೂಪಕ

ಧನ್ಯನಿವನು ಲೋಕದಲ್ಲಿ; । ಮಾನ್ಯನೀತನು ॥ ಪ ॥ ಗಣ್ಯನಿವನು ಶೂರರೊಳು; ವ । ದಾನ್ಯನರ್ಜುನ ॥ ಅ. ಪ॥ ದ್ರುಪದನನ್ನು ತಂದು ಗುರುಗ । ಳುಪಕೃತಿಗಾಗಿ ॥ ದ್ರುಪದಸುತೆಯ ಗೆಲಿದು ತನ್ನ । ಸಫಲಗೈದವ ॥ ೧ ॥ ಖಾಂಡವವನು ವಹ್ನಿಗಿತ್ತ । ಚಂಡವಿಕ್ರಮ; ॥ ಗಂಡುತನದಿ ಸುಭದ್ರೆಯನು । ಕೊಂಡು ತಂದವ ॥ ೨ ॥ ಹರನ ಮೆಚ್ಚಿಸಿ ಪಾಶುಪತವ । ನಿರದೆ ತಂದವ; ॥ ಸುರಪನರ್ಧಾಸನದೆ ಕುಳಿತು । ಭರದಿ ಮೆರೆದವ ॥ ೩ ॥ —(ದಾ)

ಆಗ ಕರ್ಣನು ದ್ರೋಣರಮೇಲೆ ಸಿಟ್ಟುಗೆದ್ದು ಹೇಳಿದ್ದು—

ದಿಂ॥ ಬರಿದೆ ಕೊಂಡಾಡುತ್ತಿಹುದೆ ನಿಮ್ಮ ರೀತಿ; । ಧರೆಯೊಳರಿತೇಂ ಬ್ರಾಹ್ಮಣರು ಕೆಟ್ಟಜಾತಿ; ॥ ಸರಿಯಿರ್ದೈ ನೀಂ ಹಿಂಜರಿದು ನಗರಿಗೀಗ; । ಧುರದೊಳಾಂ ಗೆಲ್ವೆಂ ಫಲ್ಗುಣನ ನಾನು ಬೇಗ॥

ಇದರಿಂದ ಅಶ್ವತ್ಥಾಮರು ಕೋಪಗೊಂಡು ಒಬ್ಬರಿಗೊಬ್ಬರಿಗೆ ಬಳಕಲಹವು ಹೆಚ್ಚಿ ಆದರ

ಕಮನವು ದುರ್ಯೋಧನನಿಗೂ ಆಗದಿರುವದನ್ನು ನೋಡಿ ಭೀಷ್ಮರು ಬಂದು ಸಮಾಧಾನಮಾಡಿದ್ದಾರೆ. ಆಗ ದುರ್ಯೋಧನನು ಕರ್ಣನನ್ನು ಕುರಿತು ಹೇಳುತ್ತಾನೆ—

ಶ್ಲೋ॥ ಯದ್ಯೇಷ ಪಾರ್ಥೋ ರಾಧೇಯ, ಕೃತಂ ಕಾರ್ಯಂ ಭವೇನ್ಮಮ; ॥
ಜ್ಞಾತಾಃ ಪುನಶ್ಚರಿಷ್ಯಂತಿ ದ್ವಾದಶಾನ್ಯಾಂಶ್ಚ ವಾರ್ಷಿಕಾನ್॥ —(ಸಂ. ಭಾರ)

ಅ॥ ಹೆ ಕರ್ಣ, ಇವನು ಅರ್ಜುನನಾದರೆ ನನ್ನ ಕೆಲಸವಾಯಿತು; ಗುರ್ತು ತಿಳಿಸಿಕೊಂಡ ಪಾಂಡವರು ಮತ್ತೆ ಹನ್ನೆರಡು ವರ್ಷ ವನವಾಸ ಮಾಡುತ್ತಾರೆ—

ಆಗ ಭೀಷ್ಮರು ಹೇಳಿದ್ದು—

ಸಾಂ॥ ಕಂದ, ಕೇಳೆಲೆ ಪಾಂಡವರು ನುಡಿದವಧಿಯು । ಸಂದುದು ನಿನ್ನೆಗೆ ನೋಡೆ; ॥ ಸಂದೇಹವಿಲ್ಲ; ನೀನೈವರ ಕರೆಸುವ । ದಿಂದೇ ಸಂಧಿಯ ಮಾಡೆ ॥

ಈ ಮಾತಿಗೆ ದುರ್ಯೋಧನನು ಮುಖವನ್ನು ತಿರುಗಿಸಿಕೊಂಡು ಹೋದನು. ಇಷ್ಟರಲ್ಲಿ ಅರ್ಜುನನು ಹತ್ತಿರಕ್ಕೆ ಬಂದು—

ಸಾಂ॥ ಗುರುಹಿರಿಯರ ಕಾಣುತರ್ಜುನನಾಕ್ಷಣ । ಶರಗಳ ತೆಗೆದಿಡಲಾಗ॥ ಚರಣಕೆರಗಿತೊಂದು; ಕುಶಲ ಪ್ರಶ್ನೆಯ ಕೇಳೆ । ತೆರಳಿತು ಕಿವಿಯೆಡೆಗೊಂದು ॥

ಹೀಗೆ ಅರ್ಜುನನು ಬಂದ ಭರದಲ್ಲಿ ಕರ್ಣನ ಸೂಚನೆಯಂತೆ ಕೌರವನು ಗೋಧನದೊಡನೆ ಹಸ್ತಿನಾಪುರದ ದಾರಿಯನ್ನು ಹಿಡಿದಿದ್ದಾನೆ—

ಕೀ॥ ಕುರುರಾಯನ ಮುಂದೋಡುತಲಿರ್ದವು । ತುರುಗಳೆಲ್ಲ ಭರದೊಳಗಂದು; ॥ ಕುರುರಾಜ್ಯಶ್ರೀಯನು ಕರೆತಂದಾ । ನರನಿಗೆ ಬೇಗನೆ ಕೊಡಲೆಂದು॥

ಕೌರವನು ಅತ್ತ ಹೋಗುತ್ತಿರುವಾಗ ಇತ್ತ—

ಶ್ಲೋ॥ ವಿಜಯಸ್ಯ ರಥೇ ತತೋ ನಿಪೇತು । ರ್ದ್ವಿಮತಾನಾಮಿಷವಃ ಪರಃ ಸಹಸ್ರಾಃ ॥ ಜನಮೇಜಯಯಾಗವೇದಿಮಧ್ಯೇ । ಜಗತಾಂ ಭೀತಿಕರಾ ಇವಾಹಿ ಸಂಘಾಃ ॥ —(ಭಾರ. ಚಂ)

ಅ॥ ಜನಮೇಜಯನ ಯಾಗದ ಜಗುಲಿಯ ನಡುವೆ ಜಗತ್ತಿಗೆಲ್ಲ ಭಯವನ್ನುಂಟುಮಾಡುವ ಸರ್ಪಸಮೂಹಗಳು ಬಂದುಬಿದ್ದಂತೆ ಅರ್ಜುನನ ರಥದಲ್ಲಿ ಶತ್ರುಗಳ ಸಾವಿರಾರು ಬಾಣಗಳು ಬಿದ್ದವು.

ಅರ್ಜುನನು ಇವುಗಳನ್ನು ಲಕ್ಷ್ಯಮಾಡದೆ ಮೊದಲು ಆಕಳುಗಳನ್ನು ದೂರ ಹೋಗಗೊಡದಿರುವದಕ್ಕಾಗಿ ಕೌರವನ ಕಡೆಗೆ ನಡೆಯಲು ದ್ರೋಣರೇ ಮೊದಲಾದವರು ಗಾಬರಿಗೊಂಡು ಸೈನಿಕರಿಗೆ ಎಚ್ಚರಿಕೆ ಹೇಳುತ್ತಾರೆ—

ಷ॥ ಎಲೆಲೆ, ನರ ಜಾರಿದನು; ರಾಯನ । ಬಳಿಯ ಹತ್ತಿದನಡ್ಡಹಾಯ್ದತಿ । ಬಲನ ತೆಗೆ ನಮ್ಮತ್ತಲೆನುತಾ ದ್ರೋಣಗೌತಮರು ॥ ಹಿಳುಕ ಕೆನ್ನೆಗೆ ಸೇದಿ ಬೊಬ್ಬೆಯ । ಕಳಕಳದಿಯಡಗಟ್ಟಿದರು; ನಿ । ಲ್ಲೆಲವೊ ಫಲುಗುಣ, ಕಾದಿ ನೀನೊಟ್ಟೈಸಿ ಪೋಗೆನುತ ॥ —(ಕ.ಭಾರ)

ಇಷ್ಟರಲ್ಲಿ ಅರ್ಜುನನಾಗಲೆ ಕೌರವನನ್ನು ಅಡ್ಡಗಟ್ಟಿ ಯುದ್ಧವನ್ನಾರಂಭಿಸಿದ್ದಾನೆ.—

ಶ್ಲೋ ॥ ಜಂಭದ್ವಿಷೋಽಪಿ ತನಯೋ ಜಗದೇಕವೀರೋ । ಜನ್ಯಂ ಸಮಾರಭತ ಜೃಂಭಯಿತುಂ ಮಹೀಯಃ ॥ ಪ್ರತ್ಯರ್ಥಿರಕ್ತತಟಿನೀಸ್ನಪನೈಶ್ಶ್ಮಶಾನಾಮ್ । ಭೀತ್ಸನ್ನಿವಾಥ ಪಿತೃಕಾನನವಾಸದೋಷಮ್ ॥ —(ಭಾರ. ಚಂ)

ಅ॥ ಇಂದ್ರನ ಮಗನೂ ಅತ್ಯಂತ ಪರಾಕ್ರಮಿಯೂ ಆದ ಅರ್ಜುನನು ತನ್ನ ಶರಗಳ ಶ್ಮಶಾನವಾಸದ ದೋಷವನ್ನು ಕಳೆಯುವದಕ್ಕಾಗಿ ಶತ್ರುಗಳ ರಕ್ತದ ಕಾಲುವೆಯಿಂದ ತೊಳೆಯುವದರ ಮೂಲಕ ದೊಡ್ಡ ಯುದ್ಧವನ್ನು ಹೆಚ್ಚಿಸುವದಕ್ಕೆ ಪ್ರಾರಂಭಮಾಡಿದನು.

ಅವನ ಯುದ್ಧದ ವರ್ಣನೆ—

ಕಮಾಚು—ಆದಿತಾಳ

ಆದುದು ಕುರುವೀರನೊಡನೆ ಕದನ । ಅರ್ಜುನನಿಗೆ ॥ ಪ ॥ ಕಾದ ಬಂದ ಕುರುಸೇನೆಯದೆಲ್ಲವು ಹಾದಿಯ ಕಾಣದೆ ಹೋದುದೆಂದೆನಿಸೆ ॥ ಅ. ಪ ॥ ಬೊಬ್ಬಿರಿಯುತೆ ನರನೆಸೆಯಲು ಕಣೆಗಳು ಹಬ್ಬಿ । ಉಬ್ಬಿ । ಅಬ್ಬರಿಸುತ ಪರಬಲವನು ಕೆಡಹಲು ಕೊಬ್ಬಿ ॥ ಒಬ್ಬುಳಿಗೈದಡಕುತ ಬಲು ಹೆಣಗಳ । ತಬ್ಬಿಬ್ಬಾಗಿಸುತಾ ಮಹಾರಥರ ॥೧॥ ತುಡುಕಿ ಮಾರ್ಬಲದೊಳಿರುವರ ಖಂಡವ ಕಚ್ಚಿ । ಕೊಚ್ಚಿ । ಗಿಡಗನಂತವರ ಶರಿರದೊಳಗೆ ಬಲು ಚುಚ್ಚಿ ॥ ಕಡಿದು ಗಂಟಲನು ಹಾಯ್ದಂಬರದೊಳ । ಗಡಸಿ ನಿಲ್ಲುವಂತಿರೆ ಬಾಣಗಳನು ॥೨॥ ಕಾರಿಸುತಲಿ ಕಾಲಾಳ್ಗಳ ಬಾಯಲಿ ಕರುಳ । ಸರಳ । ತೂರಿಸಿ· ಕಣ್ಗಳಿಗಾಗಿಸುತ್ತಲಿರುಳ ॥ ಭೋರಿಡುತಲಿ ಬರೆ ಬಾಣದ ಬಿರುಮಳೆ । ಮಾರಿಯಂತೆ ಮುಸುಕುತೆ ಕ್ಷಣಮಾತ್ರದಿ ॥ —(ದಾ)

ಕೊನೆಗೆ—

ಕೀ ॥ ಕುರುರಾಜ್ಯಶ್ರೀಯನು ಕರೆತಂದಾ । ನರನಿಗೊಪ್ಪಿಸುವ ತೆರದಿಂದ ॥ ಕುರುಪತಿಯನು ಬಿಟ್ಟಾನಂದದಿ ತಾ । ಬರುತಿರ್ದುದು ಗೋಗಳ ವೃಂದ ॥

ಈಪ್ರಕಾರ ಗೋವುಗಳನ್ನು ಮತ್ಸ್ಯನಗರಿಗೆ ತಿರುಗಿಸಿ ಕುರುಸೇನೆಯಮೇಲೆ ತನ್ನ ಕೈತೋರಿಸುವ ಅರ್ಜುನನ ಚಮತ್ಕಾರವನ್ನು ಕವಿ ವರ್ಣಿಸಿರುವದೇನೆಂದರೆ—

ಶ್ಲೋ ॥ ಲಕ್ಷ್ಮಣೋ ಲಘುಸಂಧಾನೋ ದೂರಪಾತೀ ಚ ರಾಘವಃ । ಕರ್ಣೋ ದೃಢಪ್ರಹಾರೀ ಚ ಪಾರ್ಥಸ್ಯೈತೇ ತ್ರಯೋ ಗುಣಾಃ ॥ —(ಸು)

ಅ॥ ಲಕ್ಷ್ಮಣನು ಬೇಗ ಹೂಡುವವನು; ರಾಮನು ದೂರಕ್ಕೆ ಸೆಯುವವನು; ಕರ್ಣನು ಬಲವಾಗಿ ತಾಕಿಸುವವನು; ಪಾರ್ಥನಲ್ಲಿ ಈ ಮೂರು ಗುಣಗಳೂ ಇವೆ.

ಅರ್ಜುನನನ್ನು ನೋಡಿ ಮಹಾರಥರು ಮೂದಲಿಸುತ್ತಾರೆ—

ಚೌ ॥ ಸುರಪನಡವಿಯ ಯಾಚಕನಿಗಿ - ತ್ತರೆ ಪರಾಕ್ರಮವಾಯಿತೇ ? । ಜರಡು ಯಂತ್ರದ ಮೀನನೆಚ್ಚರೆ - ಧರೆಗದಚ್ಚರಿಯೆನಿಸಿತೇ? । ಗೊರವನೊಳ್ಕಾದಿದರೆ ತರುಣಿಯು - ನಿರದೆ ಕದ್ದರೆ ದೊಡ್ಡಿತೇ? ! ಧುರಕೆ ಧೀರನೆ? ಪಾರ್ಥ, ಫಡ! ಎ - ಚ್ಚರದಿ ನಿಲ್ಲೆಲೊ ಕಾದುತೆ ॥

ಆಗ ಕೈಕೈಕೂಡಿದ ಯುದ್ಧಕ್ಕೆ ಆರಂಭವಾಗಿದೆ—

ರ॥ ಆಯಿತಾ ಸಮಯದಿ ಬಲು ಕದನ । ಪೇಳುವೊಡರಿದದ ನಾ ॥ಪ॥ ಬಾಣದ ಮಳೆ ಸುರಿದವು ಸೇನೆಗಳೊಳು । ಗೋಣು ಮುರಿಯೆ ಕೆಡೆದಿರ್ದವು ತಲೆಗಳು । ತುಂಡಾದವು ಧ್ವಜಛತ್ರಾದಿಗಳು । ನೊಂಡಾದವು ಕೈ ಹಿಡಿದಾಯುಧಗಳು । ಬೆದರಿತಿಂತು ಕುರುವರ್ಗದ ಸೇನೆ । ಮುದದಿಂ ಫಲುಗುಣನೆಸುತಿರೆ ತಾನೆ । ಅರಿಗಳೆಸೆದ ಬಾಣಗಳರ್ಜುನಗೆ । ಗಿರಿಗಿಳಿದಿಬ್ಬನಿಯಾದವು ಕೊನೆಗೆ । ಹರಿಯಿತಾಗ ಕೆನ್ನೀರಿನ ನದಿಯು । ಮೊರೆಯಿತರ್ಜುನನ ವಿಜಯಧ್ವನಿಯು । ಓಡುತ್ತಿರ್ದುದು ಕುರುಬಲವೆಲ್ಲ । ನೋಡುತ್ತಿರೆ ದೇವಾವಳಿಯೆಲ್ಲ । ಮುಸುಕನಿಟ್ಟನಾ ಕರ್ಣನು ಮುಖಕೆ । ದೆಸೆಗೆಟ್ಟರು ದ್ರೋಣರು ಹೊಡೆತಕ್ಕೆ । ರಥಗಳೆಲ್ಲ ಪುಡಿಪುಡಿಯಾಗುತಿರೆ । ಅತಿರಥಜನರಿಗೆ ಮುಂದೋರದಿರೆ । ಗುರುಸುತನಾಗಲೆ ಬರಿಗಯ್ಯಾದ । ನೆರೆ ಕೃಪಗಾಯಿತು ದೈನ್ಯದ ನಾದ । ಮರವೆಗೊಂಡು ಭೀಷ್ಮರು ಹಿಂಜರಿಯೆ । ಕುರುಪತಿಯಡಗಿದನೆಲ್ಲಿಯೊ ಅರಿಯೆ ॥

ಹೀಗೆಲ್ಲರೂ ಹಿಮ್ಮೆಟ್ಟಿ ಓಡುವಾಗ ಅಶ್ವತ್ಥಾಮನು ಕರ್ಣನನ್ನು ನೋಡಿ—

ಸಾ॥ ಗೆಲುವೆನೊಬ್ಬನೇ ಎಂದ ಕರ್ಣನೇ, । ತಿಳಿದೆಯ? ನೀ ನಿನ್ನನ್ನು ॥ ಕುಲಹೀನನೆ, ಬ್ರಾಹ್ಮಣರ ಬಯ್ಯುವೆಯ ! । ಫಲುಗುಣಗೆಣೆಯೇ ? ನೀನು ॥

ಆಗ ದುರ್ಯೋಧನನ ಮಾತು—

ಸಾ॥ ಆದುದಾಯಿತೀ ಸಂದರ್ಭದೊಳೀ । ವಾದದಿಂದ ಫಲವಿಲ್ಲ; ॥ ರಾಧೇಯನ ನೋಯಿಸದಿರು; ನಮ್ಮೊಳೆ । ಭೇದವಿಹುದು ಸಲ್ಲ ॥

ಹೀಗೆ ಸೋತ ಸೇನೆಯ ವಸ್ತ್ರಗಳನ್ನು ತೆಗೆದುಕೊಳ್ಳುವದಕ್ಕಾಗಿ—

ಷ॥ ಎಸಲು ಸಮ್ಮೋಹನದ ಶರ ಪಸ । ರಿಸಿತು ಬಲದಲಿ; ಬಹಳ ನಿದ್ರಾ । ವ್ಯಸನವಿಹ್ವಲಿತಾಂತರಂಗರು ಮೆಯ್ಯನೊಲೆದೊಲೆದು; ॥ ಉಸಿರು ಸಂಚದನಾರಿಯವಗಾ । ಹಿಸಲು ಕೊರೆದರು; ಗುರುಕಿಡುತ ತಲೆ। ಮುಸುಕಿನಲಿ ನೆರೆ ತೆಕ್ಕೆಗೆಡೆದುದು ನಿಖಿಲಕುರುಸೇನೆ ॥ —(ಕ. ಭಾರ)

ಟಿ॥ ಉಸಿರು............ಕೊರೆದರು=ಪ್ರಾಣವಾಯು ಒಳಗಿರುವ ಪುರೀತತ್ತೆಂಬ ನಾಡಿಯಲ್ಲಿ ಮುಳುಗಲಾಗಿ ಗೊರಕೆಯನ್ನು ಹೊಡೆದರು. ತೆಕ್ಕೆಗೆಡೆದುದು=ಒಬ್ಬರಮೇಲೊಬ್ಬರು ಬಿದ್ದರು.

ಆಗ ಉತ್ತರನು ಅರ್ಜುನನ ಮಾತಿನಂತೆ ದುರ್ಯೋಧನಕರ್ಣಾದಿಗಳ ವಸ್ತ್ರಾದಿಗಳನ್ನು ಸೆಳೆಯುತ್ತ ಭೀಷ್ಮರಕಡೆ ನೋಡಲು ಅರ್ಜುನ ಹೇಳಿದ್ದು—

ಸಾಂ ॥ ಹೋಗಬೇಡೆಲೊ ಉತ್ತರನೆ, ಭೀಷ್ಮರವರು; ನೀ । ಬೇಗನೆ ಹಿಮ್ಮೆಟ್ಟಲ್ಲಿಂದ;॥ ಜಾಗರವಿಹುದವರಿಗೆ ಪ್ರತ್ಯಸ್ತ್ರ ಚೆ। ನ್ನಾಗಿ ಗೊತ್ತಿದೆಯದರಿಂದ॥

ಆಮೇಲೆ ವಸ್ತ್ರಾದಿಗಳನ್ನೆಲ್ಲ ರಥದಲ್ಲಿಟ್ಟುಕೊಂಡು—

ಕೀ ॥ ದೊರಕಿದ ಜಯಕೆ ವಿರಾಟನ ಮನಸಿನ । ಪರಿಯ ನೋಡಬೇಕೆಂದೆನುತ ॥ ತಿರುಗಿ ಧನುರ್ಬಾಣವನಾ ಶಮಿಯೊಳ । ಗಿರಿಸಿದನಾಗಲೆ ಕಲಿಪಾರ್ಥ ॥

ಹೀಗೆ ಕೌರವನು ಚೆನ್ನಾಗಿ ಸೋತು ತೆಪ್ಪಗಾಗಿದ್ದಾನೆ—

ಶ್ಲೋ॥ ಅಹೋ ಪ್ರಕೃತಿಸಾದೃಶ್ಯಂ ಶ್ಲೇಷ್ಮಣೋ ದುರ್ಜನಸ್ಯ ಚ ॥
ಮಧುರೈಃ ಕೋಪಮಾಯಾತಿ ಕಟುಕೇನೈವ ಶಾಮ್ಯತಿ ॥ —(ಸು)

ಅ॥ ಶ್ಲೇಷ್ಮಕ್ಕೂ ದುರ್ಜನನಿಗೂ ಸ್ವಾಭಾವಿಕವಾದ ಹೋಲಿಕೆಯು ಆಶ್ಚರ್ಯಕರವಾದದ್ದು. ಶ್ಲೇಷ್ಮವು ಸಿಹಿಯಾದ ಪದಾರ್ಥಗಳಿಂದ ಹೆಚ್ಚುವದು; ಕಹಿಯಾದ ಪದಾರ್ಥಗಳಿಂದ ಶಾಂತವಾಗುವದು. ದುರ್ಜನನು ಮೃದುವಾದ ಮಾತುಗಳಿಂದ ಉದ್ರೇಕವನ್ನು ಹೊಂದುವನು; ತಳಮಳಗೊಳಿಸುವ ಒದೆಗಳಿಂದ ಸುಮ್ಮನಾಗುವನು.

ಊರ ಹತ್ತಿರಕ್ಕೆ ಬರುವಾಗ ಅರ್ಜುನನು ಉತ್ತರನಿಗೆ ಹೇಳಿದ್ದು—

ಶ್ಲೋ॥ ಕುಮಾರ, ಕೋಶೀಕುರು ಕೇಶಪಾಶಮ್ । ಮುಖೇಽಶ್ರುಣೋ ಮಾರ್ಜಯ ಪಾತಮಾರ್ಗಮ್॥ ತೂಣ್ಯಾ ಸಮಂ ದೋಷ್ಣಿ ನಿಧೇಹಿ ಚಾಪಮ್। ರಾಶೀರುಪರ್ಯಾಸ್ವ ರಥೇ ಪಟಾನಾಮ್ ॥ —(ಭಾರ.ಚಂ)

ಅ॥ ಎಲೆ ಹುಡುಗನೆ, ಕೂದಲುಗಳನ್ನೆಲ್ಲ ಗುಡ್ಡೆ ಹಾಕಿಕೊ; ಮುಖದಲ್ಲಿ ಕಣ್ಣೀರು ಹರಿದಿರುವ ಕಲೆಯನ್ನು ತೊಳೆದುಕೊ; ಬಿಲ್ಲನ್ನೂ ಬಾಣವನ್ನೂ ಹೆಗಲಮೇಲೆ ಇಟ್ಟುಕೊ; ರಥದಲ್ಲಿ ಬಟ್ಟೆಗಳ ಗುಡ್ಡೆಯಮೇಲೆ ಕುಳಿತುಕೊ.

“ಇದಲ್ಲದೆ ನನ್ನ ನಿಜಸ್ಥಿತಿಯನ್ನು ತಿಳಿಸದೆ ಜಯಪ್ರದವು ನಿನ್ನದೆಂದೇ ಹೇಳು” ಎಂದು ಉತ್ತರನನ್ನು ಒಪ್ಪಿಸಿಕೊಂಡು ಬರುವಷ್ಟರಲ್ಲಿ ವಿರಾಟನು ಅರಮನೆಯನ್ನು ಸೇರಿ ಧರ್ಮರಾಯನೊಡನೆ ಪಗಡೆಯನ್ನಾಡುತ್ತಿರುವಾಗ ಮಗನು ಜಯಶೀಲನಾಗಿ ಬಂದ ಸುದ್ದಿಯನ್ನು ಕೇಳಿ ಆನಂದಪಡುತ್ತಿರಲು ಧರ್ಮರಾಜನಾಡಿದ ಮಾತು—

ಶ್ಲೋ॥ ನಾದ್ಭುತಂ ತ್ವಿಹ ಮನ್ಯೇಽಹಂ ಯತ್ತೇ ಪುತ್ರೋಽಜಯತ್ ಕುರೂನ್ । ಧ್ರುವ ಏವ ಜಯಸ್ತಸ್ಯ ಯಸ್ಯ ಯಂತಾ ಬೃಹನ್ನಳಾ ॥ —(ಸಂ.ಭಾರ)

ಅ॥ ನಿನ್ನ ಮಗನು ಕೌರವನನ್ನು ಜಯಿಸಿದ್ದು ನನಗೇನೂ ಆಶ್ಚರ್ಯವೆನಿಸುವದಿಲ್ಲ. ಯಾರಿಗೆ ಬೃಹನ್ನಳೆ ಸಾರಥಿಯೋ ಅವರಿಗೆ ಜಯವೆಂಬುದು ಕಟ್ಟಿಟ್ಟ ಗಂಟು.

ಈ ಮಾತನ್ನು ಕೇಳಿ ವಿರಾಟನು ಕೋಪದಿಂದ ಆಡಿದ ಮಾತು—

ಶ್ಲೋ॥ ಸಮಂ ಷಂಢೇನ ಮೇ ಪುತ್ರಂ ಬ್ರಹ್ಮಬಂಧೋ, ಪ್ರಶಂಸಸಿ ।
ವಾಚ್ಯಾವಾಚ್ಯಂ ನ ಜಾನೀಷೇ ನೂನಂ ಮಾಮವಮನ್ಯಸೇ ॥ —(ಸಂ.ಭಾರ)

ಅ॥ ಎಲೊ, ಬ್ರಾಹ್ಮಣನೆನಿಸಿಕೊಂಡವನೆ, ನನ್ನ ಮಗನನ್ನು ನಪುಂಸಕನಿಗೆ ಸಮನೆಂದು ಹೇಳುತ್ತಿ. ಯಾವದನ್ನು ಹೇಳಬಹುದೊ ಯಾವದನ್ನು ಹೇಳಬಾರದೊ ಅದೇ ನಿನಗೆ ಗೊತ್ತಿಲ್ಲ. ನಿಜವಾಗಿ ನೀನು ನನ್ನನ್ನು ಅವಮಾನಗೊಳಿಸುತ್ತಿ.

ಎಂದು ಒಂದು ಪಗಡೆಯಿಂದ ಧರ್ಮರಾಯನ ಹಣೆಗೆ ಹೊಡೆದನು. ಅದರಿಂದ ರಕ್ತಸುರಿಯುತ್ತಿರುವಾಗ ದ್ರೌಪದಿಯು ಓಡಿಬಂದು ಅದನ್ನು ತನ್ನ ಸೆರಗಿನಿಂದ ತಡೆದಳು.

ಅದರ ಕಾರಣವೇನೆಂದು ವಿರಾಟನು ಕೇಳಿದಾಗ ದ್ರೌಪದಿ ಹೇಳಿದ್ದು—

ಷ॥ ಉರಿದು ಹೋಹುದು ನಿನ್ನ ರಾಜ್ಯದ । ಸಿರಿಯು; ಬದುಕಿದೆಯೆಂದು ದೈವದಿ; । ಪರಮಯತಿ ಕಾಯಿದನು ಕಯ್ಯಲಿ ತುಂಬಿ ಶೋಣಿತವ; ॥ ಆಗಸ,

ಕೇಳೀ ಮುನಿಯ ನೇತ್ರರು । ಧರೆಯೊಳೊಕ್ಕರೆಯಾ ಪ್ರದೇಶವ । ನೊರೆಸಿ ಕಳೆವನು ದಿಟ ಬೃಹನ್ನಳೆಗೇರಿಸಿದ ಬಿರುದು ॥ —(ಕ.ಭಾರ)

ಈ ಮಾತು ನಡೆಯುತ್ತಿರುವಷ್ಟರಲ್ಲಿ—

ಶ್ಲೋ ॥ ಪಾರ್ಥೋಽಪ್ಯುಪಾಸೀಯ ರಥಸ್ಯ ಗರ್ಭಾತ್ । ಪಾರ್ಶ್ವಸ್ಥಿತಾಯೈ ಪಿತುರುತ್ತರಾಯೈ ॥ ಪ್ರಾದತ್ತ ಪಟ್ಟಾಂಶುಕಮಾತ್ಮಸೂನೋಃ । ಪಾಣಿಗ್ರಹಾರ್ಥಂ ಕಿಲ ಮಂತ್ರವಾಸಃ ॥ —(ಭಾರ.ಚಂ)

ಅ॥ ಅರ್ಜುನನು ರಥದಿಂದ ಬಟ್ಟೆಯನ್ನು ತಂದು ತಂದೆಯಹತ್ತಿರ ನಿಂತಿದ್ದ ಉತ್ತರೆಗೆ ತನ್ನ ಮಗನಾದ ಅಭಿಮನ್ಯುವಿನ ಮದುವೆಗೆಂಬಂತೆ ಕೊಟ್ಟನು.

ಆಗ ಸಂತುಷ್ಟನಾಗಿ ವಿರಾಟನು ಮಗನನ್ನಾಲಿಂಗಿಸಿ ಹೊಗಳಲು ಉತ್ತರನು ಹೇಳಿದ್ದು—

ಶ್ಲೋ ॥ ಅಪಾರ್ಥಂ ಕರ್ಮ ಮೇ ನಾಸೀದಾಹವೇ ಯುದರಾತಿಷು ॥ ಪುರೋವಿಜಯಮಾದಾಯ ಪುನರಾಗಾಂ ಪುರೀಮಿಮಾಮ್ ॥ —(ಭಾರ.ಚಂ)

ಅ॥ (೧) ಶತ್ರುಗಳ ಮೇಲೆ ಮಾಡಿದ ಯುದ್ಧದಲ್ಲಿ ನನ್ನ ಕೆಲಸವು ವ್ಯರ್ಥವಾಗಲಿಲ್ಲ; ಜಯಪ್ರದವನ್ನು ಮುಂದುಮಾಡಿಕೊಂಡು ಮತ್ತೆ ಪುರಪ್ರವೇಶಮಾಡಿರುವೆನು. (೨) ಶತ್ರುಗಳಮೇಲೆ ಮಾಡಿದ ಕದನದಲ್ಲಿ ನನ್ನ ಕೆಲಸವು ಅರ್ಜುನನಿಲ್ಲದೆ ಆಗಲಿಲ್ಲ. ಮುಂದೆ ಅರ್ಜುನನನ್ನಿಟ್ಟು ಕೊಂಡು ಮತ್ತೆ ಪುರಪ್ರವೇಶಮಾಡಿರುವೆನು.

ಹೀಗೆ ಹೇಳಿದ ಮೇಲೆ ಎಲ್ಲರೂ ತಮ್ಮ ತಮ್ಮ ಕೆಲಸಗಳಿಗೆ ಹೋದರು. ಇತ್ತ ಧರ್ಮರಾಜನಿಗೆ ಬಿದ್ದ ಪಗಡೆಯ ಹೊಡೆತದಿಂದ ನೊಂದ ಪಾಂಡವರೆಲ್ಲರೂ ರಾತ್ರೆ ಒಟ್ಟುಗೂಡಿ ಮಾತಾಡಿಕೊಂಡದ್ದು—

ಶ್ಲೋ ॥ ಶಿರಸಾ ಧಾರ್ಯಮಾಣೋಽಪಿ ಸೋಮಃ ಸೌಮ್ಯೇನ ಶಂಭುನಾ ।
ತಥಾಪಿ ಕೃಶತಾಂ ಧತ್ತೇ ಕಷ್ಟಃ ಖಲು ಪರಾಶ್ರಯಃ ॥ —(ಸು)

ಅ॥ ಶಾಂತನಾದ ಈಶ್ವರನು ತಲೆಯಲ್ಲಿಟ್ಟುಕೊಂಡಿದ್ದರೂ ಕೂಡ ಚಂದ್ರನು ಸೊರಗುತ್ತಲೆ ಇದ್ದಾನೆ. ಪರಾಶ್ರಯವೇ ಬಹಳ ಕಷ್ಟ.

ಎಂದು ಮುಂದೆ ಮಾಡಬೇಕಾದ್ದನ್ನು ನಿಶ್ಚಯಿಸಿ ಉಷಃಕಾಲಕ್ಕೆ ಸರಿಯಾಗಿ ಮಂಗಲಸ್ನಾನಮಾಡಿ ದಿವ್ಯವಸ್ತ್ರಾಲಂಕೃತರಾಗಿ ವಿರಾಟನ ಸಭಾಮಂಟಪಪ್ರವೇಶಮಾಡಿದ್ದಾರೆ. ಧರ್ಮರಾಯನು ಸಿಂಹಾಸನಾರೂಢನಾಗಿದ್ದಾನೆ; ಉಳಿದವರೆಲ್ಲರೂ ಅವನ ಊಳಿಗದವರಾಗಿದ್ದಾರೆ. ಬೆಳಗಾಗುತ್ತಲೆ ಬಂದು ನೋಡಿದ ಚಾರರು ದಿಕ್ಕು ತೋಚದವರಾಗಿ ವಿರಾಟನ ಬಳಿಗೆ ಹೋಗಿ ಹೇಳಿದ್ದು—

ಶಹನ—ಅಟತಾಳ

ಏನೀ ಚೋದ್ಯವು! । ಭೂನಾಥ, ಲಾಲಿಸು ॥ಪ॥ ಯಾರೆಂದರಿಯೆವು । ಧೀರರೈವರು ಬಂದು । ಏರಿ ಸಿಂಹಾಸನ । ತೋರುತಲಿರ್ಪರು ॥೧॥ ಲೆಕ್ಕಿಸದೊಬ್ಬರ । ಪೊಕ್ಕಿಹರೊಳಗೀಗ; । ಮುಕ್ಕಣ್ಣನಂತಿರ್ಪ । ರೀಕ್ಷಿಸಲಸದಳ ॥೨॥ ಇಂದ್ರರೊ! ಅವರು ಉ । ಪೇಂದ್ರರೊ! ದೇವರೆ । ಬಂದು ನೋಡುವದೆಮ: । ಗಿಂದೇನು ತೋರಲ್ಕು ॥೩॥ ---(ದಾ)

ಈ ಮಾತನ್ನು ಕೇಳಿ ವಿರಾಟನು ಬೆಚ್ಚಿಬಿದ್ದು ಉತ್ತರನೊಡನೆ ಬಂದು ನೋಡಿ ದಿಗ್ಭ್ರಾಂತನಾಗಿ ಹೇಳುತ್ತಾನೆ—

ಸುರಟಿ—ಆದಿತಾಳ

ಆರಿವರೀ ಮದನಾರಿಯ ಪೋಲುವ । ಶೂರರು ಸುಂದರಾಕಾರರು ॥ ಪ ॥ ನರರೀ ಪರಿಯಿಂ । ದಿರುವದು ಚೋದ್ಯವು; ॥ ಸುರರೀ ಧರಣಿಯ ಸೋಂಕುವರೆ! ॥೧॥ ವಲಲನು, ಕಂಕ, ಬೃಹನ್ನಳೆಯರ ಮೈ । ಸುಳುಹಿದೆಯೆಂಬರು ಕೆಲಕೆಲರು॥

—(ದಾ)

ಆಗ ಉತ್ತರನು ಹೇಳುತ್ತಾನೆ—

ಷ॥ ತಾತ, ಬಿನ್ನಹ; ನಿನ್ನ ವೈರಿ । ವ್ರಾತವನು ಗೆಲಿದಾತನೀ ತೋ । ರ್ಪಾತನೀತನ ಮುಂದೆ ಮೆರೆವವ ಕೀಚಕಾಂತಕನು; ॥ ಈತ ನಕುಲನು; ವಾಮ ದಲಿ ನಿಂ । ದಾತ ಸಹದೇವಾಂಕನನಿಬರಿ । ಗೀತ ಹಿರಿಯನು ಧರ್ಮನಂದನನೆಂದು ತೋರಿಸಿದ ॥

—(ಕ. ಭಾರ)

ಆಗ ವಿರಾಟನು ತನ್ನ ಮೂಢತ್ವಕ್ಕೆ ಮರುಗಿ ಗುಣಗ್ರಹಣಮಾಡಿ ಪಾಂಡವರಿಗೆರಗಿ ಕ್ಷಮೆ ಬೇಡಿಕೊಂಡಿದ್ದಾನೆ. ವಿರಾಟಪತ್ನಿಯು ಬಂದು ದ್ರೌಪದಿಗೆ ನಮಸ್ಕರಿಸಿದ್ದಾಳೆ. ಅವರ ಸಿಂಹಾಸನಾರೋಹಣವನ್ನು ಸರ್ವರೂ ಮಾನ್ಯಮಾಡಿದ್ದಾರೆ. ಪಾಂಡವರು ಈ ರೀತಿಯಲ್ಲಿ ಗೋರಕ್ಷಣೆಯಿಂದ ಏಳಿಗೆಯನ್ನು ಪಡೆದದ್ದನ್ನು ನೋಡಿಯೇ ಪೂರ್ವಿಕರು ಕೀರ್ತನಾರಂಭದಲ್ಲಿ **"ಮಾಡಿ ಧನ್ಯನಾಗು ಮನುಜನೆ"** ಎಂದು ಮುಂತಾಗಿ ಉಪದೇಶಮಾಡಿರುವರು.

ಕೃ ಷ್ಣ ಸಂ ಧಾ ನ

ಪೀಠಿಕೆ—ಭಕ್ತಿಪ್ರಭಾವ

ಮೋಹನ—ಆದಿತಾಳ

ಎಷ್ಟು ಹೇಳಲಿ! । ಕೃಷ್ಣನಾ ಪ್ರಭಾವ ॥ ಪ ॥ ಶಿಷ್ಟರಾಗಿ ತನ್ನ । ನಿಷ್ಠೆಯಿಂದ ಭಜಿಸೆ । ಕಷ್ಟಗಳ ಕಳೆ । ದಿಷ್ಟವೀಯುವನು ॥ ಅ. ಪ ॥ ಮೊದಮೊದಲುಪದೇಶಗೈವನು; । ತುದಿಯಲ್ಲಿ ತಾನೆ ಆಳಾಗುವನು; ॥ ಎದೆಗೆಡಿಪನು ಭಕ್ತದ್ವೇಷಿಗಳ; । ಸದಯನು ಶ್ರೀನಾರಾಯಣನು ॥ ೧ ॥

ತಾಯಿಯಂತೆ ಜನರ ಉನ್ನತಿಯನ್ನು ಬಯಸುವ ವೇದವು ನಿತ್ಯಸುಖವನ್ನು ಕೊಡುವ ಪರಮಾತ್ಮಪ್ರಾಪ್ತಿಯ ಸಾಧನಗಳಾದ ತಪಶ್ಚರ್ಯೆಗಳನ್ನು ಬೇಕಾದಷ್ಟು ಹೇಳಿದ್ದರೂ ಜನರು ಅಡ್ಡದಾರಿಯನ್ನು ಹಿಡಿಯುವದನ್ನು ನೋಡಿ ಜ್ಞಾನಿಗಳು ಕನಿಕರಪಟ್ಟು ಹೇಳುವದೇನೆಂದರೆ—

ವೃ॥ ಪರಿಪರಿವಾದನುಂ ನೆಗಳ್ವುದೇ ಜಪಮನ್ಯಮನಃ ಪ್ರಸೂನಮುಂ ।
ಕೊರಗಿಪುದೇ ತಪಂ; ಪೆರರ ಜೀವಿತಮುಂ ಪರಿದಿಕ್ಕುವಂದಮೇ ॥ ಪರತರಶೀಲ
ಮಾದರಿಸಿ ಲೋಗರ ಮರ್ಮಮನೈದೆ ಭೇದಿಪೊಂ । ದಿರವೆ ಪೊದಳ್ದ ಜಾನಮೆನೆ
ದುರ್ಜನತಾಪಸನೇಂ ಕೃತಾರ್ಥನೋ! ॥ —(ರಾ. ವಿ)

ಟಿ॥ ಲೋಗರ=ಲೋಕದ ಜನರ. ಪೊದಳ್ದ=ವ್ಯಕ್ತವಾದ. ಜಾನ=ಜ್ಞಾನವು.

ಹೀಗೆ ದೊಡ್ಡವರ ಮುಂದೆ ನಾಚಿಕೆಗೇಡಾಗಿ ಹೊಟ್ಟೆಗಾಗಿ ಸೇವಾವೃತ್ತಿಯನ್ನು ಮಾಡಿದವರು ತೋರಿಸಿಕೊಂಡಿರುವ ಪಶ್ಚಾತ್ತಾಪವೇನೆಂದರೆ—

ವೃ॥ ಬಯ್ದೊಡೆ ಮೇಳವಾಡಿದನೆನುತ್ತಪರಾಧಮನಿಟ್ಟು ಸಾನವೊಲ್ । ಪೊ
ಯ್ದೊಡೆ ಬುದ್ಧಿವೇಳ್ದನೆನುತರ್ಥಮನುಯ್ದೊಡೆ ತಾನೆ ಕೊಟ್ಟು ತಾ ॥ ನುಯ್ದನೆ
ನುತ್ತೆ, ನೂಂಕಿದೊಡೆ ಬಾಗಿಲೊಳಿರ್ಪೆನೆನುತ್ತಮಾಳ್ದನಿ । ತ್ತಯ್ದುಪಣಕ್ಕೆ ಮಾರಿ
ತನುವಂ ಪೊರೆದೆಂ ಗುರುಮೂರ್ತಿ ಶಂಕರಾ! ॥ —(ಗು.ಶಂ.ಶ)

ಹೀಗೆ ಹೊಟ್ಟೆಬಟ್ಟೆಗಳ ಯೋಚನೆಯಲ್ಲಿಯೇ ಮುಳುಗಿದರೆ ಸುಖವಿಲ್ಲವೆಂದು ಜ್ಞಾನಿಗಳು ಉಪದೇಶಿಸಿರುವದೇನೆಂದರೆ—

ಮುಖಾರಿ—ಆದಿತಾಳ

ಬಿಡುವನೆಂದಿಗೆ ನೀ ಕಾಣ್ವೆ ? । ಮನುಜ, ॥ ಪ ॥ ಕಡುತಾಪವೆಂದಿಗೆ
ಮಾಣ್ವೆ ? ಮನುಜ ॥ ಅ. ಪ ॥ ಬೆಳಗಿಂದ ಬೈಗಿನ ಪರ್ಯಂತ । ಮನುಜ । ಮುಳು
ಗಿರ್ಪೆ ಕಾರ್ಯದೊಳಂಥ ॥ ಬಳಿವೋಗಿ ಸಂತರ ಪಂಥ । ತಳೆದಂದು ಶಾಂತಿಯನಂತ।
ಮನುಜ ॥ ೧ ॥ ಪಲವಾತನಾಡುತಲಿಪ್ಪೆ ; । ಮನುಜ । ಬಲಕುಂದೆ ಬರ್ಪುದು
ಮುಪ್ಪೇ ; । ಒಲಿ ದೇವನಾಮಕೆ ಬೆಪ್ಪೇ, । ಹಲಿಸೋದರನೆ ನೀನಪ್ಪೆ । ಮನುಜ
॥೨॥ ಮನದಿ ಯೋಚನೆಯೇಂ ಮಾಳ್ಪೆ? । ಮನುಜ । ಜನುಮಂಗಳೆನಿತನು
ನೋಳ್ಪೆ ? ॥ ಕುಣಿದೇಕೆ ಭೋಗವ ಬೇಳ್ಪೆ ? । ನೆನೆ ಶಂಕರಾತ್ಮನ ಬೆಪ್ಪೇ ॥೩॥
—(ಆ.ಗೀ)

ಟಿ॥ ಬಿಡುವ - ವಿರಾಮವನ್ನು. ಬೈಗು - ಸಂಜೆ. ಪಲವಾತನು - ಬಹಳಮಾತನ್ನು. ಹಲಿಸೋದರ - ಕೃಷ್ಣ. ಬೇಳ್ಪೆ - ಬೇಡುವೆ. ಬೆಳ್ಪ - ಬೆಪ್ಪೆ.

ಆದ್ದರಿಂದ ಬಿಡುವನ್ನು ಮಾಡಿಕೊಂಡು ಹೊಟ್ಟೆಬಟ್ಟೆಯಲ್ಲಿಯೇ ಮುಗಿಯುವ ಸೇವಾವೃತ್ತಿಯನ್ನು ಬಿಟ್ಟು ತನ್ನ ಯೋಗಕ್ಷೇಮಕ್ಕಾಗಿ ಹರಿಯನ್ನಾಶ್ರಯಿಸಬೇಕೆಂದು ದೊಡ್ಡವರು ನಿಶ್ಚಯಿಸಿರುವದೇನೆಂದರೆ—

ಶ್ಲೋ ॥ ಕ್ಷೋಣೀಕೋಣಶತಾಂಶಪಾಲನಖಲದ್ದುರ್ವಾರಗರ್ವಾನಲ ।
ಕ್ಷುಭ್ಯತ್ಕ್ಷುದ್ರನರೇಂದ್ರಚಾಟುರಚನಾಂ ಧನ್ಯಾಂ ನ ಮನ್ಯಾಮಹೇ; ॥ ದೇವಂ

ಸೇವಿತುಮೇವ ನಿಶ್ಚಿನುಮಹೇ ಯೋಽಸೌ ದಯಾಲುಃ ಪುರಾ । ಧಾನಾಮುಷ್ಟಿಮುಚೇ ಕುಚೇಲಮುನಯೇ ಧತ್ತೇ ಸ್ಮ ವಿತ್ತೇಶತಾಮ್ ॥ —(ವೈ.ಶಂ)

ಅ॥ ಜಗತ್ತಿನ ಒಂದು ಮೂಲೆಯ ನೂರರಲ್ಲೊಂದು ಭಾಗವನ್ನು ಆಳುವದರಿಂದಲೇ ಮಿತಿಮೀರಿದ ಬೆಂಕಿಯಂಥ ಗರ್ವದಿಂದ ಹೊಯ್ದಾಡುತ್ತಿರುವ ಕ್ಷುದ್ರರಾದ ರಾಜರ ಮನಸ್ಸನ್ನು ಮೆಚ್ಚಿಸುವ ಪ್ರಯತ್ನವನ್ನು ಯೋಗ್ಯವಾದದ್ದೆಂದು ನಾವು ತಿಳಿಯುವದಿಲ್ಲ. ಯಾವದೇವನು ಮುಷ್ಟಿಯವಲಕ್ಕಿಯನ್ನು ತಂದ ಕುಚೇಲಮುನಿಗೆ ಕುಬೇರಪದವಿಯನ್ನು ಕೊಟ್ಟನೋ ಆ ದಯಾಳುವಾದ ಈ ದೇವನನ್ನು ಸೇವಿಸಬೇಕೆಂದೇ ನಿಶ್ಚಯಿಸುತ್ತೇವೆ.

ರಾಜರ ಸೇವೆಯು ಬಹಳ ಕಷ್ಟವೆಂತೆಂದರೆ—

ಶ್ಲೋ ॥ ಮೌನಾನ್ಮೂಕಃ; ಪ್ರವಚನಪಟುರ್ವಾತುಲೋ ಜಲ್ಪಕೋ ವಾ; । ಧೃಷ್ಟಃ ಪಾರ್ಶ್ವೇ ವಸತಿ ಚ ಸದಾ; ದೂರತಸ್ತ್ವಪ್ರಗಲ್ಭಃ ; ॥ ಕ್ಷಾಂತ್ಯಾ ಭೀರುರ್ಯದಿ ನ ಸಹತೇ ಪ್ರಾಯಶೋ ನಾಭಿಜಾತಃ; । ಸೇವಾಧರ್ಮಃ ಪರಮಗಹನೋ ಯೋಗಿನಾಮಪ್ಯಗಮ್ಯಃ ॥ —(ಸು)

ಅ॥ ಸುಮ್ಮನಿದ್ದರೆ ಮೂಕನೆನ್ನುವರು; ಒಂದಕ್ಕೊಂದು ಸೇರಿಸಿ ಮಾತಾಡಿದರೆ ಹರಟೆಯವನೆನ್ನುವರು; ಯಾವಾಗಲೂ ಹತ್ತಿರದಲ್ಲಿಯೇ ಇದ್ದರೆ ದಿಟ್ಟನೆನ್ನುವರು; ದೂರದಲ್ಲಿದ್ದರೆ ಮುಂದಾಳಾಗುವ ಲಕ್ಷಣವಿಲ್ಲದವನೆನ್ನುವರು; ಆಡಿದ್ದನ್ನೆಲ್ಲ ಸಹನಮಾಡಿದರೆ ಹೇಡಿ ಎನ್ನುವರು; ಸಹನಮಾಡದೆ ಹೋದರೆ ಒಳ್ಳೆ ಮನೆತನದವನಲ್ಲನೆನ್ನುವರು; ಹೀಗೆ ಸೇವೆಯ ಉದ್ಯೋಗವು ಬಹುಕಷ್ಟ; ಯೋಗಿಗಳಿಗೆ ಕೂಡ ಸಾಧ್ಯವಲ್ಲ.

ಆ ರಾಜಸೇವೆಯಿಂದ ದೊರೆಯುವ ಐಶ್ವರ್ಯ ಮುಂತಾದವೂ ಶಾಶ್ವತವಲ್ಲವೆಂದು ಸಾಧುಗಳು ಎಚ್ಚರಿಸಿರುವದೇನೆಂದರೆ—

ಮೋಹನ—ಝಂಪೆ

ಸಿರಿಯು ಸತಿ ಸುತ ಹಿತರು ನಿಜವೆಂದು ನೆರೆ ನಂಬಿ । ಬರಿದೆ ಮೈ ಮರೆದು ಕೆಡದಿರು ಮಂದಮನುಜ ॥ ಪ ॥ ಎಣ್ಣೆ ಇಹ ತನಕ ದೀವಿಗೆಯುರಿವ ಪೊಲು ಪೂರ್ವ । ಪುಣ್ಯವಿಹ ಪರಿಯಂತ ಸಿರಿಯಿರ್ಪುದು; ॥ ಪುಣ್ಯತೀರಿದ ಮರುದಿನಕ್ಕೆ ನಿನ್ನಯ ಸಿರಿಯು । ಎಣ್ಣೆ ಮುಗಿದಿಹ ದೀಪದೊಲು ತಣ್ಣಗಾಗುವದು ॥೧॥ ಒಂದು ಮರದೊಳಗಖಿಳಪಕ್ಷಿಗಳು ಸಂಜೆಯೊಳ । ಗೊಂದಿ ಬೆಳಗಿನೊಳಗಲಿ ಪೋಗುವಂತೆ॥ ತಂದೆತಾಯಣ್ಣ ತಮ್ಮರು ಸತಿಸುತರು ಕಾಲ । ಬಂದ ನಿಮಿಷಕೆ ನಿನಗೆ ಹೇಳದ್ಯೆದುವರು ॥ ೨ ॥ ವ್ರಣಕೆ ಮುಸುಕುವ ನೊಣಗಳಂತೆ ನಿನ್ನನು ಜನರು । ಹಣವಿರುವ ಪರ್ಯಂತ ಓಲಯಿಪರು; ॥ ಹಣವು ನಿನ್ನೊಳು ಮುಗಿದ ಗಳಿಗೆಯೊಳಗಾ ಜನರೆ । ಹೆಣವ ಕಂಡಂತೆ ದೂರಕೆ ಹೋಗುತಿಹರು ॥ ೩ ॥ ನಿನ್ನಂಗಕಿಂತ ನಿನಗಿನ್ನು ಹಿತವಾವುದೀ । ನಿನ್ನಂಗವೇ ನಿನ್ನನಗಲ್ವುದೆನಲು ॥ ಅನ್ಯರಹ ಸಿರಿಯು ಸತಿಸುತಹಿತರು ನಿಜವದೆಂ । ತಿನ್ನಿದನು ತಿಳಿದು ಮೋಹಿಸದಿರೆಲೆ ಮರುಳೆ ॥ ೪ ॥ ಸುರಚಾಪಗಂಧರ್ವಪುರಗಳಿಂ ಪುಸಿಯಾದ । ಸಿರಿಮುಖ್ಯಪರಿಕರದಿ ಮೈಮರೆಯದ ॥ ಗುರುಸಿದ್ಧನಂಘ್ರಿಪಂಕಜವ ಮನದೊಳು ಭಜಿಸಿ । ಪರಮುಕ್ತಿಯನು ಪಡೆದು

ಸುಖಿಯಾಗು ಕಂಡ್ಯಾ ॥ ೫ ॥ —(ಕೈ. ಕ)

ಆದ್ದರಿಂದಲೇ ಮನುಷ್ಯನು ತನ್ನ ಸುಖಕ್ಕೆ ಹರಿಯನ್ನಾಶ್ರಯಿಸಬೇಕೆಂದು ಕವಿ ಹೇಳಿರುವದೇನೆಂದರೆ—

ಶ್ಲೋ ॥ ಸತ್ತಾರಕಃ ಸ್ಯಾದ್ಭಜನೇನ ಯುಕ್ತೋ । ನೃಣಾಂ ಸಮೃದ್ಧಃ ಕಿಲ ಸತ್ಪಥೋऽಪಿ ॥ ಸಾಹಾಯ್ಯಕಂ ಚೇನ್ನ ಶತಹ್ರದಾಯಾ । ಘನಾಘನಃ ಕಿಂ ಜಲದಾನದಕ್ಷಃ ? ॥ —(ಸು.ಲಾ)

ಅ॥ (೧) (ಸತ್+ತಾರಕಃ+ಸ್ಯಾತ್) ಒಳ್ಳೆ ನಕ್ಷತ್ರಗಳು ಹುಟ್ಟಿರುವಂಥ (ಭಜನೇನಯುಕ್ತಃ) ನಕ್ಷತ್ರಪುಂಜಗಳಿಂದ ತುಂಬಿರುವಂಥ (ಸಮೃದ್ಧಃ ಕಿಲ ಸತ್ಪಥಃ ಅಪಿ) ಆಕಾಶವು ವಿಸ್ತಾರವಾಗಿ ಹರಡಿಕೊಂಡಿದ್ದರೂ (ಘನಾಘನಃ) ತುಂಬಿ ಬಂದ ಮೇಘಗಳು (ಶತಹ್ರದಾಯಾ ನ ಸಹಾಯಂ ಚೇತ್) ಮಿಂಚಿನ ಸಹಾಯವಿಲ್ಲದಿದ್ದರೆ (ಜಲದಾನ ದಕ್ಷಃ ಕಿಂ) ನೀರು ಕೊಡುವದಕ್ಕೆ ಸಮರ್ಥವಾದೀತೇನು ? ಮನುಷ್ಯರಿಗೆ (ಸಮೃದ್ಧಃ ಕಿಲ ಸತ್ಪಥೋऽಪಿ) ಸನ್ಮಾರ್ಗವು ಎಷ್ಟೇಪರಿಪೂರ್ಣವಾಗಿದ್ದರೂ (ಭಜನೇನಯುಕ್ತಃ) ಭಕ್ತಿಯುಕ್ತನಾದರೇನೆ (ಸತ್ತಾರಕಃ ಸ್ಯಾತ್) ಅವನು ಒಳ್ಳೆ ಉದ್ಧಾರಕನಾಗುತ್ತಾನೆ.

ಆದ್ದರಿಂದ ಕೃಷ್ಣನಿಗೆ ಶರಣು ಹೋಗಬೇಕೆಂದು ಭಗವದ್ಭಕ್ತರು ಉಪದೇಶಿಸಿರುವದೇನೆಂದರೆ:—

ಮುಖಾರಿ—ಅಟತಾಳ

ಕೃಷ್ಣನ ನೆನೆದರೆ ಕಷ್ಟಬಂದಿಷ್ಟಿಲ್ಲ । ಕೃಷ್ಣಾ ಎನಬಾರದೆ? ॥ಪ॥ ನರಜನ್ಮ ಬಂದಾಗ ನಾಲಿಗೆ ಇರುವಾಗ ಕೃಷ್ಣಾ ಎನಬಾರದೆ? । ಮರಳೊಂದು ಸಾಧನವಾಗದು ತಿಳಕೊಂಡು ಕೃಷ್ಣಾ ಎನಬಾರದೆ? ॥೧॥ ಮಲಗೆದ್ದು ಮೈಮುರಿದು ಏಳುತಾಗಲೊಮ್ಮೆ ಕೃಷ್ಣಾ ಎನಬಾರದೆ ? । ಸುಳಿದಾಡುವಾಗಲಿ ತಿರುಗಾಡುತಲೊಮ್ಮೆ ಕೃಷ್ಣಾ ಎನಬಾರದೆ? ॥ ೨ ॥ ಮೇರೆಯಿಲ್ಲದ ಮಾತನಾಡುವಾಗಲೊಮ್ಮೆ ಕೃಷ್ಣಾ ಎನಬಾರದೆ ? । ದಾರಿಯ ನಡೆವಾಗ ಭಾರವ ಹೊರುವಾಗ ಕೃಷ್ಣಾ ಎನಬಾರದೆ ॥ ೩ ॥ ಗಂಧವ ಪೂಸಿ ತಾಂಬೂಲವ ಮೆಲುವಾಗ ಕೃಷ್ಣಾ ಎನಬಾರದೆ । ಮಂದಗಮನೆ ಕೂಡ ಸರಸವಾಡುತಲೊಮ್ಮೆ ಕೃಷ್ಣಾ ಎನಬಾರದೆ ? ॥ ೪ ॥ ಪರಿಪರಿ ಹಾಸ್ಯವ ಮಾಡುತಲೊಮ್ಮೊಮ್ಮೆ ಕೃಷ್ಣಾ ಎನಬಾರದೆ? । ಕೆಲಸವ ಪರಿಪರಿ ಮಾಡುತಲೊಮ್ಮೆಯು ಕೃಷ್ಣಾ ಎನಬಾರದೆ? ॥ ೫ ॥ ಕಂದನ ಬಿಗಿದಪ್ಪಿ ಮುದ್ದಾಡುತಲೊಮ್ಮೆ ಕೃಷ್ಣಾ ಎನಬಾರದೆ? । ಚೆಂದುಳ್ಳ ಹಾಸಿಗೆ ಮೇಲೆ ಕುಳಿತು ಒಮ್ಮೆ ಕೃಷ್ಣಾ ಎನಬಾರದೆ ? ॥ ೬ ॥ ನೀಗದಾಲೋಚನೆ ರೋಗೋಪದ್ರದಲೊಮ್ಮೆ ಕೃಷ್ಣಾ ಎನಬಾರದೆ ? । ಭೋಗಪಡೆದು ಅನುರಾಗದಲ್ಲಿರುವಾಗ ಕೃಷ್ಣಾ ಎನಬಾರದೆ? ॥೭॥ ದುರಿತರಾಶಿಗಳನ್ನು ತರಿದು ಬಿಸುಡುವಾಗ ಕೃಷ್ಣಾ ಎನಬಾರದೆ? । ಗರುಡವಾಹನ ಶ್ರೀ ಪುರಂದರವಿಠಲನ ಕೃಷ್ಣಾ ಎನಬಾರದೆ ॥೮॥ —(ದಾ)

ತನ್ನನ್ನು ಭಜಿಸಿದವರ ಯೋಗಕ್ಷೇಮವನ್ನು ತಾನೇ ವಹಿಸುವೆನೆಂದು ಶ್ರೀ ಕೃಷ್ಣನೇ ಹೇಳಿರುವದೇನೆಂದರೆ—

ಶ್ಲೋ॥ ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ ।
ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್ ॥ —(ಭ. ಗೀ.)

ಅ॥ ಬೇರೊಂದನ್ನು ಅವಲಂಬಿಸದೆ ನನ್ನನ್ನು ಯಾರು ಶರಣೆನ್ನುತ್ತಾರೊ ಯಾವಾಗಲೂ ನನ್ನಲ್ಲಿ ಮನಸ್ಸಿಟ್ಟ ಅವರ ಯೋಗಕ್ಷೇಮವನ್ನು ನಾನು ವಹಿಸುತ್ತೇನೆ.

ಅವನು ಯೋಗಕ್ಷೇಮವನ್ನು ಎಷ್ಟರಮಟ್ಟಿಗೆ ವಹಿಸುವನೆಂಬುದನ್ನು ಕವಿಯು ಹೇಳಿರುವದೇನೆಂದರೆ—

ತ್ರಿ॥ ಕೋಳಿ ಕೂಗದ ಮುನ್ನ ಏಳುವದು; ನಿತ್ಯದ । ಯಾಳು ದೇವನನು ಭಕ್ತಿಯಿಂ ನೆನೆದರೆ । ಆಳಿನಾಳಯ್ಯ ಸರ್ವಜ್ಞ ॥ —(ಸು)

ಹಾಗೆ ದೇವರು ಭಕ್ತರಿಗೆ ಆಳಾದ ಉದಾಹರಣೆಗಳಲ್ಲಿ ಕೆಲವು ಯಾವವೆಂದರೆ—

ಕಮಾಚು — ರೂಪಕ

ಏನಿದು ! ಪೇಳ್ಭಕ್ತಪರಾ । ಧೀನತೆ ದೇವ ॥ ಪ ॥ ಮೂರುಲೋಕದೊಡೆಯನಾಗಿ । ಧಾರಿಣಿಯೊಳ್ಮೆರೆವ ನಿನಗೆ ॥ ಅ. ಪ ॥ ಧರೆಯೊಳಗೆ ಕಬೀರಗಾಗಿ । ಪರಿಪರಿಯಾದ ॥ ವರವಸ್ತ್ರವನ್ನು ನೆಯ್ದು । ಪರಮಪುರುಷ, ಶ್ರೀರಮೇಶ ॥೧॥ ಹರುಷದಿ ದಾಮಾಜಿಯೆಂಬ । ಶರಣನ ಬಳಿಯೊಳ್ ॥ ಪರಿಚರ್ಯೆಯನ್ನುಗೈದ । ಗರುಡಧ್ವಜ, ಸರಸಿಜಾಕ್ಷ ॥ ೨ ॥ ಜನಿಯೆನುತ್ತ ಹೆಸರುಪಡೆದ । ವನಿತೆಗೆ ತಾನು ॥ ಅನುವಿಂ ವಸ್ತ್ರಗಳ ನೊಗೆದ ವನಜಾಯತ ದೀರ್ಘನಯನ ॥ ೩ ॥ ನೆರೆ ಸಜ್ಜನನೆಂಬ ಕಟುಕನಂಗಡಿಯಲ್ಲಿ ॥ ಭರದಿಂ ಮಾಂಸವ ಮಾರಿದ । ಶರದಿಂದು ಸುಮಂದಹಾಸ ॥ ೪ ॥ ಆದರದಿಂದೇಕನಾಥ । ಸಾಧುಗೃಹದೊಳು ॥ ಭೇದವಿಲ್ಲದೆ ನೀರ ಹೊತ್ತ । ಮಾಧವ, ಮಧುರಿಪು, ಚಿನ್ಮಯ ॥ ೫ ॥ —(ಭಕ್ತಿ. ಗೀ)

ಸರ್ವರಿಗೂ ತಂದೆಯಾದ ಪರಮಾತ್ಮನು ಶರಣರ ಯೋಗಕ್ಷೇಮವನ್ನು ಮಾತ್ರ ನೋಡುವನೇಕೆಂದರೆ—

ಶ್ಲೋ॥ ಸಮೋಽಹಂ ಸರ್ವಭೂತೇಷು; ನ ಮೇ ದ್ವೇಷ್ಯೋಽಸ್ತಿ ನ ಪ್ರಿಯಃ; । ಯೇ ಭಜಂತಿ ತು ಮಾಂ ಭಕ್ತ್ಯಾ ಮಯಿ ತೇ ತೇಷು ಚಾಪ್ಯಹಮ್ ॥ —(ಭ. ಗೀ)

ಅ॥ ನಾನು ಎಲ್ಲ ಪ್ರಾಣಿಗಳಲ್ಲಿಯೂ ಒಂದೇರೀತಿ ಇರುವೆನು. ನನಗೆ ಹಗೆಯೂ ಇಲ್ಲ; ಹಿತರೂ ಇಲ್ಲ; ಯಾರು ನನ್ನನ್ನು ಭಕ್ತಿಯಿಂದ ಭಜಿಸುತ್ತಾರೊ ಅವರು ನನ್ನಲ್ಲಿರುವರು; ಅವರಲ್ಲಿ ನಾನೂ ಇರುವೆನು.

ಕೃಷ್ಣನೇ ಮೊದಲಾದ ಅವತಾರಗಳನ್ನು ಭಜಿಸುವದರಲ್ಲಿರಬೇಕಾದ ಎಚ್ಚರಿಕೆಯನ್ನು ಶ್ರೀಕೃಷ್ಣನೇ ಕೊಟ್ಟಿರುವದೇನೆಂದರೆ—

ಶ್ಲೋ॥ ಅವಜಾನಂತಿ ಮಾಂ ಮೂಢಾಃ ಮಾನುಷೀಂ ತನುಮಾಶ್ರಿತಮ್ ।
ಪರಂ ಭಾವಮಜಾನಂತೋ ಮಮ ಭೂತಮಹೇಶ್ವರಮ್ ॥ —(ಭ. ಗೀ)

ಅ॥ ಸಮಸ್ತ ಚರಾಚರಜಗತ್ತಿಗೆಲ್ಲ ಒಡೆಯನಾದ ನನ್ನ ಪರಮಾತ್ಮಸ್ವರೂಪವನ್ನು ತಿಳಿಯದೆ ಮನುಷ್ಯದೇಹವನ್ನು ಪಡೆದವನೆಂದು ಮೂಢರು ನನ್ನನ್ನು ಅವಮಾನಗೊಳಿಸುತ್ತಾರೆ—

ಆದ್ದರಿಂದ ಕೃಷ್ಣನ ದೇಹದಕಡೆಗೆ ಲಕ್ಷ್ಯವನ್ನು ಕೊಡದೆ ಅಂತರ್ಯಾಮಿಯಾದ ಆತ್ಮನ ಕಡೆಗೆ ಲಕ್ಷ್ಯವನ್ನಿಟ್ಟು ಮನಸ್ಸನ್ನು ಪರಮಾತ್ಮನಲ್ಲಿ ನೆಲೆಗೊಳಿಸಬೇಕು. ಆ ಮನಸ್ಸು ಮನುಷ್ಯನಿಗೆ ತಾರಕವಾಗುವದೆಂತೆಂದರೆ—

ವೃ॥ ಮನದ ಕುಭಾವನೇ ದುರಿತಮಲ್ಲಿ ಸುಭಾವನೆ ಪುಣ್ಯಮಿಾ ಎರ। ಳ್ಳನ
ದೊಳಗಿಲ್ಲದಾ ಮನವೆ ತನ್ನ ನಿಜಾತ್ಮನೊಳೈಕ್ಯಮಾಗಿ ಸು ॥ ಮ್ಮನೆ ನಿಲೆ ಮೋಕ್ಷ
ಮಂತದರಿನಾತ್ಮನೆ ತಾಂ ಪಗೆ; ತಾನೆ ಬಂಧುವುಂ; । ತನಗೆ ವಿನಿಶ್ಚಯಕ್ಕೆ ಗುರು
ತಾನೆಯಲಾ! ಅಪರಾಜಿತೇಶ್ವರಾ —(ಅ. ಶ)

ಇಂಥ ಒಳ್ಳೆ ಭಾವನೆಗೆ ದೇವರು ಒಲಿಯುವನೆಂಬುದಕ್ಕುದಾಹರಣೆಯಾಗಿ ಇಂಥ ಭಾವನೆಯಿದ್ದ ಪಾಂಡವರಿಗೆ ಶ್ರೀ ಕೃಷ್ಣನು ದೂತನಾಗಿ ನೆರವಾದ ಕೃಷ್ಣ ಸಂಧಾನವೆಂಬ ಆಖ್ಯಾನವು ಇಲ್ಲಿ ಯಥಾಮತಿ ನಿರೂಪಣಮಾಡಲಾಗುವದು.

ಆಖ್ಯಾನ

ವಿರಾಟನಗರದಲ್ಲಿ ಅಜ್ಞಾತವಾಸವನ್ನು ಮುಗಿಸಿಕೊಂಡು ಬಂದಮೇಲೆ ಪಾಂಡವರು ರಾಜ್ಯವನ್ನು ಸಾಧಿಸುವ ಪ್ರಯತ್ನವನ್ನು ನಡೆಸಬೇಕೆಂದು ಕೃಷ್ಣನನ್ನು ಬರಮಾಡಿಕೊಂಡು ಕೇಳಿದಾಗ ಕೃಷ್ಣನು ಹೇಳಿದ್ದು:—

ಷ॥ ಕೇಳು ಪಾಂಡವಮುಖ್ಯ, ಮೊದಲೇ । ಕಾಳಗಕ್ಕಂಘೈಸ ಸಲ್ಲದು; ।
ಮೇಳದಲಿ, ಸಾಮದಲಿ, ಭೇದದಲಧಿಕದಾನದಲಿ ॥ ಲೀಲೆಯಿಗೆ ಬಲ್ಲಿದವಿರೋಧಿ
ನೃ । ಪಾಲನನು ತನಗೆಲ್ಲ ದಿನವನು । ಕೂಲವಹ ವೊಲು ಮಾಡಿಕೊಂಬುದೆ ಧರ್ಮ
ವಹುದೆಂದ ॥ —(ಕ. ಭಾರ)

ಅದಕ್ಕೊಪ್ಪಿ ಪಾಂಡವರು ಕೊನೆಗೈದೂರು ದೊರೆತರೂ ಸಾಕೆಂದು ಸಂಜಯನನ್ನು ಕೌರವನ ಬಳಿಗೆ ಕಳುಹಿಸಿದ್ದರ ಪರಿಣಾಮವೇನಾಯಿತೆಂದರೆ—

ಕೀ॥ ಐವರಿಗೈದೂರುಗಳನಾದೊಡಿ । ನ್ನೀವುದೆಂಬವರಪೇಕ್ಷೆಯನು ॥ ಭಾ
ವಿಸಿ ಪೇಳಿದ ಸಂಜಯನಿಗೆ ಕುರು । ಭೂವರ ತೋರ್ದನುಪೇಕ್ಷೆಯನು ॥

ಈ ಉತ್ತರವು ಬಂದಮೇಲೆ ಶ್ರೀ ಕೃಷ್ಣನು ತಾನೇ ಒಮ್ಮೆ ಹೋಗಿ ಅವನನ್ನು ದಾರಿಗೆ ತರುವ ಯೋಚನೆಯನ್ನು ಮಾಡುತ್ತೇನೆಂದು ಸನ್ನದ್ಧನಾದಾಗ ಧರ್ಮರಾಯನಿಗೂ ಕೃಷ್ಣನಿಗೂ ನಡೆದ ಮಾತು—

ಸಾ॥ (ಧ)ದುರುಳರ ಬಳಿಗೈದಿಸುತದರಿಂದಲಿ । ದೊರಕಿಪ ಲಾಭವು ಬೇಡ;॥
(ಕೃ)ಎರಡ ಬಗೆಯಲಾ ಕ್ಷಣಪರಿಭವಿಸುವೆ । ಕುರುಭೂಪಾಲನ ಪಾಡ ॥

ಎಂದು ಹೊರಡುವವನ್ನೇ ನಿಶ್ಚಯಿಸಿದ ಕೃಷ್ಣನ ಸನ್ನಾಹಕ್ಕೆ ಒಪ್ಪಿ ಧರ್ಮರಾಯನು ತನ್ನ ಅಭಿಪ್ರಾಯವನ್ನು ಹೇಳಿದ್ದು—

ಷ॥ ಅಳಿವವೊಡಲಿದು; ಅವನಿಸಾಗರ । ಉಳಿಯಲುಳಿಪುದು ಕೀರ್ತಿ; ಸೋ
ದರ । ರೊಳಗೊಳಗೆ ಹೊಯ್ದಾಡಿ ಕೆಟ್ಟರು ಎಂಬ ದುರ್ಯಶದ ॥ ಹಳಿವು ಹೊರು

ನದು ದೇವ; ಸುಡಲಾ ನೆಲನನಾ ಕೌರವನ ಕೈಯಲಿ । ಕೆಲವು ನಗರಿಯ ಕೊಡಿಸಿ
ನಮ್ಮನು ಸಂತವಿಡಿ ಯೆಂದ ॥ —(ಕ. ಭಾರ)

ಈ ಉದ್ದೇಶದಿಂದ ಧೃತರಾಷ್ಟ್ರನ ಮುಂದೆ ಹೇಳತಕ್ಕದ್ದೆಂಬ ಧರ್ಮರಾಯನ ಮಾತು—

ಶ್ಲೋ ॥ ಜಾತಾ ವನೇ ವಯಮಮೀ; ಭವದಂಕಭೂಮೌ । ವೃದ್ಧಿಂಗತಾ
ಶಿರಸಿ ಶಾಸನಮಾದಧಾನಾಃ ॥ ನಿಸ್ತೀರ್ಣಸಂಗರಪಯೋನಿಧಯಸ್ತ್ವಯಾದ್ಯ ।
ಸ್ಥಾಪ್ಯಾ ಯಥಾಂಶಮವನೇರವನೇ ವನೇ ವಾ ॥ —(ಭಾರ.ಚಂ)

ಅ॥ ಅರಣ್ಯದಲ್ಲಿ ಹುಟ್ಟಿ ನಿನ್ನ ತೊಡೆಯಮೇಲೆ ಬೆಳೆದು ನಿನ್ನಪ್ಪಣೆಯನ್ನು ತಲೆಯಲ್ಲಿ ಹೊತ್ತು ಮಹತ್ತಾದ ಪ್ರತಿಜ್ಞೆಯನ್ನು ದಾಟಿದ ನಮ್ಮನ್ನು ನೀನು ಈಗ ನಮ್ಮ ಪಾಲಿನ ಭೂಮಿಯ ರಕ್ಷಕಪದವಿಯಲ್ಲಿಯೋ ಅಥವಾ ಅರಣ್ಯದಲ್ಲಿಯೋ ನಿಲ್ಲಿಸಬೇಕು.

ಹೀಗೆ ಧರ್ಮರಾಯನಾಡಿದಮೇಲೆ ಕೃಷ್ಣನು ಕರೆದು ಕೇಳಿದಾಗ ಭೀಮನು ಹೇಳಿದ್ದು—

ದಿಂ ॥ ಕಲಹದಿಂ ಲೋಕಕ್ಷೋಭೆಯಪ್ಪುದೆಂದು । ತಿಳಿಯ ಹೇಳುವದೇಂ
ನಿನಗೆ ನಾವ್ಗಳಿಂದು; ॥ ಕುಲವ ಕೊಲ್ಲುವ ಯೋಚನೆಯದೇಕೆ ಬೇಕು? । ಕೆಲವು
ಹಳ್ಳಿಗಳೇ ದೊರೆಯಲಷ್ಟೆ ಸಾಕು ॥

ಭೀಮನ ಈ ಮಾತಿಗೆ ಕೃಷ್ಣನು ತನ್ನಲ್ಲಿ ತಾನು ಆಶ್ಚರ್ಯಗೊಂಡದ್ದು—

ಷ॥ ಎಲೆ ಮಹಾದೇವಾಯ್ತು ಹಾಲಾ । ಹಲ ಸುಧಾರಸ ! ಉಕ್ಕಿದುರಿಯ
ಗ್ಗಳಸುಶೀತಲವಾಯ್ತು! ಸಿಡಿಲಾಟೋಪ ನಯವಾಯ್ತು ! ॥ ಕೊಳುಗುಳಕೆ ಪವ
ಮಾನನಂದನ । ನಳುಕಿದನು !ಮಝು, ಭಾಪು! ಕುಂತೀ । ಲಲನೆ ಹೆತ್ತಳು ಸುತರ
ನೆಂದನು ಶೌರಿ ನಸುನಗುತ ॥ —(ಕ.ಭಾರ)

ಮುಂದೇನಾಯಿತೆಂದರೆ—

ಸಾಂ॥ ಅರ್ಜುನನಕುಲರದೇ ಅಭಿಪ್ರಾಯವ । ನೂರ್ಜಿತಗೊಳಿಸಲು ಕೇಳಿ॥
ಗರ್ಜಿಸಿದನು ಸಹದೇವನು ಯುದ್ಧದಿ । ರಾಜ್ಯವ ಪಡೆವೆನೆಂದಾಲಿ ॥

ಟಿ॥ ಆಲಿ=ಆವೇಶಗೊಂಡು.

ಈಮಾತನ್ನು ಕೇಳುತ್ತಲೆ—

ಷ॥ ಸರಿಯಿಾ ನುಡಿಯೆಂ । ದುರೆ ಗರ್ಜಿಸಿದನು । ಹರುಷದಿ ಸಾತ್ಯಕಿಯಾ
ಭರದಿ; ॥ ಸರಿಸರಿಸರಿಯೆಂ । ದರು ಭಟರೆಲ್ಲರು । ಧುರವ ಬಯಸಿ ಪರಮಾದರದಿ ॥

ಆಗ ಕೃಷ್ಣನಪ್ಪಣೆಯಂತೆ ದೂತನು ಹೋಗಿ ದ್ರೌಪದಿಗೆ ಈ ಸಮಾಚಾರವನ್ನು ತಿಳಿಸಿ ಬರ ಹೇಳಿದನೆನುತ್ತಲೆ ಆಕೆ ಹೇಳಿದ್ದು—

ಷ॥ ಏನು ಹದನೇನೆಲವೊ, ವರ ಸಂ । ಧಾನವೇ ಕೌರವರೊಳದು ಸು ।
ಮ್ಮಾನವೇ ಪತಿಗಳಿಗೆ? ಪಾಪಿಗಳಿರಿದರೋ ಸತಿಯ! ॥ ದಾನವಾಂತಕನೆಸಗುವನೆ
ತ । ಪ್ಪೇನು? ತಪ್ಪೇನೆನುತ ನಸುಮುಸು । ಕ್ಛಾನನಾಂಬುಜವದನೆ ಬಂದಳು ಕೃಷ್ಣ
ನೋಲಗಕೆ ॥ —(ಕ.ಭಾರ)

ಈರೀತಿಬಂದ ದ್ರೌಪದಿಯು ತನ್ನ ವಿಷಾದವನ್ನು ಪ್ರಕಟಿಸುತ್ತಾಳೆ—

ಸೀ ॥ ಹುಟ್ಟಿದುದು ಯಜ್ಞವೇದಿಕೆ; ಪಡೆದವನು ದ್ರುಪದ; - ಕೃಷ್ಣ
ನಿಗೆ ನಾ ಪ್ರೇಮಪಾತ್ರಳಹುದು; । ಧೃಷ್ಟಕೇತುವೆ ಅಣ್ಣ; ಪಾಂಡುರಾಯನಿಗೆ
ಸೊಸೆ; - ಮುಟ್ಟಿ ಹಿಡಿದವರು ಪಾಂಡವರೈವರು; । ಧಿಟ್ಟರಿಹ ಪ್ರತಿವಿಂಧ್ಯ ಮೊದ
ಲಾದವರ ತಾಯಿ; - ಇಷ್ಟೆಲ್ಲವಿದ್ದೇನು ನೋಡಲಿನ್ನು? । ಕೆಟ್ಟ ಕೌರವನೆನ್ನ ದಾಸಿ
ಯೆಂದ್ರಾ ಪಾಪ - ತಟ್ಟಿ ಸಾಯೆನು; ಮತ್ತೆ ಮಾಡಲೇನು ! ॥ ಇಟ್ಟಣಿಪ ಭೀಮ
ಗದೆಯಿಂದಲೇನು ! । ನೆಟ್ಟನರ್ಜುನನ ಗಾಂಡಿವದೊಳೇನು ! । ಕಟ್ಟುಹರಿದೀ
ಮುಡಿಯ ನೋಡಲೇನು! । ಕೆಟ್ಟೆನಕಟಾ! ಹೇಳಿ ಫಲವದೇನು ॥

ಎಂದು ಆಕೆ ರೋಷದಿಂದ ಗಂಡಂದಿರನ್ನು ಕುರಿತು ಹೇಳುತ್ತಾಳೆ—

ಷ ॥ ತನಯರೈವರು, ವೀರ ಸಹದೇ । ವನು, ಘಟೋತ್ಕಚನಾ ಸುಭದ್ರಾ।
ತನಯರೆಮ್ಮಯ ತಂದೆ, ಮೂರಕ್ಷೋಣೀ ಸೇನೆ ॥ ಇನಿಬರೂ ಕೂಡುವರು;
ದುಶ್ಶಾ । ಸನನ ರಕುತವ ಸುರಿದು ಕುರುಕುಲ । ವನವ ಸುಡುವರು ; ನಿಮ್ಮ
ಹಂಗೇಕೆಂದಳಿಂದುಮುಖಿ ॥ —(ಕ.ಭಾರ)

ಆಗ—

ಚೌ ॥ ವರಸತಿಯ ಬಿಸುಸುಯ್ಲ ಗಾಳಿಯೊ - ಳುರಿ ಭಡಾಳಿಸೆ ಭೀಮನು ।
ಭರದೊಳಾಗಲೆ ರೋಷಮಯದು - ಬ್ಬರದೊಳೊತ್ತಿದನೌಡನು; ॥ ಹಿರಿದು ಖತಿ
ಯನು ಹಿಡಿದು ಕುರುಗಳ - ನೊರೆಸಿ ಪಡೆಯುತ ನೆಲವನು । ಅರಿವನಿತೆಯರ ಕಂ
ಬನಿಯ ನದಿ । ಹರಿಯಗೈದಪೆನೆಂದನು ॥

ಆಗ ಶ್ರೀಕೃಷ್ಣನು ಭೀಮನನ್ನು ನೋಡಿ ಹುಸಿನಗೆಯನ್ನು ನಗುತ್ತ ಏಕಾಂತದಲ್ಲಿ ದ್ರೌಪದಿಗೆ ಹೇಳಿದ ಸಮಾಧಾನ—

ಷ॥ ದೇವಕಿಯ ಮೇಲಾಣೆ; ವರವಸು । ದೇವನಂಘ್ರಿಗಳಾಣೆ ; ಮನ್ಮಥ
ದೇವನಾಣೆ; ನಿದಾನವನು ಕೇಳಬಲೆ ನಿನ್ನಾಣೆ; ॥ ನಾವು ಸಂಧಿಯ ನೆವದಲವದಿರ।
ಭಾವವನು ಕಲಿಮಾಡಿ ಕೋಪವ । ತೀವಿ ಸಂಧಿಯ ಮುರಿದು ಬಹೆವಿದ ನಂಬು
ನೀನೆಂದ ॥ —(ಕ.ಭಾರ)

ಇದರಿಂದ ಸಮಾಧಾನವನ್ನು ತಂದುಕೊಂಡ ದ್ರೌಪದಿಯು ಕೃಷ್ಣನಿಗೆ ಮತ್ತೆ ನೆನಪುಕೊಟ್ಟದ್ದು—

ಕೀ ॥ ಕುರುಕುಲದವರೊಳು ಮಾತನು ಬೆಳೆಸುವ । ಭರದೊಳಗೆಂದೆಂದಿಗು
ನೀನು ॥ ಮರೆಯಬೇಡವೆನ್ನಯ ಬಿಡುಮುಡಿಯನು; । ಹರಿಯೇ, ನಿನಗೆರಗುವೆ
ನಾನು ॥

ಹೀಗೆ ಸಂಧಾನವನ್ನು ನಡೆಸುವದಕ್ಕೊಪ್ಪಿ ಹೊರಟ ಕೃಷ್ಣನನ್ನು ನೋಡಿ ಜನರೆಲ್ಲರೂ ಹೊಗಳಿದ್ದು—

ನಾದರಾಮಕ್ರಿಯೆ—ಆದಿತಾಳ

ಹದಿನಾಲ್ಕು ಲೋಕಕೆ ದಾತ । ಹರಿ । ಪಾಂಡವರ ಮನೆದೂತ ॥ ಪ ॥ ಚತುರಹಸ್ತದಿಂದೆಂಜಲ ತೆಗೆವ ಅತುಲಿತ ಕಟ್ಯದ ಪೊತ್ತು ಬಿಸುಡುವ । ವಿತತ ವಸರಿ ನೀಲಾಂಗದಿ ಸುರಿವ । ಘೃತದಧಿಕ್ಷೀರಾಮೃತವ ಸುರಿಸುವ । ಸತಿಕೌಸ್ತುಭಗಳು ವಕ್ಷದೊಳಿರುವ ॥ ಹಿತದಿ ಪೀತಾಂಬರಪತನಾರ್ಣವ ಶ್ರೀ । ಪತಿ ಚಿತ್ರಾಕೃತಿ ಗತಿಶಯ ತಿಳಿದು । ಸತತ ಸದನದಲಿ ಕೆಲಸಕೊದಗುವ ॥೧॥ ಭರ್ಮಬೆಳ್ಳಿಬೆತ್ತಗಳಂ ಪಿಡಿವ । ಚರ್ಮಕಶ್ಮದಂಡೊಮ್ಮೆ ಧರಿಸುವ । ಮರ್ಮಕಾರನಂದದಿ ಕಾದಿರುವ । ಮರ್ಮವರಿತು ಕವಳೋದಕ ಕೊಡುವ । ನಿರ್ಮಲವಾಗಿ ಕುದುರೆ ತೊಳತರುವ । ಪೇರ್ಮೆಯಿಂದ ರಥ ಕಟ್ಟಿ ಸಾರಥ್ಯವ । ಧರ್ಮಾನುಜ ಹೊರಟಾಗ ನಡೆಸುವ ॥ ೨ ॥ ಕಾಸು ವೀಸ ಸಂಬಳವನೆ ಬಯಸ । ಸಾಸಿರನಾಮದೊಡೆಯ ಸಿರಿಯರಸ । ದಾಸರ ಮನೆ ಕೆಲಸಕೆ ಮನ ಹರುಷ । ಸಾಸುವೆಯಷ್ಟಾಯಾಸವ ಪಡಿಸ ॥ ದೋಷಕಾರಿ ದೈತ್ಯರ ಸಂತರಿಸ। ಭಾಸುರನಿಲಯ ಪುರಂದರವಿಠಲ। ಭಕ್ತರ ಬಳಿಸರಸಾ॥೩॥—(ದಾ)

ಟಿ॥ ಭರ್ಮ-ಬಂಗಾರ. ಅಶ್ಮ-(ರತ್ನದ) ಕಲ್ಲು.

ಕೃಷ್ಣನು ಹಸ್ತಿನಾಪುರಕ್ಕೆ ಬರುವ ಸುದ್ದಿ ಬರುತ್ತಲೆ ಸಂಧಾನಕ್ಕೊಪ್ಪಬೇಕೆಂಬ ಧೃತರಾಷ್ಟ್ರ ಭೀಷ್ಮಾದಿಗಳ ಮಾತಿಗೆ ಕೌರವನು ಹೇಳಿದ್ದು—

ಸಾ॥ ಕೊಡೆನು ಪಾಲುಗೀಲನು ಪಾಂಡವರಿಗೆ । ಪೊಡವಿಯೊಳೊಂದೆಳ್ಳಷ್ಟು; ॥ ನುಡಿಯೊಳಿನ್ನು ಸರಿಯೆನದಿರೆ ಕೃಷ್ಣಗೆ । ಬಿಡದೆ ಬೀಳುವದು ಕಟ್ಟು॥

ಈ ಮಾತನ್ನು ಕೇಳಿದ ಕೂಡಲೆ ಭೀಷ್ಮರೇ ಮೊದಲಾದವರು ಕಿವಿಯಮೇಲೆ ಕೈ ಇಟ್ಟುಕೊಂಡು ಎದ್ದು ಹೋದರು; ಧೃತರಾಷ್ಟ್ರನೂ ವ್ಯಸನಗೊಂಡನು. ದುಷ್ಟರ ಹಣೆಯ ಬರೆಹವೇ ಇಷ್ಟು—

ಶ್ಲೋ॥ ನ ಗೃಹ್ಣಾತಿ ವಚಃ ಪಥ್ಯಂ ಕಾಮಕ್ರೋಧಾದಿಪೀಡಿತಃ॥ ಹಿತಂ ನ ರೋಚತೇ ತಸ್ಯ ಮುಮೂರ್ಷೋರಿವ ಭೇಷಜಮ್ ॥ —(ಸು)

ಅ॥ ಬಯಕೆ, ಸಿಟ್ಟು-ಮೊದಲಾದವುಗಳ ಕಟ್ಟಿಗೆ ಸಿಕ್ಕಿದವನು ಪಥ್ಯವಾದ ಮಾತನ್ನು ಗ್ರಹಿಸುವದಿಲ್ಲ. ಸಾಯುವವನಿಗೆ ಔಷಧವು ಹೇಗೋ ಹಾಗೆ ಅವನಿಗೆ ಹಿತವು ರುಚಿಸುವದಿಲ್ಲ.

ಆಮೇಲೆ ದುರ್ಯೋಧನನ ಹೊರತು ಎಲ್ಲರೂ ಕೃಷ್ಣನನ್ನು ಎದುರುಗೊಳ್ಳುವದಕ್ಕೆ ಬಂದರು-

ಶ್ಲೋ॥ ಮಂದಾ ವಿದಧತು ನಿಂದಾಮ್ । ನಿಪುಣೋ ಹರಿಪಾದಸೇವನಂ ಕುರುತೇ ॥ ಮಂಡೂಕೇಷು ರಟತ್ಸ್ವಪಿ । ಮಧುಪಃ ಸರಸಿಜರಸಂ ನ ಸಂತ್ಯಜತಿ ॥ —(ಸು)

ಅ॥ ದಡ್ಡರು ನಿಂದೆಯನ್ನು ಮಾಡಿದರೂ ಜಾಣರು ದೇವರ ಸೇವೆಯನ್ನು ಮಾಡುತ್ತಾರೆ. ಕಪ್ಪೆಗಳು ಕೂಗುತ್ತಿದ್ದರೂ ಭ್ರಮರಗಳು ಕಮಲದ ರಸವನ್ನು ಬಿಟ್ಟು ಹೋಗುವದಿಲ್ಲ.

ದುರ್ದೈವಿಯಾದ ದುರ್ಯೋಧನನಿಗೆ ಈ ಸುಯೋಗವು ಹೇಗೆ ದೊರತೀತು—

ಶ್ಲೋ॥ ನೇತ್ರೋತ್ಸವೋ ಭವತಿ ಸರ್ವಜನಸ್ಯ ಯೇನ । ಸೂರ್ಯೋದಯೇನ

ಹತಸಂತಮಸೋಚ್ಚಯೇನ ॥ ತೇನೈವ ದೈವವಿಹತಸ್ಯ ವಿಹಂಗಮಸ್ಯ । ನಕ್ತಂಚರಸ್ಯ ನಯನಾಂಧ್ಯಮುದೇತಿ ಗಾಢಮ್ ॥ —(ಸು)

ಅ॥ ಕತ್ತಲೆಯನ್ನೆಲ್ಲ ಧ್ವಂಸಮಾಡಿ ಎಲ್ಲರ ಕಣ್ಣಿಗೂ ಆನಂದವನ್ನು ಕೊಡುವ ಆ ಸೂರ್ಯೋದಯದಿಂದಲೆ ದುರ್ದೈವಿಯೂ ರಾತ್ರಿಸಂಚಾರವುಳ್ಳದ್ದೂ ಆದ ಗೂಬೆಯ ಕಣ್ಣಿಗೆ ಬಲವತ್ತರವಾದ ಕತ್ತಲೆ ಕವಿಯುತ್ತದೆ.

ಕೃಷ್ಣನು ಬಂದದ್ದು ಜನರಿಗೆ ಹೇಗೆ ಕಾಣುತ್ತಿತ್ತೆಂದರೆ—

ಶ್ಲೋ॥ ಗಜತ್ರಾತೇತಿ ವೃದ್ಧಾಭಿಃ, ಶ್ರೀಕಾಂತ ಇತಿ ಯೌವತೈಃ । ಯಥಾಸ್ಥಿತಶ್ಚ ಬಾಲಾಭಿರ್ದೃಷ್ಟಃ ಶೌರಿಃ ಸ ಕೌತುಕಮ್ ॥ —(ಸು)

ಅ॥ ಕೃಷ್ಣನನ್ನು ವೃದ್ಧರೆಲ್ಲರೂ ಗಜೇಂದ್ರನನ್ನು ರಕ್ಷಿಸಿದವನೆಂದೂ ಪ್ರಾಯದವರೆಲ್ಲರೂ ಲಕ್ಷ್ಮೀಪತಿಯೆಂದೂ ಹುಡುಗರೆಲ್ಲರೂ ಕಣ್ಣಿಗೆ ಕಂಡರೀತಿಯವನೆಂದೂ ಆಶ್ಚರ್ಯದಿಂದ ನೋಡಿದರು.

ಆಗ ಜನರೆಲ್ಲರೂ ಹೂವಿನ ಮಳೆಯನ್ನು ಕರೆದದ್ದು—

ಕಾಂಬೋದಿ—ಆದಿತಾಳ

ಬಿರಿಮುಗುಳನು ಮಿಗೆ ಬೀರಿದರು ॥ ಪ ॥ ಸರಿಮಿಗಿಲೆನೆ ಸಿರಿಯರಸನೊಳಸಿಯರು ॥ ಅ.ಪ ॥ ಮುಗುಳುನಗೆಯು ಬೆಳಗೊ! । ತೀಲುವ । ಮುದ್ದುನೋಟದ ಬೆಳಗೊ! ॥ ತಳತಳಿಸುವ ಮಣಿತಾಟಂಕದೊಳುರೆ । ಬಿಗಿದ ಮುತ್ತಿನ ತನಿ ಬೆಳ್ಳಿಳಗೋ । ಎನೆ ॥ ೧ ॥ ಸೊಗಸುಕಮ್ಮಲರ್ಗಳಸೂಸಿದರು ॥ ಪ ॥ ಬಗೆಗಾತಿಯರು ಗೋಪಾಲನ ಮೆಯ್ಯೊಳು ॥ ಅ. ಪ ॥ ಕರರುಹಗಳವೊಗರೊ! । ಮುತ್ತಿನುಂ । ಗುರಗಳ ಕುಡಿವೊಗರೋ! ॥ ಕರಕಮಲದ ಮಣಿಕಡಗದೊಳೊಪ್ಪುವ । ವರ ವಜ್ರಂಗಳ ಬಲ್ವೊಗರೋ! ಎನೆ ॥ ೨ ॥ ಮೊಲ್ಲೆಮಲ್ಲಿಗೆಗಳ ಚೆಲ್ಲಿದರು ॥ ಪ ॥ ಚೆಲ್ಲಗಾತಿಯರು ಚೆಲುವಗೋವಳನೊಳು ॥ ಅ. ಪ ॥ ಸೊಗಸು ಗೋಪಾಲನೊಳು । ಸಜ್ಜನ । ಸನ್ನುತಶೀಲನೊಳು ॥ ತಿರುಮಲೆಯಾರ್ಯರ ದೇವರೆನಿಸಿ ಭೂ । ವರಚಿಕದೇವನ ಪೊರೆದು ಮೆರೆವನೊಳು ॥ ೩ ॥ —(ಗೀ. ಗೋ)

ಈ ಪ್ರಕಾರ ಪುರಪ್ರವೇಶಮಾಡಿದ ಕೃಷ್ಣನು ನೆಟ್ಟಗೆ ವಿದುರನ ಮನೆಯ ಬಾಗಿಲಿಗೆ ಬರುತ್ತಲೆ—

ಷ॥ ಸಿರಿಮೊಗದ, ಕಿರುಬೆಮರ, ತೇಜಿಯ । ಖುರಪುಟದ ಕೆಂಧೂಳಿ ಸೋಂಕಿದ । ಸಿರಿಮುಡಿಯ, ತುದಿಮೀಸೆಯಲಿ ಕೆಂಪಡರ್ದ ರೇಣುಗಳ, ॥ ಖರ ಮರೀಚಿಯ ಝಳಕೆ ಬಾಡಿದ । ತರುಣತುಲಸಿಯ ದಂಡೆಯೊಪ್ಪುವ । ಗರುವ ದೇವನ ಬರವ ಕಂಡನು ಬಾಗಿಲಲಿ ವಿದುರ ॥ —(ಕ.ಭಾರ)

ಆಗಿನ ವಿದುರನ ಸ್ಥಿತಿ—

ಶ್ಲೋ॥ ಕಂಸವೈರಿಣಿ ಸಮೇಯಿಷಿ ಗೇಹಂ । ಕ್ಷತ್ತುರಾತಿಶಯಿಕಂ ಮುದನ್ವತ್ರಮ್ ॥ ಸಂಕ್ಷಿಪಾಂ ಗಮಯತಿ ಸ್ಮ ಪುರಾರೇಃ । ಸಂಧ್ಯತಾಂಡವವಿಧೇರವಲೇಪಮ್ ॥ —(ಭಾರ. ಚಂ)

ವ॥ ಕೃಷ್ಣನು ತನ್ನ ಮನೆಗೆ ಬರುತ್ತಲೆ ವಿದುರನು ಬಹಳವಾಗಿ ಕುಣಿದಾಡಿದ್ದು ಈಶ್ವರನ ಸಂಧ್ಯಾತಾಂಡವದ ಹೆಮ್ಮೆಯನ್ನು ತಲೆತಗ್ಗಿಸುವಂತೆ ಮಾಡುತ್ತಿತ್ತು.

ಆ ಭರದಲ್ಲಿ ಅವನು ಹಾಡಿದ್ದೇನೆಂದರೆ—

ಮಧ್ಯಮಾವತಿ—ಏಕತಾಳ

ಇಂದು ನಾನೇನ ಸುಕೃತವ ಮಾಡಿದೆನೊ? । ಮಂಗಲಮಹಿಮ ವೇಂಕಟ ಬಂದ ಮನೆಗೆ ॥ಪ॥ ಹಾರ, ಕೇಯೂರ, ಹೊನ್ನುಂಗುರ ಬೆರಳಾ,। ಹಾರದ ನಡುವೆ ಹಾಕಿದ ಏಳು ಪದಕ ॥ ತೋರಮುತ್ತಿನ ಕಂಠಮಾಲೆ, ಮಾಲಿಕೆಯು,। ಮೇಲುಗಿರಿ ವಾಸ ವೇಂಕಟ ಬಂದ ಮನೆಗೆ॥೧॥ ಎಸಳೂ ಸುತ್ತಿದ ಪಟ್ಟೆಯೆಸೆವಾ ಕಸ್ತೂರಿಯು । ಹಸನಾದ ಸಣ್ಣ ನಾಮ, ಸಾಧುತಿಲಕವು, ॥ ಕುಸುಮ ಮಲ್ಲಿಗೆ ಜಾಜಿ ಎಸೆವಾ ಸಂಪಿಗೆಯು । ವಸುಧೀಶ ಸೊಬಗಾ ವೇಂಕಟ ಬಂದ ಮನೆಗೆ ॥ ೨ ॥ ಬಿಗಿದು ಸುತ್ತಿದ ವಾಲೆ ಬಿಡಿಮುತ್ತಿನೊಂಟೆ । ಬಗೆಬಗೆ ಉಂಗುರ ಥಗಿಥಗಿಸುತಲಿ ॥ ಅಗ ಣಿತಹಸ್ತ ಕಂಕಣ ಹೊಳೆವುತಲಿ । ಜಗದೊಳಧಿಕನು ವೇಂಕಟ ಬಂದ ಮನೆಗೆ ॥೩॥ ಪಿಡಿದ ಸುದರ್ಶನ ಎಡಗೈಯ ಶಂಖ। ಪಿಡಿದಿದ್ದ ಖಡ್ಗದಿ ಜಡರ ಮರ್ದಿಸುತ ॥ ಉಡಿದಾರ ನಡುವೆ ಹೃದಯದೊಳು ಲಕ್ಷ್ಮೀ । ಬಡವರ ಧ್ಯೇಯ ವೇಂಕಟ ಬಂದ ಮನೆಗೆ ॥ ೪ ॥ ಬಾಲಚಂದ್ರನ ಪೋಲ್ವ ವಾಲೆ ಕುಂಡಲವೂ । ಮೇಲು ಮಾಣಿಕ್ಯ ನವರತ್ನದುನ್ನತವು ॥ ಕಾಲಲಂದುಗೆಯೂ ನವರತ್ನದಾವುಗೆಯು । ಮೇಲುಗಿರಿ ವಾಸ ವೇಂಕಟ ಬಂದ ಮನೆಗೆ ॥೫॥ ಇಂದಿರಾರಮಣಾ ನೀ ಎನ್ನ ಕುಲತಿಲಕಾ । ನಂದನ ಕಂದ ಮುಕುಂದ ಗೋವಿಂದ ॥ ಬಂದೆನ್ನ ಪಾಪಬಂಧನವ ಪರಿಹರಿಪ । ಕಂದರ್ಪಜನಕ ವೇಂಕಟ ಬಂದ ಮನೆಗೆ ॥೬॥ ಪಾಷಾಣರೂಪದಹಲ್ಯಾಶಾಪವನು। ಶೋಷಣೆಮಾಡಿದ ಸೊಬಗ ರೂಪಿನಲಿ ॥ ಶೇಷಾಚಲಾಧೀಶ ಶೇಷಾಧಿಶಯನ । ದಾಸಪಾಲಕನು ವೇಂಕಟ ಬಂದ ಮನೆಗೆ ॥ ೭ ॥ ಹೊಳೆವ ಪೀತಾಂಬರ ಉಡಿಗೆ ಕಠಾರಿ । ಹೊಳೆವ ಕಂಗಳ ನೋಟ ಹೊಸಪಂಚಬಾಣ ॥ ವೀಳ್ಯದ ಬಾಯ ಕರ್ಪೂರ ಕರಡಿಗೆಯ । ಚೆಲುವಾ ಚೆಳ್ಳುಗುರಾ ವೇಂಕಟ ಬಂದ ಮನೆಗೆ ॥೮॥ ಗರುಡನನೇರಿ ಮೂಜಗವ ಮೋಹಿಸುತ । ಪರಮವೈಷ್ಣವರ ಪಾವನವ ಪಾಲಿಸುತ ॥ ಪರಿಪರಿ ಯಲಿ ತನ್ನ ಬಿರುದ ಪೊಗಳಿಸುತ। ಪು ಂದರವಿಠಲ ವೇಂಕಟ ಬಂದ ಮನೆಗೆ ॥೯॥

—(ದಾ)

ಹಸಿದಿರುವ ನನಗೆ ಈ ಕುಣಿತದಿಂದೇನೆಂದ ಕೃಷ್ಣನಿಗೆ ವಿದುರನು ಮಾಡಿದ ಸತ್ಕಾರದ ಪರಿ ಣಾಮ—

ದಿಂ॥ ವಿದುರನಿತ್ತೊಂದೇ ಕುಡಿತೆ ಹಾಲನಾಗ । ಮುದದಿ ಕೃಷ್ಣಂ ತಾಂ ಕುಡಿಯೆ ತಾನು ಬೇಗ ॥ ಅದುಬುತಂ ಕೇಳ್ವೆ ಕೆಳಗೆ ಸುರಿದ ಧಾರೆ । ಒದಗಿ ಸಾಗರ ವಾಸ್ತುಮಮು ! ಮೇರೆ ಮಿಾರೆ ॥

ಇದನ್ನು ಕಂಡು ಕೌರವರು ಅಸೂಯೆಯಿಂದ ಬೇಯುತ್ತಿರಲು ಇತ್ತ ಕೃಷ್ಣನು ಅಲ್ಲಿಂದ ಕೌರವನ ಮನೆಗೆ ಹೊರಡುವಾಗ ಕುಂತಿ ಹೇಳಿದ್ದು—

ಚೌ॥ ವೀರಮಾತೆಯ ಮಕ್ಕಳೆನಿಪ ವಿ - ಚಾರವಿರಲೆನ್ನಣುಗರ । ಪಾರುಪತ್ಯವ ಮಾಡು ದ್ರುಪದಕು-ಮಾರಿಗಾಗೆ ಮನೋಹರ ; । ನಾರುಡಿಗೆಗಿಮ್ಮಡಿಯೆನಿಪುದಾ - ನಾರಿಯುಡಿಗೆಯನೆಳೆದುದು ; । ಧೀರಭೀಮಾರ್ಜುನರಿಗುಚಿತವೆ?- ಕಾರಿಯವ ಕಡೆಗಾಣ್ಬುದು ! ॥

ಹೀಗೆಂದು ಆಕೆ ಮನಸ್ಸಿನಲ್ಲಿ ಹರಕೆಯನ್ನು ಹೊತ್ತದ್ದು—

ಕಂ॥ ನಂದವ ದಿವ್ಯಜ್ಞಾನಾ । ನಂದದ ನಿಧಿ, ಪೊರೆಯ ನೀನೆ ಶರಣೆನೆ ಸತಿ ತಾ ॥ ನಂದದನಂತೊಸೆದಾಕೆಯ । ನಂದದ ಮಾನದೊಳೆ ಪೊರೆದ ಹರಿ ಪೊರೆಗೆಂದುಂ ॥ —(ಸೂ. ತಾ)

ಟಿ॥ ನಂದದ = ಅರದೆ ಇರುವ. ತಾನು + ಅಂದು + ಅದನು + ಅಂತು + ಒಸೆದು + ಆಕೆಯನು + ಅಂದದ.......

ಆಮೇಲೆ ಕೃಷ್ಣನು ಸಮಯವನ್ನರಿತು ದುರ್ಯೋಧನನ ಸಭೆಗೆ ಬರುತ್ತಲೆ ಎಲ್ಲರೂ ಎದ್ದು ಇದಿರುಗೊಂಡರೂ ದುರ್ಯೋಧನನು ಸೊಕ್ಕಿನಿಂದ ಕುಳಿತೇ ಇದ್ದದ್ದರಿಂದೇನಾಯಿತೆಂದರೆ—

ಷ॥ ಸೆಣಸು ಸೇರದ ದೇವನಿದಿರಲಿ । ಮಣಿಯದಾತನ-ಕಾಣುತಲೆ ಧಾ । ರಿಣಿಯನೊತ್ತಿದನುಂಗುಟದ ತುದಿಯಿಂದ ನಸುನಗುತ ॥ ಮಣಿಖಚಿತಕಾಂಚನದ ಪೀಠದ । ಗೊಣಸು ಮುರಿದುದು ; ವೇಲೆ ಸುರಸಂ । ದಣಿಗಳಾ ! ಎನೆ ಕವಿದು ಬಿದ್ದನು ಹರಿಯ ಚರಣದಲಿ ॥ —(ಕ. ಭಾರ)

ಕೊನೆಗೆ ಪದ್ಧತಿಯಂತೆ ಸತ್ಕಾರವಾದಮೇಲೆ ದುರ್ಯೋಧನನು ಊಟಕ್ಕೆಬ್ಬಿಸಿದಾಗ ಕೃಷ್ಣನೆಂದದ್ದು—

ಸಾಂ॥ ಬಗೆಯೆ ಪಾಂಡವ ಶತ್ರುನೀನು; ಪಾಂಡವರೊಗು । ಮಿಗೆ ನೋಡಲೆ ನಗವರೊಪ್ಪು ; ॥ ಹಗೆಯೊಳಗುಣ್ಣಬಾರದು ನೀತಿವಂತರು ; । ಹಗೆಗಿಕ್ಕುವನದು ಕೂಡ ತಪ್ಪು ॥

ಅದಕ್ಕೆ ಕೌರವನ ಉತ್ತರ—

ಸಾಂ॥ ಚಾರಶಿಖಾಮಣಿ ನೀನು ಗೋಕುಲದಲ್ಲಿ; । ಚಾರಜರಾ ಪಾಂಡುಸುತರು ; ॥ ಚಾರತ್ವಸಾಮಾನ್ಯದಿಂದವರನು ಮೆಚ್ಚಿ । ಸೇರಿದ ನಿನಗೆಣೆ ಯಾರು? ॥

ಇಷ್ಟೇ ಅಲ್ಲ—

ಷ॥ ನೀವು ಬಿಜಯಂಗೈವಿರೆಂದು ಮ । ಹಾವಿಳಾಸದೊಳಳವಡಿಸಿ ನಾ । ನಾವಿಧದ ಷಡುರಸವ ಗರುಡಿಯಲಿಂದು ಸವೆಸಿದೆನು; ॥ದೇವ, ನಮ್ಮರಮನೆಗೆ ಬಾರದೆ । ನೀವು ವಿದುರನ ಮನೆಯಲುಂಡಿರಿ; । ಗೋವಳಿಗತನ ನಿಮ್ಮ ಮೈಸಿರಿ ತಪ್ಪದಾಯ್ತೆಂದ॥ —(ಕ. ಭಾರ)

ಆಗ ಕೃಷ್ಣನು ಧೃತರಾಷ್ಟ್ರನನ್ನು ಕುರಿತು ಹೇಳುತ್ತಾನೆ—

ಕಲ್ಯಾಣಿ—ಆದಿತಾಳ

ಹೇಳು ಮಕ್ಕಳಿಗೆ ಬುದ್ಧಿಯ । ನೀ ॥ ಪ ॥ ತಮ್ಮನ ಮಕ್ಕಳು । ನೆಮ್ಮದಿ

ಯಾಗುವಂತೆ ॥ ಸುಮ್ಮನೆ ಪಾಲುಕೊಡೆ । ಹೇಳು ನೀ ॥ ೧ ॥ ನಿನ್ನಮಕ್ಕಳೂ ನೀನು । ನಿನ್ನ ಪಾಲಿನ ಧರೆ ॥ ಯನ್ನಿಟ್ಟುಕೊಳ್ಳಲೆಂದು । ಮುನ್ನ ನೀ ॥ ೨ ॥ ಹೇಳಿದ ಮಾತನು । ಕೇಳುವ ಪಾಂಡವರ ॥ ಗೋಳಗುಟ್ಟಿಸದಿರ । ಲೀಗ ನೀ ॥೩॥
—(ದಾ)

ಧೃತರಾಷ್ಟ್ರನು ತನ್ನ ಮಾತು ನಡೆಯದೆಂದುದನ್ನು ಕೇಳಿ—

ಕೀ॥ ಕೊಡು ಕೊಡು ರಾಜ್ಯವನೆನಲಾ ವಿದುರನು । ಕೊಡೆನೆನೆ ಕೌರವನದಕೇಳಿ ॥ ಫಡ! ಎಂದೊಡನೆಯೆ ತನ್ನಯ ಧನುವನು।ಪುಡಿಗೈದನು ಕೋಪವತಾಳಿ ॥

ಕೌರವನ ಸಹಾಯಕ್ಕೆಂದಿಟ್ಟಿದ್ದ ತನ್ನ ಧನುವನ್ನು ವಿದುರನು ಈ ಪ್ರಕಾರ ಮುರಿದಮೇಲೆ ಕೃಷ್ಣನು ನಗುತ್ತ ಅವನನ್ನು ಸಂತಯಿಸಿ ಕೌರವನಿಗೆ ಹೇಳಿದ್ದು—

ಷ॥ ಮಾಡಿದಪರಾಧಂಗಳನು ಮರೆ । ದಾಡರತಿ ಮೋಹದಲಿ ದಿಟ; ನೀ । ಗೂಡಿ ಬದುಕುವ ನುಡಿಯ ನುಡಿವರು, ನಿಮ್ಮ ಮನ ಮೆಚ್ಚಿ॥ ಕಾಡಿನೊಳಗಾಡಿದರು; ದುಃಖವ । ತೋಡಿದರು; ನೀನವರಿಗುಚಿತವ । ಮಾಡಿ ನಾಡನು ಕೊಡುವದೆಂದನು ದಾನವಧ್ವಂಸಿ॥
—(ಕ. ಭಾರ)

ಅದಕ್ಕೆ ಕೌರವನ ಉತ್ತರ—

ಜುಂಜೋಟಿ—ಛಾಪು

ತಿಳಿಯದಿಹೆ ಎನ್ನ ಬಲ । ಹಳಿಯುತಿಹೆ ನೀ ಬಹಳ । ತಳಮಳವಗೊಳಿಸದಿರು ಛಲದಿಂದ ॥ಪ॥ ನಿನ್ನವರು ತಾವಾಗಿಯೆ । ಎನ್ನೊಡನೆ ಜೂಜನಾಡಿ । ಮುನ್ನವೆ ತಾವ್ ಸೋತರೀಗ । ಇನ್ನೇನೂ ॥ ಅ. ಪ ॥ ಸುರಪತಿಯು ಶರಣೆಂದರೂ ಮರಳಿ ಕೊಡೆವು ಧರೆಯನಿನ್ನು । ತೆರಳು ಬಂದ ದಾರಿಯಲ್ಲಿ । ಹರಿಯೇ ನೀ ॥೧॥—(ದಾ)

ಮತ್ತೆ ಕೃಷ್ಣನು ಕೇಳುತ್ತಾನೆ—

ಷ॥ ಕೊಡು ವೃಕಸ್ಥಲವನು, ಕುಶಸ್ಥಲ । ಪೊಡವಿಯಾವಂತಿಯನು ; ಕುಳದಲಿ । ತೊಡಿಸಿಕಳೆ ಸಿರಿಕಣದವರಲಿ ವಾರಣಾವತವ; ॥ ಕೊಡು ನಿನಗೆ ಮನ ಬಂದದೊಂದನು; । ನಡೆಸಿಕೊಡುವೆನು ಪಾಂಡವರನವ । ಗಡೆಯತನ ಬೇಡಿನ್ನು ಕೇಳೆಂದಸುರರಿಪು ನುಡಿದ ॥
—(ಕ. ಭಾರ)

ಟಿ॥ ಕುಳದಲಿ....ವಾರಣಾವತವ=ಬೇರೆಬೇರೆ ಭಾಗಗಳ ಮತ್ತು ಅಧಿಕಾರಿಗಳ ಸಮೇತವಾಗಿ ವಾರಣಾವತವನ್ನು ಕೈಬಿಟ್ಟುಕೊಡು.

ಅದಕ್ಕೆ ಕೌರವನ ಉತ್ತರ—

ಚೌ॥ ಬೇಡಿದೊಂದೊಂದೂರು ನಮ್ಮಯ - ನಾಡ ತಲೆಯಾಗಿರುವವು ; । ರೂಢಿಯೊಳು ಗಜಪುರದ ಬೆಳವಿಗೆ-ಗೀಡಿನವಿವೆನಿಸಿರುವವು; ॥ ಬೇಡಬಲ್ಲವನಹುದು ನೀನದನಾಡಿ ಫಲವೇಂ ಸುಮ್ಮನೆ ; । ಬೇಡಿಧರಣಿಯನೆಲ್ಲವೀರಡಿ-ಮಾಡಿಕೊಂಡ ಮಹಾತ್ಮನೆ॥

ಇನ್ನೂ ಚೆನ್ನಾಗಿ ವಿಚಾರಮಾಡಿ ಪಾಂಡವರನ್ನು ಸಂತೈಸೆಂದ ಕೃಷ್ಣನಿಗೆ ಉತ್ತರ—

ಷ॥ ನೆಲನೊಳರ್ಧವ ನೀವುದಿಲ್ಲೀ । ಸ್ಥಲನನೈದನು ಮುನ್ನ ಕೊಡೆನೆ । ಸ್ನಿಳೆ; ಯ ಪಾದದಿ ಮೆಟ್ಟಲೀಯೆನದೇಕೆ ಕೈವಾರ? ॥ನೆಲನ ಕಡೆಯಲಿ ಮುಳ್ಳುಮೊನೆಯು ಚ್ಚಳಿಪ ಧರಣಿಯನಿತ್ತೆನಾದೊಡೆ । ಬಳಿಕ ನೀ ನಗು ಹೋಗು; ಕದನಕೆ ಕೊಂಡು ಬಾ ಎಂದ ॥ —(ಕ. ಭಾರ)

ಟಿ॥ ಕೈವಾರ = (ಸಂಧಾನದ) ಪ್ರಯತ್ನ. ಉಚ್ಚಳಿಪ = ಒಳಸೇರುವ.

ಆಗ ಕೃಷ್ಣನು ಸಭಿಕರನ್ನು ಕುರಿತು ಹೇಳಿದ್ದು—

ಶ್ಲೋ॥ ತ್ಯಜೇದೇಕಂ ಕುಲಸ್ಯಾರ್ಥೇ; ಗ್ರಾಮಸ್ಯಾರ್ಥೇ ಕುಲಂ ತ್ಯಜೇತ್;। ಗ್ರಾಮಂ ಜನಪದಸ್ಯಾರ್ಥೇ ; ಆತ್ಮಾರ್ಥೇ ಪೃಥಿವೀಂ ತ್ಯಜೇತ್ ॥ —(ಸು)

ಅ॥ ಕುಲದೇಳಿಗೆಯನ್ನು ಳಿಸಿಕೊಳ್ಳುವದಕ್ಕಾಗಿ ಒಬ್ಬನನ್ನು ಕೈಬಿಡಬೇಕು; ಒಂದು ಗ್ರಾಮದ ಏಳಿಗೆಯನ್ನು ಳಿಸಿಕೊಳ್ಳುವದಕ್ಕಾಗಿ ಒಂದು ಕುಲವನ್ನು ಬಿಡಬೇಕು; ದೇಶದ ಏಳಿಗೆಯನ್ನು ಳಿಸಿಕೊಳ್ಳುವದಕ್ಕಾಗಿ ಗ್ರಾಮವನ್ನು ಬಿಡಬೇಕು; ತನ್ನ ಏಳಿಗೆಗಾಗಿ ಜಗತ್ತನ್ನೇ ಬಿಡಬೇಕು.

ಇದನ್ನು ತಿಳಿದು ನೀವು ಅವನನ್ನು ತಿದ್ದದಿದ್ದರೆ ಅನರ್ಥವಾಗುವದೆಂದು ಕೃಷ್ಣನು ಹೇಳಿದ್ದನ್ನು ಕೇಳಿ ಎಲ್ಲರೂ ತಲೇಬಗ್ಗಿಸಲು ದುರ್ಯೋಧನನು ಸಿಟ್ಟಿನಿಂದ ಎದ್ದುಹೋಗುತ್ತ ನೆನೆದದ್ದು—

ಕಂ॥ ನೆರೆವಿಡಿಯೆ ವಾಸುದೇವನ । ನರಿಗಳ್ ಕಣ್ಣಳಿದರಂತೆ ಗತಿಮತಿಯಳಿದಂ ॥ ದಿರುತಿರ್ಪರ್ ಪಾಂಡವರೀ । ಧರೆಯೆಲ್ಲಂ ಶತ್ರುರಹಿತಮಾಗೆನಗಕ್ಕುಂ —(ದೂ.ವಾ)

ಆಗ ಧೃತರಾಷ್ಟ್ರನಿಂದ ಪ್ರೇರಿತಳಾದ ಗಾಂಧಾರಿಯು ಮಗನಿಗೆ ಹೇಳಿದ್ದು—

ಭೈರವಿ—ರೂಪಕ

ಮಗನೆ ನೀನು ಕೆಡಲುಬೇಡ ; । ಮಿಗೆ ಯಶವನು ಕೆಡಿಸಬೇಡ ॥ಪ॥ ಗುರುಹಿರಿಯರ ಮಾತುಗಳನು । ಬರಿದೆ ನೀ ಧಿಕ್ಕರಿಸಬೇಡ;॥ ಧರೆಯೊಳೆಲ್ಲ ಮಾದರಿಯ। ಪುರುಷನಾಗದಿರಲು ಬೇಡ ॥ ೧ ॥ ಪಾಂಡುಸುತರ ಹೆಚ್ಚುಗೆಯನು । ಕಂಡು ನೀ ಮತ್ಸರಿಸಬೇಡ; ॥ ಕೊಂಡೆಯಗಳ ಕೇಳಬೇಡ ; ಭಂಡನೆನಿಸಿಕೊಳ್ಳಬೇಡ ॥ ೨ ॥ ಹರಿಯನು ಪರಿಭವಿಸಬೇಡ; । ಹರಿಶರಣರ ಮುರಿಯಬೇಡ ; ॥ ನೆರೆ ಕಿಡುಕರ ಸೇರಬೇಡ; । ಧರೆಯ ಪಾಪಿಯೆನಿಸಬೇಡ ॥ ೩ ॥

ಟಿ॥ ಕೊಂಡೆಯಗಳ = ಚಾಡಿಗಳನ್ನು.

ಅದಕ್ಕೂ ದುರ್ಯೋಧನನು ಬಗ್ಗಲಿಲ್ಲ. ಅವನು ಹೇಳಿದ್ದೇನೆಂದರೆ—

ಶ್ಲೋ॥ ಜಾನಾಮಿ ಧರ್ಮಂ; ನ ಚ ಮೇ ಪ್ರವೃತ್ತಿಃ । ಜಾನಾಮ್ಯಧರ್ಮಂ; ನ ಚ ಮೇ ನಿವೃತ್ತಿಃ ॥ ಕೇನಾಪಿ ದೇವೇನ ಹೃದಿ ಸ್ಥಿತೇನ । ಯಥಾ ನಿಯುಕ್ತೋಽಸ್ಮಿ ತಥಾ ಕರೋಮಿ ॥ —(ಪಾಂ. ಗೀ)

ಅ॥ ನನಗೆ ಧರ್ಮವು ಗೊತ್ತಿದೆ ; ಅದರಕಡೆ ನನ್ನ ಒಲವಿಲ್ಲ. ನನಗೆ ಅಧರ್ಮವು ಗೊತ್ತಿದೆ.

ಆದನ್ನು ನಾನು ಹಿಮ್ಮೆಟ್ಟಿಸಲಾರೆ. ನನ್ನೊಳಿದ್ದುಕೊಂಡು ಯಾರೋ ಒಬ್ಬ ದೇವನು ಹೇಗೆಹೇಗೆ ನನಗೆ ಸ್ಫೂರ್ತಿಯನ್ನು ಕೊಡುತ್ತಾನೊ ಅದರಂತೆ ಮಾಡುತ್ತೇನೆ.

ಹೀಗೆಂದು ಅವನು ತಾಯನ್ನು ಹಿಂದಕ್ಕೆ ಕಳುಹಿಸಿಬಿಟ್ಟನು.

ಕಂ॥ ಹಿಳಿಯಲ್ಬರ್ಕುಂ ತೈಲವ । ಮಳಲೊಳಗುಂ ; ಮೊಲದ ಕೋಡ
ಕಾಣಲುಮಕ್ಕುಂ; ॥ ಪೊಳೆವ ಬಿಸಿಲ್ಗೊರೆಯೊಳ್ನೀ ।ರ್ಗೋಳಲಕ್ಕುಂ; ಮೂರ್ಖಜನ
ಮನೊಲಿಪುದಶಕ್ಯಂ ॥ —(ಭ. ನೀ)

ಇತ್ತ ದುರ್ಯೋಧನನು ಕೃಷ್ಣನನ್ನು ಕಟ್ಟುವ ಯೋಚನೆಯನ್ನು ನಡೆಸಿದ್ದನ್ನು ಕಂಡು ಗಾಬರಿಗೊಂಡ ಧೃತರಾಷ್ಟ್ರನು ದುರ್ಯೋಧನನನ್ನು ಬೇಡಿಕೊಳ್ಳುವದಕ್ಕೆದ್ದದ್ದನ್ನು ನೋಡಿ ವಿದುರನು ಹೇಳಿದ್ದು—

ಷ॥ ಎಲೆ ಮರುಳೆ, ಧೃತರಾಷ್ಟ್ರ, ನಂಜಿನ । ಬಳಗದೀತನ ಬಂಧುಕೃತ್ಯದ
ಬಳಕೆಯಲಿ ನೀ ನಿನ್ನ ಕಂದನ ಬೇಡಿಕೊಳಲೇಕೆ? ॥ ಮುಳಿದು ಬಗುಳುವ ನಾಯ್ಗೆ
ಚಂದ್ರಮ । ನಳುಕುವನೆ? ನರಿಯೊರಲಿದಡೆ ಕಳ । ವಳಿಸುವದೆ ಸಿಂಹಕ್ಕೆಯೆಂದನು
ಖಾತಿಯಲಿ ವಿದುರ ॥ —(ಕ. ಭಾರ)

ಹೀಗೆ ಧೃತರಾಷ್ಟ್ರನನ್ನು ಸಮಾಧಾನಮಾಡಿ ವಿದುರನು ಕೌರವನಿಗೆ ಹೇಳಿದ್ದು—

ಚೌ॥ ದ್ವಿವಿದನು ಶಿಲಾವೃಷ್ಟಿಯಿಂ ತಾ - ನಿವನ ಸೋಲಿಸದಾದನು ;।
ಕಪಿದು ಸಾಸಿರಪಾಶದಿಂ ಮುರ-ನಿವನ ಕಟ್ಟದೆ ಹೋದನು; । ಜವದಿ ಹಿಡಿಯಲು
ಬಂದ ನರಕನು - ಜವನನಗರಿಯೊಳಾದನು ; ।ಇವನ ಕೆಣಕುತ ಬದುಕಲಪ್ಪುದೆ-
ಬವಣೆಯನು ನೋಡೆಂದನು ॥

ಇದು ದುರ್ಯೋಧನನಿಗೆ ಹತ್ತಲಿಲ್ಲ.

ಕಂ ॥ ಪೊಡೆದುದು ಗರವತಿ ಕೋಪದೆ । ಪಿಡಿದುದು ಪುಲಿ; ಗಾಳಿಸೋಕಿ
ದತ್ತು; ಪಿಶಾಚಂ ॥ ತೊಡರ್ದುದು; ಭೂತಂ ಬನ್ನಂ ಬಡಿಸಿದುದೆನೆ । ಸಿರಿಯೊಳ
ರಸುಗಳ್ಮಿಯ್ಯರಿಯರ್ ॥ —(ಕಾ.ಕ)

ಟಿ॥ ಗರ = ಗ್ರಹ. ತೊಡರ್ದುದು = ಗಂಟುಬಿತ್ತು.

ಶ್ಲೋ॥ ಉಪದೇಶೋ ಹಿ ಮೂರ್ಖಾಣಾಂ ಪ್ರಕೋಪಾಯ ನ ಶಾಂತಯೇ॥
ಪಯಃಪಾನಂ ಭುಜಂಗಾನಾಂ ಕೇವಲಂ ವಿಷವರ್ಧನಮ್ ॥ —(ಸು)

ಅ॥ ಮೂರ್ಖರಿಗೆ ಬುದ್ಧಿವಾದವು ಕೋಪಕ್ಕೆ ಕಾರಣವಾಗುವದೇ ಹೊರತು ಶಾಂತಿಗಲ್ಲ. ಹಾವುಗಳಿಗೆ ಹಾಲು ಬರೀ ವಿಷವನ್ನೆ ಹೆಚ್ಚಿಸುವಂಥದ್ದಾಗುತ್ತದೆ.—

ಇಷ್ಟರಲ್ಲಿ ಒಳಗಣಿಂದ ದುಶ್ಶಾಸನ, ಶಕುನಿ, ಕರ್ಣ-ಮೊದಲಾದವರು ಹಗ್ಗಗಳೊಡನೆ ಸಭಾಸ್ಥಾನಕ್ಕೆ ಬಂದರು.

ಕಂ॥ ತುಡುಕಿದ ದ್ರೋಹಿಯನಲ್ಲದೆ । ಪಿಡಿಯದು ಘಟಸರ್ಪಮಂತುಟಲ್ಲದೆ
ಪಿರಿದುಂ ॥ ತುಡುಕದ ನಿರ್ದೋಷಿಯುಮಂ । ಪಿಡಿವುದು ಖಳಮುಖಘಟೋಗ್ರ
ಜಿಹ್ವಾಸರ್ಪಮ್ ॥ —(ಜ.ವಿ

ಅವರನ್ನು ನೋಡಿದಾಗ ಕೃಷ್ಣನ ಮುಖದಲ್ಲಿ ಯಾವ ವಿಕಾರವೂ ಆಗಲಿಲ್ಲ.

ಶ್ಲೋ ॥ ಅಕ್ಷೋಭ್ಯತ್ವೈವ ಮಹತಾಂ ಮಹತ್ತ್ವಸ್ಯ ಹಿ ಲಕ್ಷಣಮ್ ।
—(ಕ.ಸ.ಸಾ)

ಅ॥ ವಿಕಾರವನ್ನು ಪಡೆಯದಿರುವದೇ ಮಹಾತ್ಮರ ಮಹತ್ತ್ವದ ಲಕ್ಷಣ.

ಹರಿದ್ವೇಷದ ಪರಿಣಾಮ ಒಳ್ಳೆಯದಾದೀತೆ ?—

ಶ್ಲೋ ॥ ಮತ್ತಃ ಸನ್ಯೋ ಹರಿಂ ದ್ವೇಷ್ಟಿ ಮಹಿಷಃ ಸ ಹಿ ಪೂರುಷಃ ।
ಸ ನಾಮ ನೈವ ಕಾಲೇನಾಧಿಷ್ಠಿತಃ ಕಥಮುಚ್ಯತಾಮ್ ? ॥ —(ಸು.ಲಾ)

ಅ॥ (೧) ಯಾವನು ಮತ್ತನಾಗಿ ಹರಿಯ (ಸಿಂಹದ) ದ್ವೇಷವನ್ನು ಮಾಡುತ್ತಾನೊ ಅವನು ಕೋಣನೇ ಸರಿ. ಅವನಮೇಲೆ ಯಮನು ಕುಳಿತಿಲ್ಲವೆಂದು ಯಾರು ಹೇಳುವರು ?

ಟಿ॥ ಸಿಂಹವನ್ನು ದ್ವೇಷಿಸುವ ಕೋಣವು ಸಾಯುವದೇ ಸಿದ್ಧ

ಆಗ ಏನಾಯಿತೆಂದರೆ—

ಕೀ ॥ ಒಬ್ಬನೆಂದು ತಿಳಿದೆಯ? ಎನ್ನನೆನು । ತ್ತುಬ್ಬಿ ಕೃಷ್ಣ ಕೇಕೆಯ
ಹಾಕೆ ॥ ಅಬ್ಬರಿಸುವ ಕೃಷ್ಣರನೇಕರು ಬಹು । ನಿರ್ಭರದೊಳಗೆಂದರು ಜೋಕೆ ॥

ಆಗ ಎಲ್ಲೆಲ್ಲಿಯೂ ಕೃಷ್ಣನನ್ನು ಹಿಡಿಯುವ ಸನ್ನಾಹವು ನಡೆದಿದೆ—

ಆನಂದಭೈರವಿ—ಛಾಪು

ಹಿಡಕೋ ಬಿಡಬೇಡ; । ರಂಗಯ್ಯನ। ಹಿಡಕೋ ಬಿಡಬೇಡ॥ಪ॥ ಹಿಡಕೊ ಬಿಡಬೇಡ ಕೆಡುಕ ಕಾಲಿಂಗನ । ತುಡುಕಿತುಡುಕಿ ಮಡು ಕಲಕಿದ ಕೃಷ್ಣನ ॥ಅ.ಪ॥ ಮಕ್ಕಳೊಳಗೆ ಲಂಡ ಮನೆಮನೆಗಳ ಹೊಕ್ಕು । ಸಕ್ಕರೆ ನೊರೆಹಾಲು ತಿಂದವನ ॥ ಸಿಕ್ಕದೆ ಮೇಲಿಟ್ಟ ಬೆಣ್ಣೆಯ ತಾ ಮೆದ್ದು । ಸಿಕ್ಕಿಸಿಕ್ಕದಂತೆ ಓಡಿದ ಕೃಷ್ಣನ ॥೧॥ ಕಾಳರಕ್ಕಸನೊಳು ಕದನ ಬೇಡೆಂದರೆ । ಹೇಳಿದಮಾತನು ಕೇಳದನಾ ॥ ಖೂಳ ರಕ್ಕಸನೊಡನೇರಿ ಮೇಲಕೆ ಬೇಗ । ಗಾಳಿಯ ಮುರಿದಿಟ್ಟ ಗಯ್ಯಾಳಿ ಕೃಷ್ಣನ ॥೨॥ ಆನೆಯ ಕೆಡಹಿದ ಅಗಸನ ಮಡುಹಿದ । ಸತ್ರಾಜಿತ್ತಗೆ ವರವಿತ್ತನ ॥ ಅತ್ರಿ ಮುನೀಶ್ವರನಾರ್ತಿಯಿಂ ಸಲಹಿದ । ಸತ್ಯಭಾಮೆಯ ಕಾಂತ ನಿತ್ಯವಿನೋದನ ॥೩॥ ಜೇರಿಗೆಬೆಲ್ಲವ ಪಿಡಿದು ಅಂಬಿಕೆಯೊಳು । ಸ್ವಾರಿಬರುವ ರುಕ್ಮಿಣಿಯ ಕಂಡು । ಓಡಿ ಹೋಗಿ ಬೇಗ ಆ ರುಕುಮಯ್ಯನ । ತೇರಿಗೆ ಕಟ್ಟಿದ ಜಾರಕನಾ ॥೪॥ —(ದಾ)

ಆಗ—

ಶ್ಲೋ ॥ ಶ್ರುತ್ವಾ ತತ್ಕುಪಿತೋ ಹರಿಃ ಸ್ವಯಮಸಾವೇಕೋಽಪಿ ಸರ್ವಾತ್ಮಕ । ಸ್ತಾರಾಭಿರ್ನವಭಿರ್ಗ್ರಹೈರ್ನಿಬಿಡತಾಂ ಶೈಲೈರ್ವನೈಸ್ಸಾಗರೈಃ । ಪೇಟ್ಯಾಂ ಭೂಷಣಮಂಜರೀಮಿವ ಧೃತಾಂ ಕುಕ್ಷೌ ಜಗನ್ಮಂಡಲಮ್। ಜಂಘಾಲಾಮತನೋತ್ರಭಾಜಿರಜುಷಾಂ ದೃಕ್ಪಙ್ಕ್ತಿಘಂಟಾಪಥೇ ॥ —(ಸು)

ಅ॥ ಅದನ್ನು ಕೇಳಿ ಕೋಪಗೊಂಡ ಹರಿಯು ತಾನೊಬ್ಬನೇ ಆದರೂ ಸರ್ವಾತ್ಮಕನಾದ ಅವನು ಪೆಟ್ಟಿಗೆಯಲ್ಲಿ ಆನೇಕಾಭರಣಗಳು ಹೇಗೋ ಹಾಗೆ ತನ್ನ ಹೊಟ್ಟೆಯಲ್ಲಿ ನಕ್ಷತ್ರಗಳಿಂದಲೂ